ಸಂಪುಟ: ೦೬/ ಸಂಚಿಕೆ: ೨೬೯/ಮಂಗಳವಾರ ದಿನಾಂಕ : ೨೩-೧೨-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 269/ TUESDAY Date : 23-12-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ರೂ. 9,823 ಕೋಟಿ ಹೂಡಿಕೆಯ ಯೋಜನೆಗಳಿಗೆ ಮುಖ್ಯಮಂತ್ರಿ ಅಸ್ತು

# ರಾಜ್ಯದಲ್ಲಿ 5,605 ಉದ್ಯೋಗ ಸೃಷ್ಟಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಇಲ್ಲಿ ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ 64ನೇ ಸಭೆ ಒಟ್ಟು ರೂ.9,823.31 ಕೋಟಿ ಬಂಡವಾಳ ಹೂಡಿಕೆಯ ಒಂಬತ್ತು ಯೋಜನೆಗಳಿಗೆ ಹಸಿರು ನಿಶಾನೆ ತೋರಿದೆ. ಇದರಿಂದ 5,605 ಉದ್ಯೋಗಗಳು ಸೃಷ್ಟಿಯಾಗಲಿವೆ.

**ಸೆಮಿಕಂಡಕ್ಟರ್ ವಲಯದಲ್ಲಿ ಹೆಚ್ಚು ಹೂಡಿಕೆ:** ಅನುಮೋದನೆ ಪಡೆದ ಯೋಜನೆಗಳಲ್ಲಿ ಡಿ.ಎನ್.ಸೊಲ್ಯೂಷನ್ಸ್‌ನ ರೂ.998 ಕೋಟಿ (ಐಟಿಐಆರ್, ದೇವನಹಳ್ಳಿ), ಸೈಲೆಕ್ಟ್ರಿಕ್ ಸೆಮಿಕಂಡಕ್ಟರ್ಸ್ ಮ್ಯಾನುಫ್ಯಾಕ್ಚರಿಂಗ್ ರೂ.3,425.60 ಕೋಟಿ (ಕೋಚನಹಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು) ಮತ್ತು ಸನ್ಸೆರಾ ಇಂಜಿನಿಯರಿಂಗ್ ಸಂಸ್ಥೆಯ ರೂ.2150 ಕೋಟಿ (ಹಾರೋಹಳ್ಳಿ) ಹೂಡಿಕೆ ಯೋಜನೆಗಳು ಹೊಸದಾಗಿವೆ. ಇವುಗಳಿಂದ ಕ್ರಮವಾಗಿ 467, 460 ಮತ್ತು 3,500 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.



ಮಿಕ್ಕಂತೆ, 6 ಯೋಜನೆಗಳು ಹೆಚ್ಚುವರಿ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಾಗಿವೆ. ಇವುಗಳಲ್ಲಿ ಮುಸಾಶಿ ಆಟೋ ಪಾರ್ಟ್ಸ್ (ದೊಡ್ಡಬಳ್ಳಾಪುರ) ರೂ.122.66 ಕೋಟಿ, ಜೆಎಸ್ ಡಬ್ಲ್ಯು ಸಿಮೆಂಟ್ (ತೋರಣಗಲ್, ಬಳ್ಳಾರಿ) ರೂ.486.82 ಕೋಟಿ, ನೈಡೆಕ್ ಇಂಡಸ್ಟ್ರಿಯಲ್ ಆಟೋಮೇಷನ್ (ಬೇಲೂರು, ಧಾರವಾಡ) ರೂ. 200 ಕೋಟಿ, ಎಪ್ಸಿಲಾನ್ ಕಾರ್ಬನ್ (ಸಂಡೂರು) ರೂ.740 ಕೋಟಿ, ಕೆ.ಬಿ.ಸ್ಟೀಲ್ಸ್ (ಹೊಸಪೇಟೆ, ವಿಜಯನಗರ) ರೂ. 852.49 ಕೋಟಿ ಮತ್ತು ಸಿಫಿ ಡೇಟಾ ಮ್ಯಾನೇಜ್ಡ್ ಸರ್ವೀಸಸ್ (ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್) ರೂ.847.74 ಕೋಟಿ ಹಣವನ್ನು ರಾಜ್ಯದಲ್ಲಿ ಹೆಚ್ಚುವರಿಯಾಗಿ ಹೂಡಿಕೆ ಮಾಡಲಿವೆ. ಇವುಗಳಿಂದ ಕ್ರಮವಾಗಿ ಮೊದಲ ನಾಲ್ಕು ಕಂಪನಿಗಳಲ್ಲಿ ಮಾತ್ರ 478, 225, 150 ಮತ್ತು 325 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ವಿವರಿಸಿದ್ದಾರೆ.

**ಕೈಗಾರಿಕೆ ಆರಂಭಿಸದಿದ್ದರೆ ಕ್ರಮ:** ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಸೆಮಿಕಂಡಕ್ಟರ್ ವಲಯದ ಪ್ರಥಮ ಯೋಜನೆಯು ಮೈಸೂರಿನ ಬಳಿಕ ಕೋಚನಹಳ್ಳಿಯ ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್‌ನಲ್ಲಿ ಅಸ್ತಿತ್ವಕ್ಕೆ ಬರಲಿದೆ. ಕೆಐಎಡಿಬಿಯಿಂದ ಜಮೀನು ಪಡೆದುಕೊಳ್ಳುವ ಉದ್ಯಮಿಗಳು/ ಕಂಪನಿಗಳು ನಿಗದಿತ ಸಮಯದಲ್ಲಿ ಕೈಗಾರಿಕೆಯನ್ನು ಆರಂಭಿಸಬೇಕು. ಇಲ್ಲದಿದ್ದರೆ ದಂಡ ವಿಧಿಸುವುದು ಸೇರಿದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

**ಸಕ್ಕರೆ ಕಾರ್ಖಾನೆಗಳ ಉತ್ಪನ್ನಗಳಲ್ಲಿ ರೈತರಿಗೆ ಲಾಭಾಂಶ:** ಸಕ್ಕರೆ ಕಾರ್ಖಾನೆಗಳು ಉಪ ಉತ್ಪನ್ನಗಳ ಉತ್ಪಾದನೆಯಲ್ಲೂ ರೈತರಿಗೆ ಲಾಭಾಂಶದ ಪಾಲು ನೀಡುವ ಕುರಿತು ಪರಿಶೀಲಿಸಲಾಗುವುದು. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಈ ಸಂಬಂಧ ಅನುಸರಿಸುತ್ತಿರುವ ನಿಯಮಗಳನ್ನು ಅಧಿಕಾರಿಗಳು ನೋಡಬೇಕು. ಒಟ್ಟಿನಲ್ಲಿ ಕೈಗಾರಿಕೆಗಳು ಸರ್ಕಾರದ ನಿಯಮಗಳಿಗೆ ತಕ್ಕಂತೆಯೇ ಕಾರ್ಯ ನಿರ್ವಹಿಸುವುದನ್ನು ಖಾತ್ರಿಪಡಿಸಿಕೊಳ್ಳಲಾಗುವುದು ಎಂದು ಸಿಎಂ ವಿವರಿಸಿದ್ದಾರೆ. ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಗಾಂಧೀಜಿಯವರ ತತ್ವ-ಆದರ್ಶಗಳನ್ನು ಅರಿತು ರಾಷ್ಟ್ರಪ್ರೇಮ ಬೆಳಸಿಕೊಳ್ಳಬೇಕು: ಸಚಿವ ಎಚ್.ಕೆ ಪಾಟೀಲ



ಬೆಳಗಾವಿ, : ಮಹಾತ್ಮಾ ಗಾಂಧೀಜಿಯವರು ಕೇವಲ ರಾಜಕಾರಣ, ಸ್ವಾತಂತ್ರ್ಯ ಪಡೆಯುವ ಗುರಿ ಮಾತ್ರ ಹೊಂದಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧೀಜೀವರು ಅಸ್ಪೃಶ್ಯತೆ ವಿರುದ್ಧ ಕರೆ ನೀಡಿದ್ದರು. ಇಂದಿನ ಪೀಳಿಗೆ ಅವರ ತತ್ವ ಆದರ್ಶಗಳನ್ನು ಅರಿತುಕೊಂಡು ಭವ್ಯ ಭಾರತ ನಿರ್ಮಾಣಕ್ಕೆ ಮತ್ತು ಬಲಿಷ್ಠ ರಾಷ್ಟ್ರವನ್ನು ಕಟ್ಟಲು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳ, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ ಪಾಟೀಲ ಅವರು ತಿಳಿಸಿದರು.

ಮಹಾತ್ಮಾ ಗಾಂಧಿಯವರ ಅಧ್ಯಕತೆಯ ರಾಷ್ಟೀಯ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ (1924-2024) ಅಂಗವಾಗಿ ಸಾಂಸ್ಕೃತಿಕ ಸಂಘಟನೆ ಭಾಗವತರು, ರಂಗಸೃಷ್ಟಿ ಸಹಯೋಗದಲ್ಲಿ ನೆಹರು ನಗರದ ಕನ್ನಡ ಭವನದಲ್ಲಿ ರವಿವಾರ (ಡಿ.22) ಆಯೋಜಿಸಲಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ರಾಷ್ಟೀಯ ಚಳುವಳಿಯ ಸಂದರ್ಭದಲ್ಲಿ ಭ್ರಾತೃಭಾವನೆ ಬೆಳೆಸಿ ಸರ್ವ ಧರ್ಮದವರನ್ನು ಒಗ್ಗೂಡಿಸಿ ಚಳುವಳಿಯಲ್ಲಿ ಪಾಲ್ಗೊಂಡವರು. ಗಾಂಧೀಜಿಯವರ ಚರಕ ಸ್ವಾವಲಂಬಿ ಚಿಹ್ನೆಯಾಗಿದೆ. ದೇಶದ ಸ್ಥಳೀಯ ಉತ್ಪನ್ನಗಳಿಗೆ ಗಾಂಧೀಜಿಯವರು ಪ್ರಾಮುಖ್ಯತೆ ನೀಡುತ್ತಿದ್ದರು. 1924ರ ಅಧಿವೇಶನ ಬೆಳಗಾವಿಯಲ್ಲಿ ನಡೆಸಿ, ಕರ್ನಾಟಕದ ಏಕೀಕರಣ ಪ್ರಸ್ತಾಪ ಅಧಿವೇಶನದಲ್ಲಿ ತಂದರು ಎಂದು ತಿಳಿಸಿದರು.

ಕಾಂಗ್ರೆಸ್ ಅಧಿವೇಶನದಲ್ಲಿ "ಉದಯವಾಗಲಿ ನಮ್ಮ ಚೆಲವು ಕನ್ನಡ ನಾಡು" ಗೀತೆ ಕೇಳಿ ಗಾಂಧೀಜೀಯವರು ಬೆರಗಾದರು. ಕನ್ನಡ ಮನಸ್ಸುಗಳನ್ನು ಒಗ್ಗೂಡಿಸುವಲ್ಲಿ ಈ ಗೀತೆ ಪ್ರಮುಖವಾಗಿದೆ ಎಂದರು.

ಈ ವರ್ಷ "ಗಾಂಧಿ ಭಾರತ" ಎಂದು ಸರ್ಕಾರ ನಾಮಕರಣ ಮಾಡಿ ಗಾಂಧೀಜಿಯವರ ತತ್ವ ಸಿದ್ಧಾಂತಗಳನ್ನು ಯುವ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನಲ್ಲಿ ಆಯೋಜನೆ ಮಾಡಲಿದೆ.

ಶತಮಾನೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರ ಗಂಗಾಧರರಾವ್ ದೇಶಪಾಂಡೆ ಸ್ಮಾರಕ ಭವನ ಹಾಗೂ ಸುವರ್ಣ ವಿಧಾನ ಸೌಧದದ ಆವರಣದಲ್ಲಿ ಮಹಾತ್ಮಾ ಗಾಂಧಿಯವರ ಪುತ್ಥಳಿ ಅನಾವರಣ ಮಾಡಲಿದ್ದೇವೆ ಎಂದು ಸಚಿವ ಎಚ್.ಕೆ ಪಾಟೀಲ ಹೇಳಿದರು.

ಹಿರಿಯ ಸಾಹಿತಿಗಳಾದ ಡಾ. ರಾಮಕೃಷ್ಣ ಮರಾಠೆ ಪ್ರಾಸ್ತಾವಿಕವಾಗಿ ಮಾತನಾಡಿ, 1924ರ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿ ವಿಶೇಷವಾಗಿ ಸಜ್ಜಾಗಿದೆ. ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಏಕೈಕ ಅಧಿವೇಶನ ಇದಾಗಿದೆ ಎಂದು ತಿಳಿಸಿದರು.

ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಪೀಠಾಧಿಕಾರಿಗಳಾದ ಡಾ.ಅಲ್ಲಮಪ್ರಭು ಸ್ವಾಮೀಜಿ, ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ, ಭಾಗವತರು ಅಧ್ಯಕ್ಷ ಕೆ.ರೇವಣ್ಣ,

ಹಿರಿಯ ಸಾಹಿತಿ ಡಾ. ಸರಜೂ ಕಾಟ್ಕರ, ಸಾಹಿತಿ ಶಿರೀಶ್ ಜೋಶಿ, ರಂಗಸೃಷ್ಟಿ ಅಧ್ಯಕ್ಷ ರಮೇಶ್ ಜಂಗಲ, ಪತ್ರಕರ್ತ ಎಂ.ಕೆ ಹೆಗಡೆ, ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಿವಲಿಂಗ ಪ್ರಸಾದ ನಿರೂಪಿಸಿದರು. ಶ **ಕೃತಿ ಬಿಡುಗಡೆ:** ಸಚಿವ ಎಚ್.ಕೆ ಪಾಟೀಲ ಅವರು ಹಿರಿಯ ಸಾಹಿತಿ ಡಾ. ಸರಜೂ ಕಾಟ್ಕರ ಅವರು ರಚಿಸಿರುವ "ರಂಗಭೂಮಿಯ ಸ್ವಾತಂತ್ರ್ಯ ಸಂಗ್ರಾಮ" ಪುಸ್ತಕ ಬಿಡುಗಡೆ ಮಾಡಿದರು.

ಬಳಿಕ ಹಚ್ಚೇವು ಕನ್ನಡದ ದೀಪ, ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಹಾಗೂ ದೇಶ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಲಾಯಿತು. ತದನಂತರ ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ, ಗಾಯನ, ರಂಗಗೌರವ, ನಾಟಕ ಪ್ರದರ್ಶಗೊಂಡವು.

### ಡಿ.೨೬ ರಂದು ವಸ್ತು ಪ್ರದರ್ಶನ -ಮಾರಾಟ ಮೇಳದ ಉದ್ಘಾಟನಾ ಸಮಾರಂಭ

ಬೆಳಗಾವಿ : ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಮತ್ತು ಮಹಾನಗರ ಪಾಲಿಕೆ ಇವುಗಳ ಸಹಯೋಗದಲ್ಲಿ ಡಿ.26 ರಂದು ಬೆಳಗ್ಗೆ 10.30 ಗಂಟೆಗೆ ಸರ್ದಾರ್ ಹೈಸ್ಕೂಲ್ ಮೈದಾನದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳ ಉದ್ಘಾಟನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮಹಿಳಾ ಸ್ವ-ಸಹಾಯ ಸಂಘಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಉದ್ಘಾಟಿಸುವರು. ಉಪ ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಹಾಗೂ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ ಅವರು ಮುಖ್ಯ ಅತಿಥಿಗಳಾಗಿ ಆಗಮಿಸವರು. ಶಾಸಕರಾದ ಆಸೀಫ್ (ರಾಜು) ಸೇಠ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ನವದೆಹಲಿ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ವಾಯವ್ಯ ಸಾರಿಗೆ ನಿಗಮದ ಅಧ್ಯಕ್ಷರಾದ ಭರಮಗೌಡ ಕಾಗೆ ಹಾಗೂ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರು ವಿಶೇಷ ಆಮಂತ್ರಿತರಾಗಿ ಆಗಮಿಸುವರು.

ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭೆ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಗದೀಶ ಶೆಟ್ಟರ ಹಾಗೂ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸುವರು.

# ಬೆಳಗಾವಿ ಅಧಿವೇಶನದ ಶತಮಾನೋತ್ಸವ

## ದೇಶದ ಇತಿಹಾಸವನ್ನು ಸಂಭ್ರಮಿಸುವ ಕಾರ್ಯಕ್ರಮ : ಡಿ.ಕೆ.ಶಿವಕುಮಾರ್

ಬೆಳಗಾವಿ : ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ಐತಿಹಾಸಿಕ ಕಾರ್ಯಕ್ರಮ. ದೇಶದ ಇತಿಹಾಸವನ್ನು ಸಂಭ್ರಮಿಸುವ ಕಾರ್ಯಕ್ರಮ. ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸೋಮವಾರ ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 1924ರಲ್ಲಿ ಮಹಾತ್ಮ ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದಾಗ ಜವಾಹರ್ ಲಾಲ್ ನೆಹರು ಹಾಗೂ ಕರ್ನಾಟಕದ ಗಂಗಾಧರ ದೇಶಪಾಂಡೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಅವರಿಬ್ಬರು ಸೇರಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಿ ಕಾಂಗ್ರೆಸ್ ಅಧ್ಯಕ್ಷರಾಗುವಂತೆ ಮಾಡಿದರು ಎಂದು ತಿಳಿಸಿದರು.

ಇಲ್ಲಿಂದ ಗಾಂಧಿ ಅವರು ದೇಶದ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದರು. 2023ರ ಚುನಾವಣೆ ಸಮಯದಲ್ಲಿ ಇದೇ ಜಾಗದಿಂದ ಪ್ರಜಾಧ್ವನಿ ಯಾತ್ರೆ ಆರಂಭಿಸಿ ನಮ್ಮ ಹೋರಾಟ ಮಾಡಿದೆವು. ನಂತರ ರಾಜ್ಯದಲ್ಲಿ 136 ಕ್ಷೇತ್ರಗಳನ್ನು ಗೆದ್ದು ಸುಭದ್ರ ಸರಕಾರ



ಸ್ಥಾಪಿಸಿದೆವು ಎಂದು ಶಿವಕುಮಾರ್ ಹೇಳಿದರು.

ಮತ್ತೆ ಇದೇ ಭೂಮಿಯಿಂದ ದೇಶ ಹಾಗೂ ರಾಜ್ಯವನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂದು ತೀರ್ಮಾನ ಮಾಡಲು ಈ ಕಾರ್ಯಕ್ರಮ ಮಾಡಲಾಗುತ್ತಿದೆ. ಈಗಿನ ಕಾಲಘಟ್ಟದಲ್ಲಿ ದೇಶ ಹಾಗೂ ರಾಜ್ಯ ಎದುರಿಸುತ್ತಿರುವ ಸವಾಲುಗಳನ್ನು ಚರ್ಚಿಸಿ ಯಾವ ರೀತಿ ಹೋರಾಟ ಮಾಡಬೇಕು ಎಂಬುದನ್ನು ದೇಶದ ಎಲ್ಲ ಪ್ರಮುಖ ನಾಯಕರು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಿದ್ದಾರೆ ಎಂದು ಅವರು ತಿಳಿಸಿದರು.

ಸುವರ್ಣ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಎಲ್ಲ ಪಕ್ಷಗಳಿಗೂ ಆಹ್ವಾನ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ವಿರೋಧ ಪಕ್ಷಗಳ ನಾಯಕರು, ಸಂಸದರು, ವಿಧಾನಸಭೆ ಸ್ಪೀಕರ್, ವಿಧಾನಪರಿಷತ್ ಸಭಾಪತಿ, ಎಲ್ಲ ಪಕ್ಷಗಳ ಶಾಸಕರು ಹಾಗೂ ಪರಿಷತ್ ಸದಸ್ಯರು ಸೇರಿ ಎಲ್ಲ ಪಕ್ಷಗಳಿಗೂ ಆಹ್ವಾನ ನೀಡಲಾಗುವುದು ಎಂದು ಹೇಳಿದರು.

ಇದು ಸಂಪೂರ್ಣ ಸರಕಾರಿ ಕಾರ್ಯಕ್ರಮ. ಭದ್ರತಾ ದೃಷ್ಟಿಯಿಂದ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಆಹ್ವಾನ ಇರುವುದಿಲ್ಲ. ಬೆಳಗಾವಿಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಇತರೆ ವಿಶೇಷ ಅತಿಥಿಗಳಿಗೆ ಆಹ್ವಾನ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ತಿಳಿಸಿದರು.

ದೇಶದಾದ್ಯಂತ ಎಷ್ಟು ಜನ ಕಾಂಗ್ರೆಸ್ ನಾಯಕರು ಆಗಮಿಸುತ್ತಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ದೇಶಾದ್ಯಂತ ಕಾಂಗ್ರೆಸ್ ಪಕ್ಷದ ಪ್ರಮುಖ 500ರಿಂದ 600 ಜನ ನಾಯಕರು ಮಾತ್ರ ಆಗಮಿಸುತ್ತಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಎಲ್ಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಎಲ್ಲ ರಾಜ್ಯಗಳ ಶಾಸಕಾಂಗ ಪಕ್ಷದ ನಾಯಕರು, ಸಂಸದರು ಆಗಮಿಸಲಿದ್ದಾರೆ. ಇವರೆಲ್ಲರೂ ಸಾರ್ವಜನಿಕ ಸಮಾವೇಶದಲ್ಲಿ ಭಾಗವಹಿಸಲಿದ್ದು, ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಮಿತಿಯ ಸದಸ್ಯರು ಮಾತ್ರ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

## ಕ್ರಿಸ್ಮಸ್- ಹೊಸ ವರ್ಷಾಚರಣೆ ವೇಳೆ ಅಹಿತಕರ ಘಟನೆ ನಡೆದರೆ ಡಿಸಿಪಿಗಳೇ ಹೊಣೆ: ಗೃಹ ಸಚಿವ ಪರಮೇಶ್ವರ್ ಎಚ್ಚರಿಕೆ



ಬೆಂಗಳೂರು: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಈ ವೇಳೆ ಅಹಿತಕರ ಘಟನೆಗಳು ಸಂಭವಿಸಿದರೆ ಆಯಕಟ್ಟಿನ ಡಿಸಿಪಿಗಳೇ ಹೊಣೆಗಾರರು ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಮುಂಬರುವ ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಎಸಿಪಿ ಮೇಲ್ಪಟ್ಟ ಅಧಿಕಾರಿಗಳೊಂದಿಗೆ ಇಂದು ನಗರ ಪೊಲೀಸ್ ಆಯುಕ್ತ ಕಚೇರಿಯಲ್ಲಿ ಸಭೆ ನಡೆಸಿ ಅವರು ಮಾತನಾಡಿದರು.

ಪ್ರತಿವರ್ಷದಂತೆ ಈ ಬಾರಿಯೂ ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗುವುದು. ಸಾರ್ವಜನಿಕರು ಸಂತೋಷದಿಂದ ಹೊಸ ವರ್ಷ ಆಚರಿಸಬೇಕು. ಇದು ಅವರ ಪಾಲಿಗೆ ದುಃಖದ ದಿನವಾಗಬಾರದು. ಈ ದಿಸೆಯಲ್ಲಿ ಕಾನೂನು ಸುವ್ಯವಸ್ಥೆ, ಸಂಚಾರ ದಟ್ಟಣೆ ಹೇಗೆ ನಿಭಾಯಿಸಬೇಕು ಹಾಗೂ ಮಾದಕವಸ್ತು ಮಾರಾಟ, ಸರಬರಾಜು ಹೇಗೆ ಹತ್ತಿಕ್ಕಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಆದಾಗ್ಯೂ ಅಹಿತಕರ ಘಟನೆ ನಡೆದರೆ ಆಯಾ ವಿಭಾಗದ ಡಿಸಿಪಿಯೇ ಜವಾಬ್ದಾರರು ಎಂದು ಸಚಿವರು ಎಚ್ಚರಿಸಿದ್ದಾರೆ.

ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆಯನ್ನು ಜನರು ಸಂತೋಷದಿಂದ ಆಚರಿಸಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಲಾಗುವುದು. ಬೆಂಗಳೂರಿಗೆ ಬರಲು ಯಾರೂ ಭಯಪಡದಂತೆ ಆಚರಿಸುವ ರೀತಿ ವಾತಾವರಣ ನಿರ್ಮಿಸಬೇಕು ಎಂದರು.

ಆಚರಣೆಗೆ ನಿರ್ಬಂಧವಿಲ್ಲ: ಹೊಸ ವರ್ಷ ದಿನದಂದು ಹೆಚ್ಚು ಜನ ಸೇರುವ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್‌ನಲ್ಲಿ ಸಾರ್ವಜನಿಕರಿಗೆ ನಿರ್ಬಂಧ ವಿಧಿಸಿಲ್ಲ. ಬದಲಾಗಿ ಜನರನ್ನು ಒಂದು ಕಡೆ ಬಂದು ಇನ್ನೊಂದು ಬದಿಯಲ್ಲಿ ಹೋಗುವ ಹಾಗೆ ಮಾಡಲಾಗಿದೆ. ಸುಮಾರು 7 ಲಕ್ಷ ಜನರು ಬರುವ ಸಾಧ್ಯತೆಯಿದೆ ಎಂದು ಹೇಳಿದರು.

**ಪೊಲೀಸರಿಗೆ ರಜೆ ಕೊಡಬೇಡಿ:** ಕ್ರಿಸ್‌ಮಸ್ ಆಚರಣೆ ಹಿನ್ನೆಲೆಯಲ್ಲಿ ಗುಪ್ತದಳ ಇಲಾಖೆಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಬೇಕು. ಮಹಿಳಾ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಸಣ್ಣ ಪುಟ್ಟ ಅನಾಹುತಗಳೂ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕಿದೆ. ಹೊಸ ವರ್ಷ ಆಚರಿಸುವವರಿಗೆ ಆಡಚಣೆ ಮಾಡುವುದು ಬೇಡ. ಅವರಿಗೆ ಸುರಕ್ಷತೆ ನೀಡಬೇಕು. ತೊಂದರೆ ಉಂಟು ಮಾಡುವ ಕಿಡಿಗೇಡಿಗಳ ಮೇಲೆ ನಿಗಾವಹಿಸಿ ಕ್ರಮ ಜರುಗಿಸಬೇಕು. ಅಗತ್ಯ ಬಂದೋಬಸ್ತ್ ಹಿನ್ನೆಲೆಯಲ್ಲಿ ನಗರದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ರಜೆ ನೀಡಬಾರದು. ತೀರ ಅಗತ್ಯತೆ ಮತ್ತು ಅನಿವಾರ್ಯತೆ ಇದ್ದವರಿಗೆ ರಜೆ ನೀಡುವಂತೆ ಸಚಿವರು ತಾಕೀತು ಮಾಡಿದರು.

## ಪರಿಸರ ಜಾಗೃತಿಗೆ ಮುಂದಾಗಬೇಕಿದೆ-ರಂಭಾಪುರಿ ಜಗದ್ಗುರುಗಳು



**ಬಸವನಬಾಗೇವಾಡಿ,** ಇಂದು ಪರಿಸರ ತುಂಬಾ ಮಾಲಿನ್ಯಗೊಳ್ಳುತ್ತಿದೆ. ಹೀಗೆ ಮನುಷ್ಯರು ಪರಿಸರವನ್ನು ನಿರ್ಲಕ್ಷ್ಯ ಮಾಡಿದರೆ ಮನುಕುಲಕ್ಕೆ ಅಗತ್ಯವಿರುವಷ್ಟು ಆಮ್ಲಜನಕ ಸಿಗದೇ ಉಸಿರಾಟಕ್ಕೆ ತೊಂದರೆಯಾಗಿ ಭಯಾನಕ ಕಾಯಿಲೆ, ಅಕಾಲಿಕ ಮರಣ ಬರುವ ಕಾಲ ದೂರವಿಲ್ಲ. ಇದರಿಂದಾಗಿ ಪ್ರತಿಯೊಬ್ಬರೂ ಪರಿಸರ ಜಾಗೃತಿ ಮೂಡಿಸುವ ಜೊತೆಗೆ ಪ್ರತಿಯೊಂದು ಮನೆಯ ಮುಂದೆ ಸಸಿ ನೆಟ್ಟು ಪೋಷಿಸುವದು ತುಂಬಾ ಅಗತ್ಯವಿದೆ ಎಂದು ರಂಭಾಪುರಿ ಪೀಠದ ಜಗದ್ಗುರು ಡಾ.ವೀರಸೋಮೇಶ್ವರ ರಾಜದೇಶೀಕೇಂದ್ರ ಭಗವತ್ಪಾದರರು ಹೇಳಿದರು.

ಪಟ್ಟಣದ ನಂದಿ ಬಡಾವಣೆಯಲ್ಲಿ ತಾಲೂಕಿನ ನಾಗೂರ ಗ್ರಾಮದ ಶರಣಯ್ಯ ಶೀಕಳವಾಡಿಮಠ ಅವರು ನಿರ್ಮಿಸಿದ ಗೃಹ ಪ್ರವೇಶದಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಅವರು, ಶರಣಯ್ಯ ಶೀಕಳವಾಡಿಮಠ ಅವರು ತಮ್ಮ ಗೃಹ ಪ್ರವೇಶದಂಗವಾಗಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವದು ಶ್ಲಾಘನೀಯ. ಇವರು ಸಸಿಗಳನ್ನು ಉಡುಗೊರೆಯಾಗಿ ನೀಡುತ್ತಿರುವುದು ಸಂತಸದಾಯಕ ಸಂಗತಿ ಎಂದರು.

ಸರ್ಕಾರ ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ರೈತರ ಕಲ್ಯಾಣದತ್ತ ಹೆಜ್ಜೆ ಹಾಕಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳಗಡೆ ಸಂತ್ರಸ್ಥರಿಗೆ ಪರಿಹಾರ ನೀಡುವಲ್ಲಿ ಸರ್ಕಾರ ಹಿಂದೇಟು ಹಾಕಬಾರದು. ಉತ್ತರ ಕರ್ನಾಟಕದ ಬರಡಾದ ಭೂಮಿಯನ್ನು ನೀರಾವರಿ ಮಾಡಲು ಆಲಮಟ್ಟಿ ಜಲಾಶಯದ ಎತ್ತರವನ್ನು ಎತ್ತರಿಸುವ ಕುರಿತು ಬೆಳಗಾವಿ ಅಧಿವೇಶನದಲ್ಲಿ ವಿಷಯ ಪ್ರಸ್ತಾಪವಾಗಿದೆ. ಮುಂಬರುವ ದಿನಗಳಲ್ಲಿ ಈ ಕುರಿತು ಸಚಿವ ಸಂಪುಟದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದರು.

ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಉತ್ತಮವಾದರೂ ಹಲವರನ್ನು ಆಲಸ್ಯ,ಸೋಮಾರಿಗಳನ್ನಾಗಿ ಮಾಡುತ್ತಿದೆ. ದುಡಿಯುವ ಕೈಗಳಿಗೆ ಆ ಯೋಜನೆಗಳು ಮಾರಕವಾಗಬಾರದು. ಸದಾ ದುಡಿಯುವ ಮನುಷ್ಯರು ಹಸನ್ಮುಖಿಯಾಗುವ ಜೊತೆಗೆ ಅವರು ಆರೋಗ್ಯಯುತ ಜೀವನ ಮಾಡಬಹುದು. ಕಾಯಕವೇ ಕೈಲಾಸ ಎಂಬ ತತ್ವಕ್ಕೆ ಗ್ಯಾರಂಟಿ ಯೋಜನೆ ಮಾರಕವಾಗಿದೆ ಎಂದರು.

ಈ ಸಂದರ್ಭದಲ್ಲಿ ಸ್ಥಳೀಯ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯರು, ಮನಗೂಳಿಯ ಅಭಿನವ ಸಂಗನಬಸವ ಶಿವಾಚಾರ್ಯರು, ಮುತ್ತಗಿಯ ವೀರರುದ್ರಮುನಿ ಶಿವಾಚಾರ್ಯರು, ಚಿಮ್ಮಲಗಿಯ ಸಿದ್ದರೇಣುಕ ಶಿವಾಚಾರ್ಯರು, ಸಿಂಧನೂರಿನ ಸೋಮನಾಥ ಶಿವಾಚಾರ್ಯರು, ಬೊಮ್ಮನಹಳ್ಳಿಯ ಗುರುಶಾಂತ ಶಿವಾಚಾರ್ಯರು, ತಡವಲಾಗದ ಅಭಿನಯ ರಾಚೋಟೋಶ್ವರ ಶಿವಾಚಾರ್ಯರು, ಆಲಮೇಲದ ಚಂದ್ರಶೇಖರ ಶಿವಾಚಾರ್ಯರು, ಗುಂಡಕನಾಳದ ಗುರುಲಿಂಗ ಶಿವಾಚಾರ್ಯರು, ಮುಳವಾಡದ ವಿರುಪಾಕ್ಷ ಶಿವಾಚಾರ್ಯರು, ದೇವರಹಿಪ್ಪರಗಿಯ ಶಿವಯೋಗಿ ದೇವರು, ಶರಣಯ್ಯ ಶೀಕಳವಾಡಿಮಠ, ಅವರ ಪರಿವಾರ ಸೇರಿದಂತೆ ಅನೇಕ ಗಣ್ಯರು ಇತರರು ಇದ್ದರು.ಚಿದಾನಂದ ಶಾಸ್ತ್ರೀಜಿ ನಿರೂಪಿಸಿದರು.

## ಡಿ.26 ರಿಂದ ಜ.4 ರವರೆಗೆ ಖಾದಿ ಉತ್ಸವ

ಬೆಳಗಾವಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಬೆಂಗಳೂರಿನ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ 26 ರಿಂದ 2025 ರ ಜನೇವರಿ 4 ರವರಗೆ ಬೆಳಗ್ಗೆ 10 ರಿಂದ ರಾತ್ರಿ 10 ಗಂಟೆವರೆಗೆ ನಗರದ ಸರ್ದಾರ್ ಹೈಸ್ಕೂಲ್ ಮೈದಾನದಲ್ಲಿ ರಾಜ್ಯ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದೆ. ಖಾದಿ ಉತ್ಸವದಲ್ಲಿ ಖಾದಿ ಕಸಬುದಾರರು ಹಾಗೂ ಸ್ವ-ಸಹಾಯ ಗುಂಪುಗಳಿಂದ ಮಹಿಳೆಯರು ತಯಾರಿಸಿದ ವೈವಿಧ್ಯಮಯ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳು, ಖಾದಿ, ರೇಷ್ಮೆ, ಉಣ್ಣೆ, ಪಾಲಿವಸ್ತ್ರ ಮತ್ತು ಜೀನ್ಸ್ ಬಟ್ಟೆಗಳು, ಜೂಟ್ ಮತ್ತು ಇತರೆ ಬ್ಯಾಗ್‌ಗಳು ಆಕರ್ಷಕ ಬಣ್ಣಗಳ ಹಾಗೂ ವಿನ್ಯಾಸಗಳಿಂದ ತಯಾರಿಸಿದ ಸಿದ್ಧ ಉಡುಪುಗಳು, ಗೃಹೋಪಯೋಗಿ ಸಾಮಗ್ರಿಗಳು ಶುದ್ಧ ಜೇನುತುಪ್ಪ, ಅಲಂಕಾರಿಕ ಕರಕುಶಲ ವಸ್ತುಗಳು, ಕಾಂಡಿಮೇಂಟ್ಸ್, ಪೂಜಾ ವಸ್ತುಗಳು ಹಾಗೂ ಅನೇಕ ಬಗೆಯ ವಸ್ತುಗಳು ಪ್ರದರ್ಶನದಲ್ಲಿ ಲಭ್ಯವಿರುತ್ತವೆ ಎಂದು ಖಾದಿ ಮಂಡಳಿಯ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿಜೆಪಿ ಎಂಎಲ್ಸಿ ಸಿ.ಟಿ.ರವಿ ವಿರುದ್ಧ ಕಾನೂನು ಸಮರ : ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ : ಬಿಜೆಪಿ ಎಂಎಲ್ಸಿ ಸಿ.ಟಿ.ರವಿ ನಿಂದನೆ ಮಾತುಗಳಿಂದ ತುಂಬಾ ನೊಂದಿದ್ದೇನೆ. ಸಿ.ಟಿ.ರವಿ ವಿರುದ್ಧ ಕಾನೂನು ಸಮರ ಮುಂದುವರಿಸುತ್ತೇನೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬೆಳಗಾವಿಯ ಸಿಪಿಎಡ್ ಮೈದಾನದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕಳೆದ ಎರಡು ದಿನ ಮೌನಕ್ಕೆ ಶರಣಾಗಿದ್ದೆ. ನನಗೆ ಬಹಳಷ್ಟು ನೋವಾಗಿತ್ತು. ಕಳೆದ 26 ವರ್ಷಗಳಿಂದ ಸಂಘರ್ಷದಿಂದ ಮೇಲೆ ಬಂದಿದ್ದೇನೆ. ನಾನೇನು ರೆಡ್ ಕಾರ್ಪೆಟ್ ಮೇಲೆ ಬಂದಿಲ್ಲ ಎಂದರು.

ಘಟನೆ ಬಳಿಕ ಸಿ.ಟಿ.ರವಿ ಹಾರ ತುರಾಯಿ ಹಾಕಿಸಿಕೊಂಡು ವೈಭವಿಕರಿಸಿಕೊಳ್ಳುತ್ತಿದ್ದಾರೆ.

ಅವರಿಗೆ ಅಪರಾಧಿ ಭಾವನೆ ಕಾಡುತ್ತಿದೆ. ನಾನು ಮತ್ತೆ ಸಭಾಪತಿ ಅವರಿಗೆ



ದೂರು ಕೊಡುತ್ತೇನೆ. ಸಿ.ಟಿ. ರವಿ ವಿರುದ್ಧ ಹೋರಾಟ ಮುಂದುವರಿಸುವೆ. ಪೊಲೀಸ್ ತನಿಖೆ ಬೇಗ ಆಗಬೇಕು. ಎಫ್ ಎಸ್ ಎಲ್ ವರದಿ ಬೇಗ ಬಹಿರಂಗವಾಗಬೇಕು.

ಇಂಥ ಸಂದರ್ಭದಲ್ಲೂ ಬಿಜೆಪಿಯವರು ಸಿ.ಟಿ ರವಿ ಬೆನ್ನಿಗೆ ನಿಂತಿದ್ದಾರೆ ಎಂದು ಸಚಿವರು ಕಿಡಿ ಕಾರಿದರು.

ಸಿ.ಟಿ.ರವಿ ಅವರಿಗೆ ಏನಾಗಿದೆ ಗಾಯ, ಎಷ್ಟಾಗಿದೆ ಗಾಯ. ಪೊಲೀಸರು ಎನ್ ಕೌಂಟರ್ ಮಾಡುತ್ತಿದ್ದರು, ಅಂತಾರಲ್ಲಾ, ನಾಚಿಕೆ ಆಗಲ್ವ ನಿಮಗೆ. ಇಡೀ ಕರ್ನಾಟಕದ ಜನತೆ ನಿಮಗೆ ಛೀಮಾರಿ ಹಾಕುತ್ತಿದ್ದಾರೆ. ಕಾನೂನು ಪ್ರಕಾರ ಪೊಲೀಸರು ಏನು ಮಾಡಬೇಕು ಅದನ್ನು ಮಾಡಿದ್ದಾರೆ. ಪ್ರಕರಣದ ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ. ಸಿ.ಟಿ.ರವಿ ವಿರುದ್ಧ ಪ್ರಧಾನಿ, ರಾಷ್ಟ್ರಪತಿಗೂ ಪತ್ರ ಬರೆಯುತ್ತೇನೆ, ಸಾಧ್ಯವಾದರೆ ಭೇಟಿ ಯಾಗುತ್ತೇನೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

**ಸಿ.ಟಿ ರವಿ ಆಡಿದ ಮಾತಿರುವ ವಿಡಿಯೋ ರಿಲೀಸ್ ಮಾಡಿದ ಸಚಿವರು**

ಬಿಜೆಪಿ ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ವಿರುದ್ಧ ಬಳಸಿದ ಅಶ್ಲೀಲ ಪದ ಬಳಕೆಯ ವಿಡಿಯೋವನ್ನು ಸಚಿವರು ಮಾಧ್ಯಮಗಳ ಎದುರು ಬಿಡುಗಡೆ ಮಾಡಿದರು. ಎರಡು ಪ್ರತ್ಯೇಕ ವಿಡಿಯೋಗಳನ್ನು ಸಚಿವರು ರಿಲೀಸ್ ಮಾಡಿದರು. ಒಂದು ವಿಡಿಯೋದಲ್ಲಿ ಸಿ.ಟಿ. ರವಿ ಸಚಿವರಿಗೆ ಆಕ್ಷೇಪಾರ್ಹ ಪದ ಬಳಸಿದ್ದರೆ, ಮತ್ತೊಂದು ವಿಡಿಯೋದಲ್ಲಿ ರಾಹುಲ್ ಗಾಂಧಿಗೆ ಡ್ರಗ್ ಅಡಿಟ್ ಅಂದಿದ್ದ ವಿಡಿಯೋವನ್ನು ಸಚಿವರು ಬಿಡುಗಡೆ ಮಾಡಿದರು.

**ಸಿಎಂ, ಡಿಸಿಎಂ ಸೇರಿದಂತೆ ಪಕ್ಷದ ನಾಯಕರಿಂದ ಧೈರ್ಯ**

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ಹಲವು ನಾಯಕರು ನನಗೆ ಧೈರ್ಯ ತುಂಬಿದರು ಎಂದರು.

ಸಿ.ಟಿ.ರವಿ ಬೆಳಗಾವಿ ಚಲೋ ಮಾಡುವ ಬಗ್ಗೆ ಕೇಳಿದಾಗ, ಬೆಳಗಾವಿ ಶಾಂತಿಯ ತೋಟ. ನಾಲಿಗೆಯನ್ನು ಸ್ವಚ್ಛವಾಗಿಟ್ಟುಕೊಂಡು ಇಲ್ಲಿಗೆ ಯಾರು ಬೇಕಾದರೂ ಬರಬಹುದು. ಅಂತಹ ವ್ಯಕ್ತಿಗಳಿಗೆ ತುಂಬು ಹೃದಯದ ಸ್ವಾಗತ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

# ಪಾಲಕರ- ಶಿಕ್ಷಕರ ಪಾತ್ರ ಬಹಳಷ್ಟು ಮುಖ್ಯ



ರಬಕವಿ ಬನಹಟ್ಟಿ: ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನದಲ್ಲಿ ಪಾಲಕರ ಮತ್ತು ಶಿಕ್ಷಕರ ಪಾತ್ರ ಬಹಳಷ್ಟು ಮಹತ್ವದ್ದಾಗಿದೆ. ಇಂದಿನ ಆಧುನಿಕ ತಾಂತ್ರಿಕ ಮತ್ತು ತಂತ್ರಜ್ಞಾನದ ಯುಗದಲ್ಲಿ ಶಿಕ್ಷಕರ ವೃತ್ತಿ ಹಲವಾರು ಸವಾಲುಗಳಿಂದ ಕೂಡಿದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವ ಮನೋಸ್ಥಿತಿ ಹಾಗೂ ಆತ್ಮವಿಶ್ವಾಸವನ್ನು ಬೆಳಸುವ ಅಗತ್ಯವಿದೆ ಎಂದು ಹುನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಮಾಜಶಾಸ್ತ್ರದ ಉಪನ್ಯಾಸಕ ಶಂಕರ ಅರಬಳ್ಳಿ ತಿಳಿಸಿದರು.

ಇಲ್ಲಿನ ಪದ್ಮಾವತಿ ಅಂತರರಾಷ್ಟ್ರೀಯ ಶಾಲೆಯಲ್ಲಿ ಹಜಾರೆ ಹಬ್ಬ ದ ದಶಮಾನೋತ್ಸವ ಮೊದಲ ದಿನದ ಕಾರ್ಯಕ್ರಮವನ್ನುಉದ್ಘಾಟಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಉದ್ದಿಮೆದಾರ ಶ್ರೀಪಾದ ಗುಂಡಾ ಮಾತನಾಡಿ, ಇಂದಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿಯೂ ಉತ್ತಮ ಶಿಕ್ಷಣ ದೊರೆಯುತ್ತಿದೆ. ಇದರಿಂದಾಗಿ ಇಲ್ಲಿಯ ಪಾಲರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎಂದರು.

ಹಜಾರೆ ಫೌಂಢೇಶನ್ ಅಧ್ಯಕ್ಷೆ ಪದ್ಮಾವತಿ ಹಜಾರೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಸಂತ ಹಜಾರೆ ಕಾರ್ಯಕ್ರಮದ ಗೌರವಾಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಸತೀಷ ಹಜಾರೆ, ಬಾಹುಬಲಿ ಮುತ್ತಿನ, ಗಣಪತಿರಾವ ಹಜಾರೆ, ವಿಠ್ಠಲ ಅಜ್ಜನಗೌಡರ, ಶಿಕ್ಷಣ ಇಲಾಖೆಯ ಬಿ.ಎಂ. ಹಳೆಮನಿ, ಎಸ್.ಎ.ಬಿಜಾಪುರ, ಸಂತೋಷ ಬಡ್ಡಿ, ಕಾಡೇಶ ಕೋಲೂರ, ಪ್ರಾಚಾರ್ಯ ಬಸವರಾಜ ತಾಳಿಕೋಟಿ, ಆಡಳಿತಾಧಿಕಾರಿ ಭಾರತಿ ತಾಳಿಕೋಟಿ ವೇದಿಕೆಯ ಮೇಲಿದ್ದರು. ವೆಂಕಟೇಶ ನಿಂಗಸಾನಿ, ಮಹಾದೇವ ಕೋಟ್ಯಾಳ, ಎಸ್.ಬಿ. ಉಕ್ಕಲಿ, ಪ್ರಸನ್ನ ಹಜಾರೆ, ರಾಮಣ್ಣ ಹುಲಕುಂದ, ಮಹಾದೇವ ದೂಪದಾಳ, ಪ್ರಶಾಂತ ಹಜಾರೆ, ಶ್ರೀಶೈಲ ಕುಂಬಾರ, ಸತೀಷ ಬೆಳಗಲಿ ಸೇರಿದಂತೆ ಅನೇಕರು ಇದ್ದರು.

### ತುಂಬಗಿ ಶ್ರೀ ಗ್ರಾಮದೇವತೆ ಜಾತ್ರೆ : ಶ್ರೀದೇವಿ ಮಹಾತ್ಮೆ ಬೈಲಾಟ ಉದ್ಘಾಟನೆ

# ಆಧುನಿಕ ಬರಾಟೆಯಲ್ಲಿ ನಾಟಕ ಕಲೆ ನಶಿಸುತ್ತಿದೆ-ಮಾಡಗಿ



ತಾಳಿಕೋಟೆ, ಬೈಲಾಟ, ನಾಟಕ, ನೃತ್ಯ ಎಂಬುವುಗಳು ಇಂದಿನ ಆಧುನಿಕ ಬರಾಟೆಯ ಟಿವಿ ಮಾದ್ಯಮದ ದಾರವಾಹಿ ಮತ್ತು ಸಿನಿಮಾಗಳಿಂದ ನಶಿಸುತ್ತಾ ಬರತೊಡಗಿವೆ ಬೆಲೆ ಕಟ್ಟಲಾಗದ ಕಲೆ ಹುಟ್ಟಿಕೊಂಡಿರುವದು ಉತ್ತರ ಕರ್ನಾಟಕದ ಜನರ ನಿತ್ಯ ಬಧುಕಿನಿಂದಾಗಿದೆ ಎಂದು ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಬಸನಗೌಡ ಮಾಡಗಿ ಅವರು ಹೇಳಿದರು.

ಶನಿವಾರರಂದು ತಾಲೂಕಿನ ತುಂಬಗಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ(ದ್ಯಾಮವ್ವದೇವಿ)ಯ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಶ್ರೀ ದೇವಿಯ ಮಹಾತ್ಮೆ ಅರ್ತಾಥ-ೀ ಶುಂಭ ನಿಶುಂಭ ವಧೆ ಬೈಲಾಟವನ್ನು ಜ್ಯೋತಿ ಬೆಳಗಿಸುವದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಉತ್ತರ ಕರ್ನಾಟಕ ಹಳ್ಳಿಗಾಡಿನ ಬಧುಕಿನಲ್ಲಿ ನಿತ್ಯ ನಡೆಯುತ್ತಿರುವ ಸನ್ನಿವೇಶಗಳನ್ನು ಆದಾರಿಸಿ ನಾಟಕ ಕಲೆ ಎಂಬುದು ಹುಟ್ಟುಕೊಂಡಿದೆ ಆದರೆ ಕಲಾವಿದರು ತಮ್ಮ ಬಧುಕಿಗಾಗಿ ಸಾಕಷ್ಟು ಕಡೆಗಳಲ್ಲಿ ನಾಟಕ ಕಲೆಯನ್ನು ಪ್ರದರ್ಶಿಸುತ್ತಾ ಸಾಗಿದರೂ ಕೂಡಾ ಅದನ್ನು ನೋಡಲು ಜನರು ಬರುತ್ತಿಲ್ಲಾ ಇದಕ್ಕೆ ಮುಖ್ಯ ಕಾರಣ ಇಂದಿನ ಟಿವಿಮಾದ್ಯಮದ ದಾರವಾಹಿ, ಸಿನಿಮಾಗಳು ಜನರ ದಾ-ರಿಯನ್ನು ತಪ್ಪಿಸುತ್ತಿವೆ ನಾಟಕದ ಕಲೆಯಲ್ಲಿ ಜೀವನದ ಬಧುಕನ್ನು ತಿದ್ದುವಂತಹ ಕಾರ್ಯಗಳು ನಡೆದರೆ ಟಿವಿ ಮಾದ್ಯಮದ ದಾರವಾಹಿಗಳಿಂದ ಮನೆಯಲ್ಲಿ ಕಲಹಗಳು ಉದ್ಭವಿಸುತ್ತಾ ಸಾಗಿವೆ ಇದನ್ನು ನಾವು ನೀವು ನಿತ್ಯ ನೋಡುತ್ತಿದ್ದೇವೆ ಆದರೆ ನಮ್ಮ ಬಧುಕು ದಾರವಾಹಿಗಳಿಂದ ಆಚೆ ಬರಬರದಿರುವದು ದುರದೃಷ್ಠಕರವಾಗಿದೆ ಎಂದು ವಿಷಾದಿಸಿದ ಅವರು ಪ್ರತಿ 3 ವರ್ಷಕ್ಕೊಮ್ಮೆ ಜರುಗುವ ತುಂಬಗಿ ಗ್ರಾಮದ ಶ್ರೀ ಗ್ರಾಮದೇವತೆ ಜಾತ್ರೆಯು ಈ ಭಾರಿಯೂ ಅದ್ದೂರಿಯಾಗಿ ನೆರವೇ-ರಿಸುವದರೊಂದಿಗೆ ಎಲ್ಲರಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಹೆಚ್ಚಿಸುವಂತಹ ಕಾರ್ಯ ಮಾಡಲಾಗಿದೆ ಈ ಜಾತ್ರೆಯ ಅಂಗವಾಗಿ ಶ್ರೀ ದೇವಿಯ ಮಹಾತ್ಮೆ ಬೈಲಾಟ ಒಳಗೊಂಡು ಇನ್ನಿತರ ನಾಟಕಗಳನ್ನು ಆಯೋಜಿಸಿ ಕಲಾವಿದರ ಬಧುಕು ಸುಂದರಗೊಳಿಸಲು ಮುಂದಾಗಿರುವದು ಶ್ಲಾಘನೀಯವಾಗಿದೆ ಎಂದರು.

ಇನ್ನೋರ್ವ ನ್ಯಾಯವಾದಿ ಪ್ರಭಾಕರ ಗುಡಗುಂಟಿ ಅವರು ಮಾತನಾಡಿ ಗ್ರಾಮೀಣ ಸೊಗಡಿನ ನಾಟಕ, ಬೈಲಾಟ ಕಲೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿರುವದು ಹೆಮ್ಮೆಯ ಸಂಗತಿಯಾಗಿದೆ ಈ ನಾಟಕಗಳಲ್ಲಿ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರವನ್ನು ಬಿತ್ತುವಂತಹ ಸನ್ನಿವೇಶಗಳು ನಡೆಯುತ್ತಿರುವದು ಶ್ಲಾಘನೀಯವಾಗಿದೆ ತುಂಬಗಿ ಗ್ರಾಮದ ಶ್ರೀ ಗ್ರಾಮದೇವತೆ ಜಾತ್ರೋತ್ಸವ ಅಂಗವಾಗಿ 5 ದಿನಗಳ ಕಾಲ ವಿವಿಧ ಕಲಾವಿದರನ್ನು ಕರೆಯಿಸಿ ಪ್ರೋತ್ಸಾಹಿಸಿ ವೈಭವ ಪೂರಿತವಾಗಿ ಜಾತ್ರೆಯನ್ನು ಮಾಡುತ್ತಿರುವದು ಊರಿನ ಹಿರಿಮೆ ಇನ್ನಷ್ಟು ಹೆಚ್ಚಿಸಿದೆ ಎಂದರು.

ಇನ್ನೋರ್ವ ಯುವ ಮುಖಂಡ ಹಣಮಂತ್ರಾಯ ಢವಳಗಿ ಅವರು ಇಂದಿನ ದಿನಮಾನದಲ್ಲಿ ಕಲಾವಿದರು ಬಧುಕು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಬಗ್ಗೆ ವಿವ-ರಿಸಿದರು.

ಕಾರ್ಯಕ್ರಮದ ದಿವ್ಯ ಸಾನಿದ್ಯವನ್ನು ತುಂಬಗಿ-ಸಾಸನೂರ ಹಿರೇಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು.

ಈ ಸಮಯದಲ್ಲಿ ಜಿಪಂ ಮಾಜಿ ಸದಸ್ಯ ಶಿವುಧನಿ ದೇಸಾಯಿ, ಸಂಗನಗೌಡ ಲಿಂಗದಳ್ಳಿ, ರಾಜು ದೇಶಮುಖ, ಮಲಕೇಂದ್ರಾಯ ಭೈರಿಪಾಟೀಲ, ಮಲ್ಲನಗೌಡ ರೇಬಿನಾಳ, ಗೌಡಪ್ಪ ಕುದ-ರಿಗೌಡರ, ಹಣಮಂತ್ರಾಯ ಹಚರಡ್ಡಿ, ಈರಸಂಗು ಕಂದಳ್ಳಿ, ಶುಖು ಸಜ್ಜನ, ನಿಂಗು ಚೌದ್ರಿ, ಸಂಗನಗೌಡ ಪಾಟೀಲ, ದೇವೆಂದ್ರ ನಾಯ್ಕೋಡಿ, ರಮೇಶ ಕೊಳ್ಳಿ, ಶಿವಯ್ಯ ಹಿರೇಮಠ, ಅನೀಲ ಗೊಟಗುಣಕಿ, ಮೊದಲಾದವರು ಇದ್ದರು.

# ಅಕ್ಷರ ಕಲಿತರೂ ಭ್ರಷ್ಟನಾಗಬಲ್ಲ. ಸಂಸ್ಕಾರದಿಂದ ಬದುಕು ನಡೆಸುವವ ಎಂದಿಗೂ ಭ್ರಷ್ಟನಾಗುವದಿಲ್ಲ



ರಬಕವಿ-ಬನಹಟ್ಟಿ,ಡಿ22: ದೇಶದಲ್ಲಿ ಸಂಸ್ಕೃತಿ ಮೇಲೆ ವ್ಯತ್ಯಾಸಗಳಾಗುತ್ತಿವೆ. ಅಕ್ಷರ ಕಲಿತವ ಭ್ರಷ್ಟನಾಗಬಲ್ಲ ಆದ-ರೆ ಸಂಸ್ಕಾರದಿಂದ ಬದುಕು ನಡೆಸುವವ ಎಂದಿಗೂ ಭ್ರಷ್ಟನಾಗುವದಿಲ್ಲವೆಂದು ಶೇಗುಣಸಿಯ ಡಾ. ಮಹಾಂತಪ್ರಭು ಸ್ವಾಮೀಜಿ ಹೇಳಿದರು.

ಹೊಸೂರಿನಲ್ಲಿ ಜರುಗಿದ ಹಜಾರೆ ಹಬ್ಬ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಮಾತ್ರ ಬದುಕು ಸಾಧ್ಯ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಿ ಸೃಜನಶೀಲತೆಯಿಂದ ಪೋಷಣೆ ಮಾಡಬೇಕು. ಶಾಲೆಗಳು ಕೇವಲ ಪ್ರಮಾಣ ಪತ್ರಕ್ಕಾಗಿ ಮಾತ್ರ ಬೆಳೆಸುವ ಬದಲಾಗಿ ಇತ್ತೀಚೆಗೆ ಪ್ರವೇಶವಾಗಿರುವ ಕೃತಕ ಬುದ್ದಿಮತ್ತೆ(ಎಐ)ನಂತಹ ಪೈಪೋಟಿಗೆ ಸಮನಾಗುವ ನಿಟ್ಟಿನಲ್ಲಿ ಶಿಕ್ಷಣ ಜೊತೆಗೆ ಕ್ರೀಡೆಯಲ್ಲಿ ತಲ್ಲೀಣತೆ ಒದಗಿಸಬೇಕಿದೆ ಎಂದರು.

ಇತ್ತೀಚೆಗೆ ಉತ್ತರ ಕರ್ನಾಟಕದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಸಂಸ್ಥೆಗಳು ಮುಂದಾಗಿರುವದು ಹೆಮ್ಮೆ. ಮಕ್ಕಳಲ್ಲಿ ಪ್ರತಿಭೆಯೊಂದಿದ್ದರೆ ಸಾಕು ಸಾಧನೆ ಸಾಧ್ಯ. ಬದಲಾವಣೆ ಯಾವ ಮುಖಂಡ, ಪ್ರತಿನಿಧಿಯಿಂದ ಬಯಸದೆ ನಮ್ಮಿಂದಲೇ ಆರಂಭವಾಗಬೇಕೆಂದು ಪಣತೊಡಬೇಕು ಅಂದಾಗ ಮಾತ್ರ ದೇಶ ಅಭಿವೃದ್ಧಿಗೆ ನಿಜವಾದ ಅರ್ಥ ದೊರಕುವದೆಂದು ಸ್ವಾಮೀಜಿ ಹೇಳಿದರು.

ತಾಲೂಕಾ ಶಿಕ್ಷಣಾಧಿಕಾರಿ ಎ.ಕೆ. ಬಸಣ್ಣವರ ಮಾತನಾಡಿ, ಬಾಲಕ-ಪಾಲಕ-ಶಿಕ್ಷಕ-ಚಾಲಕ ಇವರೆಲ್ಲ ಸಂಗೀತದ ಸ್ವರವಿದ್ದಂತೆ, ಮಗುವಿನ ಶಿಕ್ಷಣದ ಜೊತೆಗೆ ಓದು-ಬರಹಕ್ಕೆ ಸೀಮಿತಗೊಳಿಸದೆ, ಆಂತರಿಕ ಗುಣ ಯಾವುದೆಂಬುದನ್ನು ಕಂಡು ಹಿಡಿಯುವದು ಅವಶ್ಯವಿದೆ. ಧೈರ್ಯವಿದ್ದಾಗ ಮಾತ್ರ ಗುರಿ ತಲುಪಲು ಸಾಧ್ಯವೆಂದರು.

ಅಧ್ಯಕ್ಷತೆಯನ್ನು ಗಣಪತರಾವ್ ಹಜಾರೆ ವಹಿಸಿದ್ದು. ಬಾಹುಬಲಿ ಎನ್. ಮುತ್ತಿನ, ಸತೀಶ ಹಜಾರೆ, ಪ್ರಸನ್ನ ಹಜಾರೆ, ಭಾರತಿ ತಾಳಿಕೋಟಿ, ಪದ್ಮಾವತಿ ಹಜಾರೆ, ವಸಂತರಾವ್, ಬಸವರಾಜ ಕಲಾದಗಿ, ಶ್ರೀಶೈಲ ಕುಂಬಾರ, ಸತೀಶ ಬೆಳಗಲಿ ವೇದಿಕೆ ಮೇಲಿದ್ದರು.

***




ತಾಳಿಕೋಟೆ : ಮಿಣಜಗಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ(ದ್ಯಾಮವ್ವದೇವಿ) ಶ್ರೀ ಮಾಯಮ್ಮದೇವಿ ಜಾತ್ರೋತ್ಸವ ಅಂಗವಾಗಿ ಗೀಗೀ ಪದ ಪ್ರಾರಂಭಗೊಳಿಸಲಾಯಿತು.

# ವಿಜೃಂಬಣೆಯಿಂದ ಜರುಗಿದ ತುಂಬಗಿಯ ಶ್ರೀಗ್ರಾಮದೇವಿ ಜಾತ್ರೆ



ತಾಳಿಕೋಟೆ, ತಾಲೂಕಿನ ಸುಕ್ಷೇತ್ರ ತುಂಬಗಿ ಗ್ರಾಮದಲ್ಲಿ ಪ್ರತಿ 3ವರ್ಷಕ್ಕೊಮ್ಮೆ ಜರುಗುವ ಶ್ರೀ ಗ್ರಾಮದೇವತೆ(ದ್ಯಾಮವ್ವದೇವಿ) ಜಾತ್ರಾ ಮಹೋತ್ಸವವು ಶುಕ್ರವಾರರಂದು ವಿವಿಧ ವಾದ್ಯ ವೈಭವಗಳೊಂದಿಗೆ ವಿಜೃಂಬಣೆಯಿಂದ ಜರುಗಿತು.

ಜಾತ್ರೋತ್ಸವ ನಿಮಿತ್ಯವಾಗಿ ನಸುಕಿನ ಜಾವ 5 ಗಂಟೆಗೆ ಶ್ರೀ ದೇವಿಯ ಉಡಿ ತುಂಬುವ ಕಾರ್ಯಕ್ರಮ ಜರುಗಿತು. ನಂತರ ವಿವಿಧ ವಾದ್ಯ ಮೇಳಗಳೊಂದಿಗೆ ಅಲ್ಲದೇ ವಿವಿಧ ಕಲಾ ತಂಡಗಳ ವೈಭವದೊಂದಿಗೆ ಶ್ರೀ ಗ್ರಾಮದೇವತೆ(ದ್ಯಾಮವ್ವದೇವಿ)ಯ ಮಹಾ ಮೂರ್ತಿಗಳನ್ನು ರಥದಲ್ಲಿ ಕೂಡ್ರಿಸಿ ಪ್ರಾರಂಭಗೊಂಡ ಭವ್ಯ ಮೆರವಣಿಗೆಯು ಶ್ರೀದೇವಿಯ ಪಾದಗಟ್ಟೆಯವರೆಗೆ ಜರುಗಿತು.

ಮೆರವಣಿಗೆಯ ಗೊಂಬೆ ಕುಣಿತ, ಜೊಗತಿ ಕುಣಿತ, ಡೊಳ್ಳು ಕುಣಿತ, ಹಲಗೆ ಕುಣಿತ, ಅಲ್ಲದೇ ವಿವಿಧ ವಾದ್ಯಗಳು ಜಾತ್ರೆಯ ವೈಭವನ್ನು ಹೆಚ್ಚಿಸಿದವು. ಮೆರವಣಿಗೆಯ ನಂತರ ಸಮಸ್ತ ಭಕ್ತಾಧಿಗಳಿಗೆ ಮಹಾ ಪ್ರಸಾದ ಜರುಗಿತು.

ಈ ಜಾತ್ರೋತ್ಸವ ಭವ್ಯ ಮೆರವಣಿಗೆಯ ನೇತೃತ್ವವನ್ನು ತುಂಬಗಿ ಗ್ರಾಮದ ಮುಖಂಡರುಗಳು ವಹಿಸಿದ್ದರು.

# ರಸ್ತೆ ಸುರಕ್ಷತಾಕ್ರಮಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿಸಿ : ಡಿಸಿ ಜಾನಕಿ



ಬಾಗಲಕೋಟೆ: ಸಾರ್ವಜನಿಕರಿಗೆ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಹೆಚ್ಚಿನ ಮಟ್ಟದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ.ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಜರುಗಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪತ್ರಿಕೆಗಳು, ರೇಡಿಯೋ ಜಿಂಗಲ್ಸ್ ಮೂಲಕ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಸ-ರಿಸುವ ಕುರಿತು ಪ್ರಚಾರ ಕೈಗೊಳ್ಳಬೇಕು. ಹೆಲ್ಮೇಟ್ ದರಿಸುವುದು ಕಡ್ಡಾಯ ಎನ್ನುವಂತಾಗಬೇಕು ವಾಹನ ಸವಾರರು ಹೆಲ್ಮೇಟ್ ದರಿಸದೇ ಓಡಾಡಿದಲ್ಲಿ ಅವರ ಮನೆ ವಿಳಾಸಕ್ಕೆ ನೋಟಿಸನೊಂದಿಗೆ ದಂಡ ಕಟ್ಟುವ ಸಂದೇಶ ರವಾನಿಸುವ ಕೆಲಸವಾಗಬೇಕು ಎಂದು ಹೇಳಿದರು.

ಕಳೆದ ವರ್ಷದ ಕಬ್ಬು ಕಟಾವಿನ ವೇಳೆಯಲ್ಲಿ ಹೆಚ್ಚಿನ ಸಂಖ್ಯೆಯ ಟ್ಯಾಕ್ಟರ್ ಚಾಲಕರು ಸೌಂಡ್ ಸಿಸ್ಟಮ್ ಗಳನ್ನು ಅಳವಡಿಸಿಕೊಂಡು ಓಡಾಡಿಕೊಂಡಿದ್ದರು. ಆದರೆ ಈ ವರ್ಷ ಅವರಲ್ಲಿ ಅದ-ರಿಂದಾಗುವ ಅನಾಹುತಗಳ ಕುರಿತು ಎಚ್ಚರಿಕೆ ನೀಡಿದ್ದರಿಂದ ಅಬ್ಬರದ ದ್ವನಿ ಕಡಿಮೆಯಾಗಿದೆ. ಇದೊಂದು ಒಳ್ಳೆಯ ಬೆಳವಣಿಗೆ ಇದೇ ರೀತಿ ಎಲ್ಲಾ ರೀತಿಯ ರಸ್ತೆ ಸುರಕ್ಷತಾ ಕ್ರಮಗಳನ್ನು ಎಲ್ಲಾ ವಾಹನ ಸವಾರರು ಮತ್ತು ಹಿಂಬಂದಿ ಸವಾರರು ಅಳವಡಿಸಿಕೊಳ್ಳುವ ರೀತಿಯಲ್ಲಿ ಜನ ಜಾಗೃತಿಯಾಗಬೇಕು ಎಂದು ತಿಳಿಸಿದರು.

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನೀಯರ್ ಕೆ.ದುರ್ಗಾದಾಸ ಮಾತನಾಡಿ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಬರುವ ಬ್ಲಾಕ್ ಸ್ಪಾಟ್ ಗಳನ್ನು ಸರಿಪಡಿಸುವ ಕ್ರಮ, ಮುದೋಳ ತಾಲೂಕಿನ ಬಾಯ್‌ಪಾಸ್ ರಸ್ತೆ ಮೇಲೆ ಜಂಕ್ಷನಗಳಲ್ಲಿ ಸೂಚನಾ ಫಲಕಗಳನ್ನು ಹಾಗೂ ರಂಬಲ್ ಸ್ಟ್ರಿಪ್ಸ್ ಗಳನ್ನು ಲೋಕೋಪಯೋಗಿ ಇಲಾಖೆಯಿಂದ ಅಳವಡಿಸಲು ಮತ್ತು ಮಹಾಲಿಂಗಪೂರ ರಸ್ತೆಯನ್ನು ಕರ್ನಾಟಕ ರಾಜ್ಯ ಹೆದ್ದಾ-ರಿಗಳ ಅಭಿವೃದ್ಧಿಯ ಯೋಜನೆ(ಕೆಶಿಪ) ಗೋಕಾಕ ಉಪವಿಭಾಗ ರವರಿಂದ ಮೇಲ್ದರ್ಜೆಗೇರಿಸಿ ಸದರಿಯವ-ರಿಂದಲೇ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ವರದಿ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

# ಸುಭದ್ರ ದೇಶಕ್ಕೆ ಸಹಕಾರಿ ರಂಗದ ಕೊಡುಗೆ ಅಪಾರ



ರಬಕವಿ-ಬನಹಟ್ಟಿ,ಡಿ22:ಜಗತ್ತಿನಲ್ಲಿಯೇ ಆರ್ಥಿಕವಾಗಿ ಭಾರತ 3 ನೇ ಸ್ಥಾನದಲ್ಲಿರಲು ಸಹಕಾರಿ ಕ್ಷೇತ್ರದ ಬಹುದೊಡ್ಡ ಕೊಡುಗೆಯಿದೆ ಎಂದು ಉದ್ಯಮಿ ಶಂಕರ ಜುಂಜಪ್ಪನವರ ತಿಳಿಸಿದರು.

ನಗರದ ಭದ್ರನ್ನವರ ಕಲ್ಯಾಣಮಂಟಪದಲ್ಲಿ ಜರುಗಿದ ಸಹಕಾರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯಪೂರ್ವದಿಂದಲೂ ಸಹಕಾರಿ ಚಳವಳಿಯು ಇದೀಗ ಕ್ರಾಂತಿಯ ರೀತಿಯಲ್ಲಿ ಬೆಳೆದಿದೆ. ಸಾಮಾನ್ಯರಿರುವ ಸಹಕಾರಿ ಸಂಸ್ಥೆಗಳು ಇಂದು ಪ್ರಗತಿ ಸಾಧಿಸುವ ಜೊತೆಗೆ ಉತ್ತಮ ವ್ಯವಹಾರ ಜ್ಞಾನ ಕಲ್ಪಿಸಿಕೊಟ್ಟಿದೆ ಎಂದರು.

ಕಾಡಸಿದ್ಧೇಶ್ವರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಸುರೇಶ ಅಬಕಾರ ಮಾತನಾಡಿ, ನೇಕಾರ ಪ್ರಧಾನ ಕ್ಷೇತ್ರವಾಗಿರುವ ಬನಹಟ್ಟಿಯಲ್ಲಿನ ಸಹಕಾರಿ ಸಂಘ ಹಾಗು ಬ್ಯಾಂಕ್‌ಗಳಲ್ಲಿ ಅವಿರೋಧಕ್ಕೆ ಪ್ರಾಧಾನ್ಯತೆ ನೀಡಿ ಇಂದಿಗೂ ಸಹಕಾರದಿಂದ ಯಾವದೇ ವೈಷಮ್ಯ, ತಾರತಮ್ಯವಿಲ್ಲದೆ ಮುನ್ನಡೆಯುತ್ತಿರುವದು ಹೆಮ್ಮೆಯೆಂದರು.

ಇದೇ ಸಂದರ್ಭ ಬನಹಟ್ಟಿ ಹಟಗಾರ ಪತ್ತಿನ ಸಹಕಾರಿ ಸಂಘದಿಂದ ಅವಿರೋಧವಾಗಿ ಆಯ್ಕೆಗೊಂಡ ಸದಸ್ಯರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭ ಮಲ್ಲಣ್ಣ ಕಕಮರಿ, ರಾಮಣ್ಣ ಭದ್ರನ್ನವರ, ರಾಜಶೇಖರ ಶಿವಪೂಜಿ, ಸಿದ್ರಾಮಪ್ಪ ಸವದತ್ತಿ, ಶಂಕರ ಕೆಸರಗೊಪ್ಪ, ಶ್ರೀಶೈಲ ಯಾದವಾಡ, ಈರಣ್ಣ ಬಾಣಕಾರ, ಈಶ್ವರ ಪಟಗುಂಡಿ, ಬಾಣಕಾರ, ಸುರೇಶ ಕೋಲಾರ, ದಾನಪ್ಪ ಹುಲಜತ್ತಿ, ಶ್ರೀಶೈಲ ದಭಾಡಿ, ಗಂಗಾಧರ ಕೊಕಟನೂರ ಸೇರಿದಂತೆ ಅನೇಕರಿದ್ದರು.

## ಅಥಣಿ ಮೋಟಗಿ ಮಠದಲ್ಲಿ ಡಿ. 27 ರಿಂದ ಜ.10 ರವರೆಗೆ ಬಸವ ಚರಿತಾಮೃತ ಪ್ರವಚನ

ಬೆಳಗಾವಿ; ಅಥಣಿ ಮೊಟಗಿ ಮಠದ ಚನ್ನಬಸವ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಅಂಗವಾಗಿ ಇದೇ ಡಿಸೆಂಬರ್ 27ರಿಂದ ಜನವರಿ 10 ರವರೆಗೆ ಬಸವ ಚರಿತಾಮೃತ ಪ್ರವಚನ ಕಾರ್ಯಕ್ರಮ ಜರುಗಲಿದೆ.

ಕಲಬುರ್ಗಿ ನಿಂಬಾಳದ ಶ್ರೀ ಶಾಂತಲಿಂಗೇಶ್ವರ ಮಠದ ಶ್ರೀ.ಜಡೆಯ ಶಾಂತಲಿಂಗ ಮಹಾಸ್ವಾಮಿಗಳು ಮತ್ತು ಹರಿಹರ ಕ್ಷೇತ್ರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ.ಯೋಗ ಸಿಂಹಾಸನಾಧೀಶ್ವರ ಜಗದ್ಗುರು ವಚನಾನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಜರುಗುವ ಈ ಪ್ರವಚನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಡಾ.ಅಲ್ಲಮಪ್ರಭು ಮಹಾಸ್ವಾಮಿಗಳು ವಹಿಸಲಿದ್ದಾರೆ.

ಅಥಣಿಯ ಗಚ್ಚಿನ ಮಠದ ಶ್ರೀ. ಶಿವಬಸವ ಮಹಾಸ್ವಾಮಿಗಳು ಉದ್ಘಾಟಿಸಲಿದ್ದಾರೆ. ನೇತೃತ್ವವನ್ನು ಮಸೂತಿ ಶ್ರೀ ಜಗದೀಶ್ವರ ಹಿರೇಮಠದ ಶ್ರೀ. ಪ್ರಭು ಕುಮಾರಸ್ವಾಮಿಗಳು ಮತ್ತು ಶೆಗುಣಶಿ ವಿರಕ್ತಮಠದ ಡಾ.ಮಹಾಂತ ಪ್ರಭು ಮಹಾಸ್ವಾಮಿಗಳು ವಹಿಸಲಿದ್ದಾರೆ. ತಿಮ್ಮಾಪುರ ಮುದುಗಲ್ ಕಲ್ಯಾಣಾಶ್ರಮದ ಖ್ಯಾತ ಪ್ರವಚನಕಾರ ಶ್ರೀ. ಮಹಾಂತ ಸ್ವಾಮೀಜಿ ಪ್ರವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಥಣಿಯ ಸಮಾಜ ಸೇವಕ ಬಿ.ಎಲ್. ಪಾಟೀಲ್, ಶಾಸಕ ಲಕ್ಷ್ಮಣ ಸವದಿ, ಮಾಜಿ ಶಾಸಕ ಮಹೇಶ್ ಕುಮಠಳ್ಳಿ, ಮಾಜಿ ಶಾಸಕ ಶಹಜಹಾನ್ ದೊಂಗರಗಾವ್ ಆಗಮಿಸಲಿದ್ದಾರೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ಇದೇ ೨೬ ರಂದು ನೂತನ ರಥ ಲೋಕಾರ್ಪಣೆ



ರಬಕವಿ ಬನಹಟ್ಟಿ,ಡಿ22: ಇದೇ 26 ರಂದು ಸಂಜೆ 6 ಕ್ಕೆ ರಬಕವಿಯ ದಾನಮ್ಮ ದೇವಿ ದೇವಸ್ಥಾನದ ನೂತನ ರಥದ ಲೋಕಾರ್ಪಣೆ ಜರುಗಲಿದೆ ಎಂದು ದಾನಮ್ಮದೇವಿ ಟ್ರಸ್ಟ್ ಅಧ್ಯಕ್ಷ ಶಿವಜಾತ ಉಮದಿ ತಿಳಿಸಿದರು.

ರಬಕವಿಯಲ್ಲಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರೂ. 6 ಲಕ್ಷ 11 ಸಾವಿರ ವೆಚ್ಚದಲ್ಲಿ ರಥವನ್ನು ಹೊಳೆ ಆಲೂರಿನ ಮಹೇಶ ಹೆಬ್ಬಳ್ಳಿಯವರು ನಿರ್ಮಾಣ ಮಾಡಿದ್ದಾರೆ. ರಬಕವಿಯ ಉದ್ದಿಮೆದಾರ ಮಲ್ಲೇಶಪ್ಪ ಕುಚನೂರ ದೇವಸ್ಥಾನಕ್ಕೆ 5 ಲಕ್ಷ 11 ಸಾವಿರ ರೂ.ಗಳನ್ನು ರಥ ನಿರ್ಮಾಣಕ್ಕೆಂದು ದೇಣಿಗೆಯನ್ನಾಗಿ ನೀಡಿದ್ದಾರೆಂದರು.

ದಿ. 26 ರಂದು ಸಂಜೆ ನಡೆಯುವ ಕಾರ್ಯಕ್ರಮವನ್ನು ಶ್ರೀಶೈಲದ ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಉದ್ಘಾಟಿಸಲಿದ್ದಾರೆ. ಹಳೇ ಹುಬ್ಬಳ್ಳಿಯ ವೀರಭಿಕ್ಷಾವರ್ತಿ ಮಠದ ಶಿವಶಂಕರ ಶಿವಾಚಾರ್ಯರು, ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು ಹಾಗೂ ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಶಾಸಕ ಸಿದ್ದು ಸವದಿ, ಮಹಾಂತೇಶ ಬೀಳಗಿ, ವಿಜೂಗೌಡ ಪಾಟೀಲ, ವಿಠ್ಠಲ ಪೂಜಾರಿ, ಶಂಕರ ಗಣಮುಖಿ, ಸಿದ್ದು ಕೊಣ್ಣೂರ, ಧರೆಪ್ಪ ಉಳ್ಳಾಗಡ್ಡಿ, ಮಲ್ಲಿಕಾರ್ಜುನ ನಾಶಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ರಥದ ಸಮಿತಿಯ ಕಾರ್ಯಾಧ್ಯಕ್ಷರಾಗಿರುವ ಮಹಾದೇವ ಧುಪದಾಳ ತಿಳಿಸಿದರು.

ನಾರಾಯಣ ಬೋರಗಿನಾಯಕ, ಮಲ್ಲಿಕಾರ್ಜುನ ಜತ್ತಿ, ಸಂಜೀವ ತೇಲಿ, ಶಿವಾನಂದ ದಾಶ್ಯಾಳ, ರಾಜು ಉಮದಿ, ವಿಜಯಕುಮಾರ ಹಲಕುರ್ಕಿ, ಬಸವರಾಜ ತೊರಲಿ ಇದ್ದರು.

### "ಗಾಂಧೀ ಭಾರತ": ಬೆಳಗಾವಿ ಕಾಂಗ್ರೇಸ್ ಅಧಿವೇಶನ ಶತಮಾನೋತ್ಸವ ಸಮಾರಂಭ

# ಸಿದ್ಧತೆ ಪರಿಶೀಲಿಸಿದ ಸಚಿವ ಎಚ್.ಕೆ.ಪಾಟೀಲ



ಬೆಳಗಾವಿ : ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೇಸ್ ಅಧೀವೇಶನದ ಶತಮಾನೋತ್ಸವ ಸಮಾರಂಭದ ಸಿದ್ಧತೆಗಳನ್ನು ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ.ಪಾಟೀಲ ಅವರು ಪರಿಶೀಲಿಸಿದರು.

ನಗರದ ವೀರಸೌಧದಲ್ಲಿ ಮಾತನಾಡಿದ ಅವರು1924 ರಲ್ಲಿ ಮಹಾತ್ಮಾ ಗಾಂಧೀ-ಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೇಸ್ ಅಧಿವೇಶನಕ್ಕೆ ನೂರು ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರಕಾರದ ವತಿಯಿಂದ ಗಾಂಧೀ ಭಾರತ ಕಾರ್ಯಕ್ರಮವನ್ನು ವರ್ಷವೀಡಿ ಆಯೋಜಿಸಲಾಗುತ್ತಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಕಾಂಗ್ರೇಸ್ ಅಧಿವೇಶನದ ಮಹತ್ವ ಹಾಗೂ ಮುಖ್ಯವಾಗಿ ಮಹಾತ್ಮಾ ಗಾಂಧೀ-ಜಿಯವರ ತತ್ವಾದರ್ಶಗಳನ್ನು ಎಲ್ಲ-ರಿಗೂ ತಲುಪಿಸುವದು ಈ ಕಾರ್ಯಕ್ರಮದ ಉದ್ದೇಶಾವಗಿದೆ ಎಂದರು. ಡಿ.26 ಹಾಗೂ 27 ರಂದು ಜರುಗಲಿರುವ ಶತಮಾನೋತ್ಸವ ಕಾರ್ಯಕ್ರಮದ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಚಿವರಾದ ಎಚ್. ಕೆ.ಪಾಟೀಲ ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ರಾಜು(ಆಸೀಫ್) ಸೇಠ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ವಿನಯ ನಾವಲಗಟ್ಟಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್,ಪೊಲೀಸ್ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ, ಗಂಗಾಧರರಾವ್ ದೇಶಪಾಂಡೆ ಸ್ಮಾರಕ ಟ್ರಸ್ಟನ್ ಕಾರ್ಯದರ್ಶಿಗಳಾದ ರವೀಂದ್ರ ದೇಶಪಾಂಡೆ, ಹಿರಿಯ ಪತ್ರಕರ್ತರುಗಳಾದ ಸುಭಾಷ ಕುಲಕರ್ಣಿ, ಹೃಷಿಕೇಶ ಬಹದ್ದೂರ ದೇಸಾಯಿ ಸೇರಿದಂತೆ ವಿವಿಧ ಇಲಾಖೆ ಅಧಕಾರಿಗಳು ಉಪಸ್ಥಿತರಿದ್ದರು.

# ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆ: ಸ್ಪರ್ಧಾತ್ಮಕ ಪರೀಕ್ಷೆ

ಬೆಳಗಾವಿ : ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಮುಖಾಂತರ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಬೆಳಗಾವಿ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿರುವ ಹುದ್ದೆಗಳ ಪೈಕಿ 64 ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಅರ್ಹ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯನ್ನು 1.3 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗಾಗಿ provisional Document verification list ಅನ್ನು ದಿನಾಂಕ:21-12-2024 ರಂದು ಬೆಳಗಾವಿ ಜಿಲ್ಲಾ ವೆಬ್‌ಸೈಟ್ https://belagavi.nic.in/ ನಲ್ಲಿ ಪ್ರಕಟಿಸಲಾಗುವುದು. ಈ ಪಟ್ಟಿಯಲ್ಲಿ ಆಯ್ಕೆಯಾರುವ ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶಿಲನೆಗೆ ದಿನಾಂಕ:03-01-2025 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾಧಿಕಾ-ರಿಗಳ ಸಭಾಂಗಣ 2ನೇ ಮಹಡಿ ಜಿಲ್ಲಾಧಿಕಾ-ರಿಯವರ ಕಚೇರಿಗೆ ಹಾಜರಾಗಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿ ದೂರವಾಣಿ:0831-2407290 ಸಂಖ್ಯೆಗೆ ಅಥ-ವಾ ಸಿಬ್ಬಂದಿ ಶಾಖೆಯನ್ನು ಸಂಪರ್ಕಿಸಬುಹುದು ಎಂದು ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.7 ರಂದು ಮೂಲ ದಾಖಲೆಗಳ ಪರಿಶೀಲನೆ: ಜಿಲ್ಲಾಧಿಕಾರಿ ದಿವ್ಯ ಪ್ರಭು



ಧಾರವಾಡ : ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಮುಖಾಂತರ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ 12 ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆಯಲ್ಲಿ ನಿಗದಿಯಾಗಿರುವ ಹುದ್ದೆಗಳ ಎದುರಾಗಿ 1:3 ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಮೂಲ ದಾಖಲೆಗಳ ಪರಿಶೀಲನೆಗಾಗಿ ದಿನಾಂಕ: 21-12-2024 ರಂದು ಧಾರವಾಡ ಜಿಲ್ಲಾ ವೆಬ್ ಸೈಟ್ http://dharwad.nic.in ನಲ್ಲಿ ಪ್ರಕಟಿಸಲಾಗುವುದು.

ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗೆ ದಿನಾಂಕ: 07-01-2025 ರಂದು ಬೆಳಿಗ್ಗೆ 10.30 ಗಂಟೆಗೆ "ಧಾರವಾಡ ಜಿಲ್ಲಾಧಿಕಾರಿಗಳ ಕಾರ್ಯಾಲಯದ, ನೂತನ ಸಭಾ ಭವನ" ಇಲ್ಲಿ ಹಾಜರಾಗಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಧಾರವಾಡ ಜಿಲ್ಲಾಧಿಕಾರಿಯವರ ಕಛೇರಿಯ ದೂರವಾಣಿ ಸಂಖ್ಯೆ: 0836-2233880, 2233840 ನೇದ್ದಕ್ಕೆ ಕರೆ ಮಾಡಿ ಸಿಬ್ಬಂದಿ ಶಾಖೆಯನ್ನು ಸಂಪರ್ಕಿಸಬಹುದಾಗಿದೆ ಎಂದು

ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೆಣಸಗಿ ವಸತಿ ನಿಲಯದ ವಿಧ್ಯಾರ್ಥಿಗಳಿಗೆ ತಾಪಂ ಇಓ ಕ್ಲಾಸ್

ರೋಣ - ಶಿಕ್ಷಣ ಕಲಿಯುವಾಗಲೇ ವಿಧ್ಯಾರ್ಥಿಗಳು ದೊಡ್ಡ ಮಟ್ಟದ ಕನಸು ಕಾಣಬೇಕು, ಆ ಕನಸ್ಸನ್ನು ನನಸು ಮಾಡಿಕೊಳ್ಳಲು ನಿರಂತರವಾದ ಪರಿಶ್ರಮದ ಜೊತೆಗೆ ಅಭ್ಯಾಸ ಮುಖ್ಯ ವಾಗುತ್ತದೆ, ಆ ಅಭ್ಯಾಸವನ್ನು ನೀವು ಮುಂದುವರಿಸಿದ್ದಾದಲ್ಲಿ ನಿಮಗೆ ಯಶಸ್ಸು ಖಂಡಿತವಾಗಿ ದೊರಕುತ್ತದೆ ಅಂತಾ ತಾಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಬಿ ಕಂದಕೂರ ಹೇಳಿದರು..

ತಾಲೂಕಿನ ಮೆಣಸಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡಿರುವ ವಿವಿಧ ಕಾಮಗಾರಿಗಳ ಕಡತ ಹಾಗೂ ಸ್ಥಳ ಪರಿಶೀಲನೆ ನಡೆಸಿದ ಬಳಿಕ ರಾತ್ರಿ 8 ಘಂಟೆ ಸಮಯದಲ್ಲಿ ಗ್ರಾಮದ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಸತಿ ನಿಲಯಕ್ಕೆ ಭೇಟಿ ನೀಡಿದ




ಅವರು ವಸತಿಯಲ್ಲಿನ ಕುಂದು ಕೊರತೆ ಸೇರಿದಂತೆ ಊಟದ ಗುಣಮಟ್ಟದ ಕುರಿತು ವಿಧ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು..

ವಸತಿ ನಿಲಯದ ಮಕ್ಕಳಿಗೆ ಒಂದು ಘಂಟೆಗಳ ಕಾಲ ಗಣಿತ ವಿಷಯದ ಕುರಿತು ಕ್ಲಾಸ್ ತೆಗೆದುಕೊಂಡು ವಿಧ್ಯಾರ್ಥಿಗಳಿಗೆ ಪಾಠ ಮಾಡಿದರು. ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಎದುರಿಸಬೇಕಾದ ಸಮಯ, ವಿಷಯಗಳ ಆಯ್ಕೆ, ಯಾವ ದಿನ ಪತ್ರಿಕೆಗಳಲ್ಲಿ ಯಾವ ವಿಷಯವನ್ನು ಹೆಚ್ಚು ಅಭ್ಯಾಸ ಮಾಡಬೇಕು, ಮುಂಜಾನೆ ಎಷ್ಟು ಘಂಟೆಗೆ ಅಭ್ಯಾಸ ಪ್ರಾರಂಭಿಸಬೇಕು,

ಹೀಗೆ ಹಲವಾರು ವಿಷಯಗಳ ಕುರಿತು ಮಕ್ಕಳೊಂದಿಗೆ ಸಂವಾದ ನಡೆಸಿದ ಅವರು ಕಲಿಕೆಯಲ್ಲಿ ಹೆಚ್ಚು ತೊಡಗಿಸಕೊಳ್ಳಲು ಸಲಹೆ ನೀಡಿದರು. ತದನಂತರ ವಿದ್ಯಾರ್ಥಿಗಳೊಂದಿಗೆ ಸರತಿ ಸಾಲಿನಲ್ಲಿ ಕುಳಿತು ಊಟ ಮಾಡಿದ ಅವರು ವಸತಿ ನಿಲಯದ ಮೇಲ್ವಿಚಾರಕರಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಮಕ್ಕಳಿಗೆ ನೀಡಲು ಸೂಚಿಸಿದರು. ವಸತಿ ನಿಲಯದ ಹೊಸ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಗುರುತಿಸಿ ಚೆಕ್ಕಬಂದಿ ಮತ್ತು ಉತಾರ ನೀಡಲು ಪಿ.ಡಿ.ಓ ರವರಿಗೆ ಸೂಚಿಸಿದರು..

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು,,DEO,TC,-TAE ಮತ್ತು ಗ್ರಾ.ಪಂ.ಅಧ್ಯಕ್ಷರು, ಸದಸ್ಯರು ಹಾಗೂ ಸಿಬ್ಬಂದಿಗಳು ಹಾಜರಿದ್ದರು...

### ಚೂರು-ಪಾರು

## ಬಿ.ಇಡಿ ವಿದ್ಯಾರ್ಥಿಗಳ ಗಮನಕ್ಕೆ

ಗದಗ : 2024-25 ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆಯ ಪ್ರವೇಶ ಪ್ರಕ್ರಿಯೆಯ 2ನೇ ಸುತ್ತಿನ ಸೀಟು ಹಂಚಿಕೆ ಡಿಸೆಂಬರ್ 23 ರಿಂದ ಡಿಸೆಂಬರ್ 27 ವರೆಗೆ ನಡೆಯುವುದು ಹಾಗೂ ಮೊದಲನೇ ಸುತ್ತಿನಲ್ಲಿ ಮೂಲದಾಖಲೆಗಳ ಪರಿಶೀಲನೆಗೆ ಗೈರುಹಾಜರಾದ ಅಭ್ಯರ್ಥಿಗಳಿಗೆ ಡಿಸೆಂಬರ್ 23 ರಿಂದ ಡಿಸೆಂಬರ್ 26 ವರೆಗೆ ದಾಖಲೆಗಳ ಪರಿಶೀಲನೆಗೆ ರವರೆಗೆ ಕೊನೆಯ ದಿನಾಂಕವಾಗಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ನಗರದ ಕಳಸಾಪುರ ರೋಡನಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಜರಾಕ್ಸ್ ಪ್ರತಿಯೊಂದಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ಜಾಲತಾಣವನ್ನು ಹಾಗೂ ಡಯಟ್ ನೋಡಲ್ ಅಧಿಕಾರಿ ಜಿ ಎಂ ಮುಂದಿನಮನಿ ಮೊಬೈಲ್‌ಸಂ: 7619277145 ಸಂಪರ್ಕಿಸಬಹುದಾಗಿದೆ.

## ಅಹವಾಲು ಸಲ್ಲಿಸಲು ಅವಕಾಶ

ಗದಗ : ಗದಗ ಅರಣ್ಯ ವಿಭಾಗದ ಗದಗ ವಲಯದ ವ್ಯಾಪ್ತಿಯಲ್ಲಿ ಬರುವ ನಿರ್ದೇಶಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ರವರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 50 ಹಾಸಿಗೆಗಳ ತೀವ್ರ ನಿಗಾ ಘಟಕ ( ಸಿಸಿಯು) ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಮಾಡಲು 84 ಮರಗಳು ಅಡ್ಡಲಾಗಿವೆ.

ಸದರಿ ಮರಗಳನ್ನು ನಿಯಮಾನುಸಾರ ಕಟಾವು ಮಾಡಬೇಕಾಗಿದೆ. ಈ ಕುರಿತು ಸಾರ್ವಜನಿಕರಿಂದ ಏನಾದರೂ ಅಹವಾಲುಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿನಗಳೊಳಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ, ಗದಗ ಉಪವಿಭಾಗ, ಗದಗ ಈ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

## ಗದಗ ಬೆಟಗೇರಿ ನಗರದ ವಿವಿಧೆಡೆ ನೀರು ಪೂರೈಕೆ

ಗದಗ : ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೆನೆಂದರೆ ಡಿಸೆಂಬರ್ 24 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ್ 12 – ಪಿ ಮತ್ತು ಟಿ ಕ್ವಾಟ್ರಸ, ಕರಿಯಮ್ಮ ಕಲ್ಲು, ಗಣಪತಿ ಕಟ್ಟಿ, ರಾಘವೇಂದ್ರ ಗುಡಿ ಭಾಗ, ಚರ್ಚ ಭಾಗ ಉಳಿದ ಕೆಲವು ಭಾಗಗಳು. ವಾರ್ಡ್ 33 – ಮುಳಗುಂದ ನಾಕಾ, ಹುಬ್ಬಳ್ಳಿ ರಸ್ತೆ, ಕೇಶವ ನಗರ, ಬ್ಯಾಂಕರ್ಸ ಕಾಲೋನಿ, ಪಂಚಮುಖಿ ದೇವಸ್ಥಾನ ಉಳಿದ ಕೆಲವು ಭಾಗಗಳು. ವಾರ್ಡ್ 21, 22 – ವಿಜಯನಗರ ಶಾಲೆ, ಕುರುಗಲ ಲೇಔಟ, ಕಮತರ ಪ್ಲಾಟ, ಶಿಗ್ಗಾವಿ ಲೇಔಟ, ವಾಲ್ಮೀಕಿ ಭವನ, ಹನುಮಂತ ದೇವರು ಗುಡಿ, ಗಾರ್ಡನ ಉಳಿದ ಕೆಲವು ಭಾಗಗಳು. ವಾರ್ಡ್ 8, 9, 10 – ಹೆಲ್ತ ಕ್ಯಾಂಪ, ಪೊಲೀಸ ಕ್ವಾಟ್ರಸ, ಕುರಹಟ್ಟಿ ಪೇಟೆ, ಶಿರಹಟ್ಟಿ ಓಣಿ, ಕಬಾಡೆ ರಸ್ತೆ, ತೆಗ್ಗಿನ ಪ್ಲಾಟ, ತೆಂಗಿನಕಾಯಿ ಬಜಾರ, ಬಸವೇಶ್ವರ ಗುಡಿ ಉಳಿದ ಕೆಲವು ಭಾಗಗಳು. ವಾರ್ಡ್ 34, 30 – ವಡ್ಡರಗೇರಿ, ಮೂರು ಶಿಳ್ಳಿನವಕಾರ, ಡಿಪೋ ಹಿಂದಿನ ಭಾಗ, ಶಿವಾನಂದ ಗಾರ್ಡನ ಉಳಿದ ಕೆಲವು ಭಾಗಗಳು.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದರಿಂದಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಹಾಗೂ ನೀರಿನ ಕರವನ್ನು ತುಂಬಬೇಕೆಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೂಸಿನ ಮನೆಗಳು ಮಕ್ಕಳ ಬೌದ್ಧಿಕ ಬೆಳವಣಿಗೆ ಸಹಕಾರಿ: ಇಒ ದುಂಡಪ್ಪ ತುರಾದಿ



ಕೊಪ್ಪಳ : ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಕೂಸಿನ ಮನೆಗಳು ಗ್ರಾಮೀಣ ಭಾಗಕ್ಕೆ ಸಹಕಾರಿಯಾಗಿದೆಂದು ಕೊಪ್ಪಳ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಕರೆ ನೀಡಿದರು.

ಅವರು ಶನಿವಾರ ಕೊಪ್ಪಳ ತಾಲೂಕ ಪಂಚಾಯತಿಯ ಸಾಸಭಾಂಗಣದಲ್ಲಿ ಕೂಸಿನ ಮನೆಯ ಆರೈಕೆದಾರರಿಗೆ ಏರ್ಪಡಿಸಿದ್ದ 7 ದಿನಗಳ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಕೂಸಿನ ಮನೆಗಳು ಮಕ್ಕಳಿಗೆ ಬೇಕಾದ ಕಲಿಕಾ ಪೂರಕ ಚಟುವಟಿಕೆಗಳನ್ನು ಜರುಗಿಸಲು ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಲು ಗ್ರಾಮ ಪಂಚಾಯತಿಗೆ ಬಿಡುಗಡೆಯಾದ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಮಕ್ಕಳ ಆರೈಕೆದಾರರು ಕೂಸಿನ ಮನೆಗೆ ದಾಖಲಾಗುವ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಆರೈಕೆ ಮಾಡಬೇಕೆಂದರು.

\ಕೂಸಿನ ಮನೆಯ ಮಕ್ಕಳನ್ನು ತಮ್ಮ ಮಕ್ಕಳಂತೆ ಆರೈಕೆ ಮಾಡಿ ಅವರಿಗೆ ಆಹಾರವನ್ನು ಕ್ರಮಬದ್ದವಾಗಿ ನೀಡುವಂತೆ ತಿಳಿಸಿದರು. ಕೂಸಿನ ಮನೆಗೆ ನಿಗದಿಪಡಿಸಲಾದ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. ಮಕ್ಕಳಿಗೆ ಸಂಬಂಧಿಸಿದ ವಿಷಯವಾಗಿರುವದರಿಂದ ಯಾವುದೇ ರೀತಿಯಾಗಿ ನಿರ್ಲಕ್ಷ್ಯವಹಿಸುವಂತಿಲ್ಲವೆಂದರು. ಪ್ರತಿ ತಿಂಗಳಿಗೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ ಜರುಗಿಸುವದರ ಜೊತೆಗೆ ಪ್ರತಿ ಮಗುವಿನ ತೂಕ ಮತ್ತು ಆರೋಗ್ಯದ ಬಗ್ಗೆ ನಿಗಾವಹಿಸಲು ಪಾಲಕರಿಗೆ ಮಾಹಿತಿ ನೀಡಬೇಕೆಂದರು.

ನರೇಗಾ ಸಹಾಯಕ ನಿರ್ದೇಶಕ ಯಂಕಪ್ಪ ಮಾತನಾಡಿ, 7 ದಿನಗಳ ಕಾಲ ತರಬೇತಿಯನ್ನು ನೀಡಲಾಗಿದ್ದು ಆರೈಕೆದಾರರು ಆಸಕ್ತವಹಿಸಿ ಕೂಸಿನ ಮನೆಯನ್ನು ಮಾದರಿ ಕೂಸಿನ ಮನೆಯನ್ನಾಗಿ ನಿರ್ಮಿಸುವಲ್ಲಿ ನಿಮ್ಮಗಳ ಪಾತ್ರ ಬಹು ಮುಖ್ಯವಾಗಿದೆ. ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳನ್ನು ಜರುಗಿಸುವದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆಯಾಗುತ್ತದೆ ಎಂದು ಹೇಳಿದರು.

ಶಿಬಿರಾರ್ಥಿಗಳು ತರಬೇತಿ ಕುರಿತು ಅನಿಸಿಕೆ ವ್ಯಕ್ತಪಡಿಸಿದರು. ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಮಹೇಶ್, ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್, ವ್ಯವಸ್ಥಾಪಕ ಬಸವರಾಜ ಪಾಟೀಲ್, ವಿಷಯ ನಿರ್ವಾಹಕ ಬಸವರಾಜ ಬಳಿಗಾರ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ಮಾಸ್ಟರ್ ಟ್ರೈನರಗಳಾದ ಜಯಶ್ರೀ, ಉಷಾ, ಎಚ್.ಎಸ್.ಹೊನ್ನುಂಚಿ ಸೇರಿದಂತೆ ಶಿಬಿರಾರ್ಥಿಗಳು ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ರೋಜಗಾರ ದಿವಸ ಆಚರಣೆ

ಕಾರವಾರ - ದುಡಿಯುವ ಕೈಗಳಿಗೆ ಕೆಲಸ ಕೊಟ್ಟು, ಆರ್ಥಿಕ ಅಭಿವೃದ್ಧಿಯೊಂದಿಗೆ ಗ್ರಾಮೀಣ ಪ್ರದೇಶಗಳ ಸಮಗ್ರ ಸಬಲೀಕರಣಕ್ಕೆ ನೆರವಾಗುವ ನಿಟ್ಟಿನಲ್ಲಿ ನರೇಗಾದಡಿ ಸಮುದಾಯ ಕಾಮಗಾರಿಗಳಲ್ಲಿ ಕೂಲಿ ಕೆಲಸದೊಂದಿಗೆ ವೈಯಕ್ತಿಕ ಕಾಮಗಾರಿಗಳ ಮೂಲಕ ಶಾಶ್ವತ ಆಸ್ತಿ ಸೃಜನೆಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಕಲ್ಪಿಸಿಕೊಟ್ಟಿರುವ ಅವಕಾಶವನ್ನು ಹಳ್ಳಿಗಾಡಿನ ಬಡ ಗ್ರಾಮೀಣ ಜನರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೋಡಂಬಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಂಜೀವಯ್ಯ ಹಿರೇಮಠ ಹೇಳಿದರು.

ಮುಂಡಗೋಡ ತಾಲ್ಲೂಕಿನ ಕೋಡಂಬಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭದ್ರಾಪುರ ಹಾಗೂ ರಾಮಸಪುರ ಗ್ರಾಮದ ರಾಮಾಪುರ ಪ್ಲಾಟ್‌ನಲ್ಲಿ ನರೇಗಾದಡಿ ಮಾನವ ದಿನಗಳ ಸೃಜನೆಗಾಗಿ ಐಇಸಿ ಚಟುವಟಿಕೆಗಳಡಿ ಜನಜಾಗೃತಿ ಹಿನ್ನಲೆಯಲ್ಲಿ ಶುಕ್ರವಾರ ಹಮ್ಮಿಕೊಂಡ ರೋಜಗಾರ ದಿವಸ ಆಚರಣೆ, ಮನೆ-ಮನೆ ಭೇಟಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನರೇಗಾ ಮಾಹಿತಿ, 2025-26ನೇ ಸಾಲಿನ ಕ್ರಿಯಾ ಯೋಜನೆ ತಯಾರಿಕೆ ಹಾಗೂ ಏಕಿಕೃತ ಸಹಾಯವಾಣಿ ಸಂಖ್ಯೆ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯತ್‌ನಿಂದ ಅನುಮೋದಿತ ಕ್ರಿಯಾ ಯೋಜನೆಯಡಿ ಅಗತ್ಯ ಕಾಮಗಾರಿ




ಕೈಗೊಳ್ಳುವ ಮೂಲಕ ಹೆಚ್ಚು ಹೆಚ್ಚು ಕೂಲಿಕಾರರಿಗೆ ನರೇಗಾದಡಿ ಕೂಲಿ ಕೆಲಸ ನೀಡಲಾಗುತ್ತಿದೆ. ಗ್ರಾಮ ಪಂಚಾಯತ್‌ಗೆ ನೀಡಲಾದ ನಿಗದಿತ ಮಾನವ ದಿನಗಳ ಸೃಜನೆಯ ಗುರಿ ಸಾಧಿಸಬೇಕಿದ್ದು, ಈ ನಿಟ್ಟಿನಲ್ಲಿ ಮನೆ-ಮನೆ ಭೇಟಿ ಮೂಲಕ ಗ್ರಾಮಸ್ಥರಿಗೆ ನರೇಗಾದಡಿ ಸಿಗುವ ಸೌಲಭ್ಯಗಳ ಕುರಿತು ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ.

ಗ್ರಾಮದ ಜನರು ಸಹಕಾರ ನೀಡುವ ಮೂಲಕ ನರೇಗಾದಡಿ ಸಿಗುವ ಕೂಲಿ ಕೆಲಸ ಪಡೆದುಕೊಳ್ಳಬೇಕು ಎಂದರು.

ಐಇಸಿ ಸಂಯೋಜಕ ಫಕ್ಕೀರಪ್ಪ ತುಮ್ಮಣ್ಣನವರ ಮಾತನಾಡಿ, ನರೇಗಾದಡಿ ಅಡಿಕೆ, ಪಪ್ಪಾಯಿ, ಚಿಕ್ಕು, ಪೇರಲ, ದಾಳಿಂಬೆ, ಡ್ರ್ಯಾಗನ್ ಫ್ರೂಟ್‌ನಂತಹ ವಿವಿಧ ತೋಟಗಾರಿಕೆ ಬೆಳೆಗಳು ಹಾಗೂ ದನದ ಕೊಟ್ಟಿಗೆ, ಕುರಿ, ಕೋಳಿ, ಮೇಕೆ, ಹಂದಿ ಶೆಡ್, ಬಯೋ ಗ್ಯಾಸ್ ಘಟಕ, ಕೊಳವೆ ಬಾವಿ ಮರುಪೂರಣ ಘಟಕ, ಕೃಷಿ ಹೊಂಡ, ಬಾವಿ ನಿರ್ಮಾಣ ಸೇರಿದಂತೆ ವೈಯಕ್ತಿಕ ಕಾಮಗಾರಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಇದೇವೇಳೆ ನರೇಗಾ ಮಾಹಿತಿ, 2025-26ನೇ ಸಾಲಿನ ಕ್ರಿಯಾ ಯೋಜನೆ ತಯಾರಿಕೆ ಹಾಗೂ ಏಕಿಕೃತ ಸಹಾಯವಾಣಿ ಸಂಖ್ಯೆ ಮಾಹಿತಿಯುಳ್ಳ ಕರಪತ್ರಗಳನ್ನು ಹಂಚಿ ಗ್ರಾಮಸ್ಥರಿಗೆ ಜಾಗೃತಿ ಮೂಡಿಸಲಾಯಿತು.

ಗ್ರಾಮ ಪಂಚಾಯತಿ ರಾಮಾಪುರ ಸದಸ್ಯ ಅಶೋಕ ಅರಳೇಶ್ವರ, ಕಾರ್ಯದರ್ಶಿ ನಾಗರಾಜ ಕುರಿಕಾಯರ, ಬಿಲ್ ಕಲೆಕ್ಟರ್ ನಾಗಯ್ಯ ಹಿರೇಮಠ, ವಾಟರ್ ಮನ್‌ಗಳಾದ ಇಸ್ಮಾಯಿಲ್, ಈರಪ್ಪ ಬೆನಕಣ್ಣನವರ, ಸಿಬ್ಬಂದಿ ಲಕ್ಷ್ಮಣ ಕ್ಯಾರಕಟ್ಟಿ, ಶಿಲ್ಪಾ ಬಾತಿ, ಗ್ರಾಮ ಕಾಯಕ ಮಿತ್ರ ಸುಧಾ ಅಣ್ಣಪ್ಪ ವಡ್ಡರ, ಭದ್ರಾಪುರ ಹಾಗೂ ರಾಮಾಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

## ನಾಟಿ ಕೋಳಿ ಮರಿಗಳ ಉಚಿತವಾಗಿ ವಿತರಣೆಗಾಗಿ ಆಸಕ್ತರಿಂದ ಅರ್ಜಿ ಆಹ್ವಾನ

ಧಾರವಾಡ : 2024-25 ನೇ ಸಾಲಿಗೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದ ರೈತ ಮಹಿಳೆಯರಿಗೆ ಅವರ ಆದಾಯ ಹೆಚ್ಚಿಸುವ ಕಾರ್ಯಕ್ರಮಕ್ಕಾಗಿ 45 ದಿನಗಳ (5 ವಾರದ) ವಯಸ್ಸಿನ 20 ನಾಟಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಧಾರವಾಡ ಜಿಲ್ಲೆಯ ವಿವಿಧ ವಿಧಾನ ಸಭಾ ಮತಕ್ಷೇತ್ರಗಳ ವ್ಯಾಪ್ತಿಯ ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ, ಅಣ್ಣಿಗೇರಿ, ಅಳ್ನಾವರ, ನವಲಗುಂದ ಮತ್ತು ಹುಬ್ಬಳ್ಳಿ ನಗರ ತಾಲ್ಲೂಕುಗಳಿಂದ ನಿಗದಿಪಡಿಸಿದ ಗುರಿಗಳಂತೆ ಅರ್ಜಿಗಳನ್ನು ಪಡೆಯಲಾಗುತ್ತದೆ.

ಆಸಕ್ತರು ಡಿಸೆಂಬರ 30, 2024 ರೊಳಗಾಗಿ ಧಾರವಾಡ, ಹುಬ್ಬಳ್ಳಿ, ಅಳ್ನಾವರ, ಕಲಘಟಗಿ, ಕುಂದಗೋಳ, ನವಲಗುಂದ ಮತ್ತು ಅಣ್ಣಿಗೇರಿ ತಾಲ್ಲೂಕಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶು ಆಸ್ಪತ್ರೆಗಳಲ್ಲಿನ ಮುಖ್ಯ ಪಶುವೈದ್ಯಾಧಿಕಾರಿಗಳನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಲಘಟಗಿ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ: 9880867636, ಅಳ್ನಾವರ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ: 9449688500, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ದೂರವಾಣಿ ಸಂಖ್ಯೆ: 9740829378, ಕುಂದಗೋಳ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ:9448641515, ಹುಬ್ಬಳ್ಳಿ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ:9108579345, ನವಲಗುಂದ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ: 9845733081, ಅಣ್ಣಿಗೇರಿ ಪಶು ಆಸ್ಪತ್ರೆ ದೂರವಾಣಿ ಸಂಖ್ಯೆ: 9538615871 ಗೆ ಸಂಪರ್ಕಿಸಬಹುದು ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಧಾರವಾಡ ಗೃಹ ರಕ್ಷಕದಳ ಕಲ್ಲಯ್ಯ ಶಿ. ಹೆಬ್ಬಳ್ಳಿಮಠ ಅವರಿಗೆ ಪುನರ ಮನನ ತರಬೇತಿಯಲ್ಲಿ ಚಿನ್ನದ ಪದಕ



ಧಾರವಾಡ : ಧಾರವಾಡ ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರಾದ ಸುನೀಲ್ ಸರೂರ ಅವರ ಮಾರ್ಗದರ್ಶನದ ಮೇರೆಗೆ ಬಳ್ಳಾರಿ ಜಿಲ್ಲೆ ಮೀನಹಳ್ಳಿಯ ಗೃಹರಕ್ಷಕ ಮತ್ತು ಪೌರರಕ್ಷಣಾ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ಡಿಸೆಂಬರ 2 ರಿಂದ 12, 2024 ರವರೆಗೆ ನಡೆದ ಪುನರ ಮನನ ತರಬೇತಿಗೆ ಕಲಘಟಗಿ ಘಟಕದ ಕಲ್ಲಯ್ಯ. ಶಿ. ಹೆಬ್ಬಳ್ಳಿಮಠ ಎದೆ ಸಂ:779 ಅವರನ್ನು ನೇಮಿಸಲಾಗಿತ್ತು.

ಪುನರ ಮನನ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಚಿನ್ನದ ಪದಕ ಪಡೆದು ಧಾರವಾಡ ಜಿಲ್ಲಾ ಗೃಹರಕ್ಷಕ ದಳಕ್ಕೆ ಹೆಸರು, ಕೀರ್ತಿಯನ್ನು ತಂದಿದ್ದಾರೆ. ಇವರ ಸಾಧನೆಯನ್ನು ಮೆಚ್ಚಿ ಜಿಲ್ಲಾ ಸಮಾದೇಷ್ಟರು. ಕಛೇರಿ ಸಿಬ್ಬಂದಿ ವರ್ಗದವರು ಹಾಗೂ ಧಾರವಾಡ ಜಿಲ್ಲೆಯ ಎಲ್ಲಾ ಗೃಹರಕ್ಷಕ ಅಧಿಕಾರಿಗಳು, ಗೃಹರಕ್ಷಕರು, ಗೃಹರಕ್ಷಕಿಂಯರು ಅಭಿನಂದಿಸಿದ್ದಾರೆ.

## ಅತ್ಯುತ್ತಮ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ ಹಾಗೂ ಗೌರವಧನ ಸತ್ಕಾರಕ್ಕೆ ಅರ್ಜಿ ಆಹ್ವಾನ

ಕೊಪ್ಪಳ : ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ, ರೈತ ಮಹಿಳೆಯರ ಸಾಧನೆಗಳನ್ನು ಹಾಗೂ ಕೃಷಿಯಲ್ಲಿನ ಅವರ ವೈಶಿಷ್ಟತೆಯನ್ನು ಗುರುತಿಸಿ ರಾಜ್ಯಮಟ್ಟದಲ್ಲಿಸತ್ಕರಿಸುವ ಉದ್ದೇಶವನ್ನು ಕೃಷಿ ತಂತ್ರಜ್ಞರ ಸಂಸ್ಥೆಯು ಹೊಂದಿದ್ದು, ಮಹಿಳೆಯೊಬ್ಬರಿಗೆ "ಅತ್ಯುತ್ತಮ ಶ್ರೇಷ್ಠ ಪ್ರಗತಿಪರ ರೈತ ಮಹಿಳೆ" ಎಂಬ ಪ್ರಶಸ್ತಿ ಹಾಗೂ ಗೌರವದೊಂದಿಗೆ 2025ರ ಮಾರ್ಚ್ 8ರ ಸಮಾರಂಭದಲ್ಲಿ ಸತ್ಕರಿಸಲು ಜಿಲ್ಲೆಯ ಅರ್ಹ ರೈತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಸಣ್ಣ ರೈತ ಸದಸ್ಯರಾಗಿರಲೇಬೇಕು. ಅಂದರೆ ಅರ್ಜಿದಾರರು ಹೆಚ್ಚಂದರೆ 05 ಎಕರೆ ಮಾತ್ರ ಜಮೀನು ಹೊಂದಿರಬೇಕು. ದೊಡ್ಡ ರೈತರನ್ನು ಪ್ರಶಸ್ತಿಗೆ ಪರಿಗಣಿಸುವಂತಿಲ್ಲ. ಅರ್ಜಿದಾರರು ಈಗಾಗಲೇ ರಾಜ್ಯಮಟ್ಟದಲ್ಲಿ ಸಂದಾಯವಾಗುವ ಕೃಷಿ ಪಂಡಿತ, ಉದಯೋನ್ಮುಖ ಕೃಷಿ ಪಂಡಿತ ಅಥವಾ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಇತ್ಯಾದಿಗಳನ್ನು ಪಡೆದಿದ್ದಲ್ಲಿ ಅಂತವರ ಅರ್ಜಿಯನ್ನು ಪರಿಗಣಿಸುವುದಿಲ್ಲ.

ಅರ್ಜಿಯನ್ನು 2025ರ ಜನವರಿ 20 ರೊಳಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಅಂತಿಮವಾಗಿ ಆಸಕ್ತ ರೈತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಈ ಪ್ರಶಸ್ತಿಗೆ ಆಯ್ಕೆಯಾದ ರೈತ ಮಹಿಳೆಯರನ್ನು ಮಾರ್ಚ್ 8 ರಂದು ಏರ್ಪಡಿಸುವ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"ಯ ಸಮಾರಂಭದಲ್ಲಿ ಗೌರವಧನದೊಂದಿಗೆ ಸತ್ಕರಿಸಲಾಗುವುದು ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಯುಧ ಅನುಜ್ಞಪ್ತಿ ಕುರಿತು

ಕಾರವಾರ - ಬೆಳೆ ರಕ್ಷಣೆ ಹಾಗೂ ಸ್ವ ರಕ್ಷಣೆ ಕುರಿತು ಆಯುಧ ಅನುಜ್ಞಪ್ತಿಯನ್ನು ಹೊಂದಿರುವ ಅನುಜ್ಞಪ್ತಿದಾರರು ಮೃತಪಟ್ಟ ನಂತರ ಅನುಜ್ಞಪ್ತಿಗಳನ್ನು ಕಡ್ಡಾಯವಾಗಿ ರದ್ದುಪಡಿಸಬೇಕಾಗಿರುತ್ತದೆ. ಕಾರಣ ಮೃತಪಟ್ಟ ಅನುಜ್ಞಪ್ತಿದಾರರ ಅವಲಂಬಿತರು ಅನುಜ್ಞಪ್ತಿದಾರರ ಮರಣ ಪತ್ರದ ಪ್ರತಿ ಹಾಗೂ ಮೂಲ ಆಯುಧ ಅನುಜ್ಞಪ್ತಿಯೊಂದಿಗೆ ನೇರವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಮತ್ತು ಬಂದೂಕನ್ನು ಸಂಬಂಧಿಸಿದ ಠಾಣೆಯಲ್ಲಿ ಠೇವಣಿ ಇರಿಸಬೇಕು.

ಒಂದು ವೇಳೆ ಮೂಲ ಆಯುಧ ಅನುಜ್ಞಪ್ತಿ ಕಳೆದು ಹೋಗಿದ್ದಲ್ಲಿ ಸಂಬಂಧಿಸಿದ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಿಸಿ, ಸ್ವೀಕೃತಿ ಹಾಗೂ ಅನುಜ್ಞಪ್ತಿ ಸಿಗದ ಬಗ್ಗೆ ಹಿಂಬರವನ್ನು ಲಗತ್ತಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರ್ಥಪೂರ್ಣ ವಿಶ್ವಮಾನವ ದಿನಾಚರಣೆ ಹಾಗೂ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಗೆ ಕ್ರಮ

# ಕುವೆಂಪು ಅವರು ವಿಶ್ವ ಚೇತನರಾಗಿದ್ದಾರೆ: ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ

ಕೊಪ್ಪಳ : ಕುವೆಂಪು ವಿಶ್ವ ಚೇತನರಾಗಿದ್ದು, ಅವರನ್ನು ಯಾವುದೇ ಒಂದು ಧರ್ಮಕ್ಕೆಸೀಮಿತಗೊಳಿಸಬಾರದು. ಈ ಮಹನೀಯರು ಸಮಾಜದ ಎಲ್ಲರ ಒಳಿತನ್ನೇ ಬಯಸಿದ್ದರು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಶ್ವಮಾನವ ದಿನಾಚರಣೆ ಮತ್ತು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಸಂಬಂಧ ಕರೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಇದೇ ಡಿ. 30 ರಂದು ವಿಶ್ವಮಾನವ ದಿನಾಚರಣೆಯನ್ನು ಹಾಗೂ 2025ರ ಜನವರಿ 1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ವಿಶ್ವಮಾನವ ದಿನಾಚರಣೆ:



ವಿಶ್ವಮಾನವ ದಿನಾಚರಣೆಯನ್ನಾಗಿ ಆಚರಿಸಲಾಗುವ ರಾಷ್ಟ್ರ ಕವಿ ಕುವೆಂಪುರವರ ಜನ್ಮದಿನ ಆಚರಣೆಯನ್ನು ಡಿ. 29ರಂದು ಭಾನುವಾರ ಬರುವ ಕಾರಣ ಅದರ ಬದಲಿಗೆ ಡಿ. 30 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸಾಹಿತ್ಯ ಭನವದಲ್ಲಿ ಆಚರಿಸುವ ಕುರಿತು ಸಭೆಯಲ್ಲಿ ನಿರ್ಧರಿಸಲಾಯಿತು. ಅಂದು ನಡೆಯುವ ವೇದಿಕೆ ಸಮಾರಂಭದಲ್ಲಿ ರಾಷ್ಟ್ರ ಕವಿ ಕುವೆಂಪುರವರ ಭಾವಚಿತ್ರಕ್ಕೆ ಪೂಜೆ ನಂತರ ಕುವೆಂಪು ಅವರ ರಚಿತ ಗೀತೆಗಳಿಗೆ ವಿವಿಧ ಶಾಲಾ ಮಕ್ಕಳಿಂದ ನೃತ್ಯ ರೂಪಕ, ವಿಶೇಷ ಉಪನ್ಯಾಸ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದು ಹೇಳಿದರು.

ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ: ಜನವರಿ 1 ರಂದು ಬೆಳಿಗ್ಗೆ 11 ಗಂಟೆಗೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ವೇದಿಕೆ ಸಮಾರಂಭವನ್ನು ಕೊಪ್ಪಳ ನಗರದ ಸಾಹಿತ್ಯ ಭನವದಲ್ಲಿ ಆಯೋಜಿಸಲಾಗುವುದು. ಕಾರ್ಯಕ್ರಮದಲ್ಲಿ ಪೂಜೆ, ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಕುರಿತು ವಿಶೇಷ ಉಪನ್ಯಾಸ ಹಾಗೂ ಇತರ ಕಾರ್ಯಕ್ರಮಗಳು ನಡೆಯಲಿದೆ ಎಂದರು.

ವಿಶ್ವಮಾನವ ದಿನಾಚರಣೆ ಹಾಗೂ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳು ಮತ್ತು ಕಛೇರಿಗಳಲ್ಲಿ ಆಚರಿಸುವಂತಾಗಬೇಕು. ಸಮಾರಂಭಗಳ ದಿನದಂದು, ಸ್ವಚ್ಛತೆಗೆ ಕ್ರಮ ವಹಿಸಿ.

ವೇದಿಕೆ ಸಮಾರಂಭದಲ್ಲಿ ಪಾಲ್ಗೊಳ್ಳುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಕಾರ್ಯಕ್ರಮಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ಅಪರ ಜಿಲ್ಲಾದಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾಹಿತಿಗಳು, ಸಮಾಜದ ಮುಖಂಡರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರ ನಾಗರಾಜ್, ಸಾಹಿತಿಗಳಾದ ಮಹಾಂತೇಶ ಮಲ್ಲನಗೌಡರ ಹಾಗೂ ಪುಷ್ಪಲತಾ ಏಳುಬಾವಿ, ಗಣ್ಯರಾದ ಮಹಾಂತೇಶ ಕೊತಬಾಳ, ಬಸವರಾಜ ಶೀಲವಂತರ, ಶಿವಪ್ಪ ಹಡಪದ, ವಿಶ್ವಕರ್ಮ ಸಮುದಾಯದ ಮುಖಂಡರಾದ ಈಶಪ್ಪ ಬಡಿಗೇರ, ರುದ್ರಪ್ಪ ಬಡಿಗೇರ, ಉಮೇಶ ಪತ್ತಾರ, ಶೇಖರಪ್ಪ ಬಡಿಗೇರ, ದೇವೇಂದ್ರಪ್ಪ ರಾಜೂರು, ಬ್ರಹ್ಮಾನಂದ ಬಡಿಗೇರ ಹಾಗೂ ಮುಂತಾದವರು ಭಾಗವಹಿಸಿದ್ದರು.

# ಕಾಳಿದಾಸನ ಕೆಡಿ ಅವತಾರ



ಎಂಬತ್ತರ ದಶಕದ ಕಥೆ ಜನರ ಕಾತುರ

ಡಿ. 24ಕ್ಕೆ ಕೆಡಿ ಮೊದಲ ಹಾಡು

ಸ್ಯಾಂಡಲ್‌ವುಡ್ ಸ್ಟೈಲಿಶ್ ನಿರ್ದೇಶಕ ಜೋಗಿ ಪ್ರೇಮ್ 'ಕೆಡಿ' ಚಿತ್ರದಲ್ಲಿ ಎಂಭತ್ತರ ದಶಕದ ಕಥೆ ಹೇಳಹೊರಟಿದ್ದಾರೆ. ಕಾಳಿದಾಸನಾಗಿ ಆಕ್ಷನ್ ಪ್ರಿನ್ಸ್ ದ್ರುವ ಅಭಿಯಯಿಸುತ್ತಿದ್ದು ಇಡೀ ಭಾರತವಷ್ಟೆಯಲ್ಲ ಜಗತ್ತಿನ ಜನರು ಕೆಡಿಗಾಗಿ ಎದುರು ನೋಡುತ್ತಿದ್ದಾರೆ. ಈಗಾಗಲೇ ಮಾತಿನ ಭಾಗದ ಚಿತ್ರೀಕರಣ ಮುಗಿಸಿಕೊಂಡು 2 ಹಾಡುಗಳ ಶೂಟಿಂಗ್ ಮಾತ್ರವೇ ಬಾಕಿ ಉಳಿಸಿಕೊಂಡಿದೆ.

ಇತ್ತೀಚೆಗೆ ಈ ಚಿತ್ರದ ಡಬ್ಬಿಂಗ್ ಕಾರ್ಯ ಆಕಾಶ್ ರೆಕಾರ್ಡಿಂಗ್ ಸ್ಟುಡಿಯೋದಲ್ಲಿ ಶುರುವಾಗಿದೆ. ಚಿತ್ರದ ಮೊದಲ ಹಾಡಿನ ಬಿಡುಗಡೆ ಕುರಿತು ಮಾಹಿತಿ ಹಂಚಿಕೊಳ್ಳಲು ಮಾಧ್ಯಮಗಳ ಮುಂದೆ ಬಂದಿತ್ತು ಚಿತ್ರತಂಡ.

'ಕೆಡಿ'ಗೆ ಕಳೆದ ವಾರದಿಂದ ಡಬ್ಬಿಂಗ್ ಶುರುವಾಗಿದೆ ಎಂದು ಮಾತು ಆರಂಭಿಸಿದ ಪ್ರೇಮ್ , 2 ಹಾಡುಗಳ ಶೂಟಿಂಗ್ ಮಾತ್ರ ಬಾಕಿಯಿದೆ. ಅದರಲ್ಲಿ ಒಂದು ಹಾಡನ್ನು ಸೆಟ್ ಹಾಕಿ ಶೂಟ್ ಮಾಡುತ್ತಿದ್ದೇವೆ. ಇನ್ನೊಂದು ಹಾಡಿನ್ನು ವಿದೇಶದಲ್ಲಿ ಚಿತ್ರೀಕರಿಸುವ ಯೋಜನೆಯಿದೆ. ಇನ್ನು ಡಿ. 24ರಂದು ನಮ್ಮ ಚಿತ್ರದ ಶಿವ ಶಿವ ಎಂಬ ಮೊದಲ ಹಾಡು ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗುತ್ತಿದೆ. 'ಕೆಡಿ' ಇಂಡಿಯಾದಲ್ಲೇ ದೊಡ್ಡ ಆಲ್ಬಂ ಆಗಿ ಹೊರಹೊಮ್ಮಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು ನಿರ್ದೇಶಕ ಪ್ರೇಮ್.

ನಾಯಕ ಧ್ರುವ ಮಾತನಾಡಿ ಇದೇ 24ರಂದು ನಮ್ಮ ಚಿತ್ರದ ಮೊದಲ ಹಾಡು ಬಿಡುಗಡೆಯಾಗುತ್ತಿದೆ. ಅಭಿಮಾನಿಗಳಿಗೆ ರಂಜಿಸಲು ನಾನು ಪಾತ್ರದಲ್ಲಿ ಎಷ್ಟೇ ರಿಸ್ಕ್ ಇದ್ದರೂ ಎದು–ರಿಸುತ್ತೇನೆ. ಎಂದು ಹೇಳಿದರು.

ಆಡಿಯೋ ಮಾತ್ರ ದೊಡ್ಡ ಮೊತ್ತಕ್ಕೆ ಹೋಗಿದೆ. ನಿಮಗೆ ಅಗ್ರಿಮೆಂಟ್ ಸಹ ತೋರಿಸುತ್ತೇನೆ. 20 ಎಕರೆ ಪ್ರದೇಶದಲ್ಲಿ ಸೆಟ್ ಹಾಕಿ ಬಹುತೇಕ ಶೂಟಿಂಗ್ ನಡೆಸಿದ್ದೇವೆ. ಸದ್ಯದಲ್ಲೇ ನಾವು ಸಹ ರಿಲೀಸ್ ಡೇಟನ್ನು ಅನೌನ್ಸ್ ಮಾಡುತ್ತೇವೆ ಎನ್ನುತ್ತಾರೆ ನಿರ್ಮಾಪಕ ಸುಪ್ರಿತ್.

ಸಂಜಯ್‌ದತ್ ಧಕ್ ದೇವನಾಗಿ ಮಿಂಚಿದ್ದಾರೆ. ಅಲ್ಲದೆ ಶಿಲ್ಪಾ ಶೆಟ್ಟಿ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್, ನಟ ರಮೇಶ್ ಅರವಿಂದ್, ರೀಷ್ಮಾ ನಾಣಯ್ಯ ಸೇರಿದಂತೆ ಬಹುದೊಡ್ಡ ತಾರಾಗಣವಿದೆ.

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ದಿ ಬೆಸ್ಟ್ ಎನ್ನುವ 200 ಜನ ಸಂಗೀತಗಾರರನ್ನು ಕಲೆಹಾಕಿ ಈ ಚಿತ್ರದ ಮ್ಯೂಸಿಕ್ ಕಂಪೋಜ್ ಮಾಡಿದ್ದಾರೆ. ಇನ್ನು ಕೆಡಿ ಚಿತ್ರಕ್ಕೆ ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಛಾಯಾಗ್ರಹಣವಿದೆ.

ಒಂದು ಜನಪದ ಶೈಲಿಯ ಹಾಡು ಚಿತ್ರದಲ್ಲಿದೆ. ಇಲ್ಲಿ ಮೊದಲ ಹಾಡನ್ನು ರಿಲೀಸ್ ಮಾಡಿ ನಂತರ ಮತ್ತೊಂದು ಸಾಂಗನ್ನು ಮುಂಬೈನಲ್ಲಿ ಬಿಡುಗಡೆಮಾಡುವ ಯೋಜನೆಯಿದೆ. ಅಲ್ಲದೆ ಎಐ ಟೆಕ್ನಾಲಜಿ ಮೂಲಕ ದ್ರುವ ಅವರ ಧ್ವನಿಯೇ ಎಲ್ಲಾ ಭಾಷೆಗಳಲ್ಲೂ ಇರುವಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಕೆಡಿಯಲ್ಲಿ ಬ್ಲಡ್ ಶೇಡ್ ಇದ್ದರೂ ಕಥೆಗೆ ಪೂರಕ.

# ನಾಳೆ ಪ್ರಪಂಚದಾದ್ಯಂತ UI ದರ್ಶನ



2 ಸಾವಿರಕ್ಕೂ ಅಧಿಕ ಸ್ಕ್ರೀನ್ ಗಳಲ್ಲಿ ಬಿಡುಗಡೆ

ಒಂಬತ್ತು ವರ್ಷಗಳ ನಂತರ ರಿಯಲ್ ಸ್ಟಾರ್ ಉಪೇಂದ್ರ ಅವರು ನಿರ್ದೇಶಿಸಿ, ನಟಿಸಿರುವ ಬಹು ನಿರೀಕ್ಷಿತ 'ಗಖ' ಚಿತ್ರ ಡಿಸೆಂಬರ್ 20 ರಂದು ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ವಿಶ್ವದಾದ್ಯಂತ 2000ಕ್ಕೂ ಅಧಿಕ ಸ್ಕ್ರೀನ್ ಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಪೋಸ್ಟರ್, ಹಾಡು, ಟೀಸರ್ ಹಾಗೂ ವಾರ್ನರ್ ಮೂಲಕ ಈಗಾಗಲೇ ಕುತೂಹಲ ಮೂಡಿಸಿರುವ ಈ ಚಿತ್ರವನ್ನು ನೋಡಲು ಉಪೇಂದ್ರ ಅವರ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್ ಪ್ರೈಸಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ನವೀನ್ ಮನೋಹರ್ ಅವರ ಸಹ ನಿರ್ಮಾಣ ಹಾಗೂ ತುಳಸಿರಾಮ ನಾಯ್ಡು(ಲಹರಿ ವೇಲು), ಜಿ.ರಮೇಶ್, ಜಿ.ಆನಂದ್, ಚಂದ್ರು ಮನೋಹರನ್ ಹಾಗೂ ನಾಗೇಂದ್ರ ಅವರು ಕಾರ್ಯಕಾರಿ ನಿರ್ಮಾಪಕರಾಗಿರುವ ಈ ಚಿತ್ರದಲ್ಲಿ ಉಪೇಂದ್ರ ಅವರಿಗೆ ಜೋಡಿಯಾಗಿ ರೀಷ್ಮಾ ನಾಣಯ್ಯ ನಟಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ಹೆಸರಾಂತ ಕೆ.ವಿ.ಎನ್ ಪ್ರೊಡಕ್ಷನ್ಸ್ ಸಂಸ್ಥೆ ಈ ಚಿತ್ರವನ್ನು ವಿತರಣೆ ಮಾಡುತ್ತಿದೆ.

# ಪದೇ ಪದೇ ಸ್ನಾಯು ಸೆಳೆತ ಕಾಡುತ್ತಾ ಅಂತಹವರಿಗೆ ಬಾಳೆಹಣ್ಣು, ಎಳನೀರು ಬೆಸ್ಟ್

ಕೆಲವರಿಗೆ ರಾತ್ರಿ ಮಲಗಿದ ನಂತರ ಕಾಲಿನ ಸ್ನಾಯುಗಳಲ್ಲಿ ಸೆಳೆತ ಉಂಟಾಗುತ್ತದೆ. ಇದು ವಿಪರೀತ ನೋವನ್ನು ಹೊಂದಿದ್ದು, ಒಂದೆರಡು ನಿಮಿಷಗಳ ಕಾಲ ಇರುತ್ತದೆ. ನಿಮಗೂ ಈ ರೀತಿ ಸ್ನಾಯು ಸೆಳೆಯ ಉಂಟಾದರೆ ನಿಮ್ಮ ಡಯೆಟ್‌ನಲ್ಲಿ ಬಾಳೆಹಣ್ಣು ಹಾಗೂ ಎಳನೀರನ್ನು ಸೇರಿಸುವುದು ಉತ್ತಮ.



ಚಳಿಗಾಲದಲ್ಲಿ ಸ್ನಾಯು ಸೆಳೆತದ ಸಮಸ್ಯೆ ಕಾಡುವುದು ಬಹಳ ಸಾಮಾನ್ಯ. ಚಳಿಗಾಲದಲ್ಲಿ ಬೀಸುವ ತಣ್ಣನೆಯ ಗಾಳಿಯಿಂದ ವಯೋವೃದ್ಧರ ಜತೆಗೆ ಯುವಕರು, ಮಕ್ಕಳು ಕೂಡ ಕೆಲವೊಮ್ಮೆ ಸ್ನಾಯು ಸೆಳೆತದ ಸಮಸ್ಯೆಯಿಂದ ಬಳಲುತ್ತಾರೆ. ಸ್ನಾಯು ಸೆಳೆತದಿಂದಾಗಿ ಸ್ನಾಯುಗಳಲ್ಲಿ ಒತ್ತಡ ಮತ್ತು ನೋವು ಕಾಣಿಸಿಕೊಳ್ಳುತ್ತದೆ. ಅನೇಕ ಬಾರಿ ಸ್ನಾಯು ಸೆಳೆತದಿಂದಾಗಿ ನಡೆಯಲು, ಎದ್ದೇಳಲು ಮತ್ತು ದೀರ್ಘಕಾಲ ಒಂದೇ ಭಂಗಿಯಲ್ಲಿ ಕುಳಿತುಕೊಳ್ಳಲು ಕಷ್ಟವಾಗುತ್ತದೆ. ಚಳಿಗಾಲದಲ್ಲಿ ಸ್ನಾಯು ಸೆಳೆತ ಸಮಸ್ಯೆಯಿಂದ ನೀವು ಸಹ ತೊಂದರೆಗೊಳಗಾಗಿದ್ದರೆ ಮನೆಮದ್ದೊಂದನ್ನು ತಿಳಿಸಿದ್ದಾರೆ ವೈದ್ಯರು.

**ಬಾಳೆಹಣ್ಣು ಮತ್ತು ಎಳನೀರು**

ನೀವೂ ಕೂಡಾ ಸ್ನಾಯು ಸೆಳೆತದ ಸಮಸ್ಯೆ ಹೊಂದಿದ್ದರೆ ನಿಮ್ಮ ಆಹಾರದಲ್ಲಿ ಬಾಳೆಹಣ್ಣು ಮತ್ತು ಎಳನೀರನ್ನು ಸೇ–ರಿಸುವುದು ಉತ್ತಮ ಎನ್ನಲಾಗುತ್ತಿದೆ. ಸ್ನಾಯು ಸೆಳೆತದಿಂದ ಮುಕ್ತಿ ನೀಡಲು ಬಾಳೆಹಣ್ಣು ಮತ್ತು ತೆಂಗಿನ ನೀರು ತುಂಬಾ ಸಹಕಾರಿ ಎಂದು ದೆಹಲಿಯ ನ್ಯೂರಾಲಜಿಸ್ಟ್ ಎಂಡಿ ಮೆಡಿಸಿನ್ ಮತ್ತು ಡಿಎಂ ನ್ಯೂರಾಲಜಿಸ್ಟ್ ಡಾ.ಪ್ರಿಯಾಂಕಾ ಶೆರಾವತ್ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ವೀಡಿಯೊದಲ್ಲಿ ಹಂಚಿಕೊಂಡಿದ್ದಾರೆ. ಸ್ನಾಯು ಸೆಳೆತದಿಂದ ಪರಿಹಾರ ಪಡೆಯಲು ಎಳನೀರು ಮತ್ತು ಬಾಳೆಹಣ್ಣನ್ನು ಹೇಗೆ ಸೇವಿಸಬೇಕು ಎಂದು ತಿಳಿಯೋಣ.

**ಸ್ನಾಯು ಸೆಳೆತಕ್ಕೆ ಕಾರಣಗಳು**

ಸ್ನಾಯು ಸೆಳೆತದ ಹಿಂದೆ ಹಲವಾರು ಕಾರಣಗಳಿವೆ ಎಂದು ನರವಿಜ್ಞಾನಿಗಳು ಹೇಳುತ್ತಾರೆ. ಅವುಗಳೆಂದರೆ:?

ವಿದ್ಯುದ್ವಿಚ್ಛೇದ್ಯಗಳ ಕೊರತೆ: ದೇಹದಲ್ಲಿ ಪೊಟ್ಯಾಸಿಯಮ್, ಸೋಡಿಯಂ ಮತ್ತು ಮೆಗ್ನೀಸಿಯಮ್ನಂತಹ ವಿದ್ಯುದ್ವಿಚ್ಛೇದ್ಯಗಳ ಕೊರತೆಯಿಂದಾಗಿ, ಸ್ನಾಯುಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ, ಇದರಿಂದಾಗಿ ಸ್ನಾಯು ಸೆಳೆತ ಉಂಟಾಗುತ್ತದೆ.

ಹೆವಿ ವರ್ಕೌಟ್: ದೇಹದ ಸಾಮರ್ಥ್ಯಕ್ಕಿಂತ ಹೆಚ್ಚು ಭಾರ ಮತ್ತು ತೂಕದ ವರ್ಕೌಟ್ ಮಾಡುವುದ–ರಿಂದ ಸ್ನಾಯು ಸೆಳೆತದ ಸಮಸ್ಯೆಯೂ ಉಂಟಾಗುತ್ತದೆ.

ಪೋಷಕಾಂಶಗಳ ಕೊರತೆ: ಜೀವಸತ್ವಗಳು ಮತ್ತು ಖನಿಜಗಳ ಕೊರತೆಯು ಸ್ನಾಯುವಿನ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಇದರಿಂದಾಗಿ ಸ್ನಾಯು ಸೆಳೆತದ ಸಮಸ್ಯೆ ಉಂಟಾಗಬಹುದು.

**ಬಾಳೆಹಣ್ಣು**

ಬಾಳೆಹಣ್ಣು ಪೊಟ್ಯಾಸಿಯಮ್, ಮೆಗ್ನೀಸಿಯಮ್ ಮತ್ತು ಕಾರ್ಬೋಹೈಡ್ರೇಟ್‌ಗಳ ಅತ್ಯುತ್ತಮ ಮೂಲವಾಗಿದೆ. ಈ ಎಲ್ಲಾ ಪೋಷಕಾಂಶಗಳು ಸ್ನಾಯುವಿನ ಆರೋಗ್ಯಕ್ಕೆ ಬಹಳ ಮುಖ್ಯ. ಪ್ರತಿದಿನ ಕೇವಲ ಒಂದು ಬಾಳೆಹಣ್ಣು ತಿನ್ನುವುದ–ರಿಂದ ದೇಹದಲ್ಲಿನ ಪೊಟ್ಯಾಸಿಯಮ್ ಕೊರತೆಯನ್ನು ಸರಿದೂಗಿಸುತ್ತದೆ. ಇದು ಸ್ನಾಯುವಿನ ಸಂಕೋಚನ ಮತ್ತು ಒತ್ತಡದಿಂದ ಪರಿಹಾರವನ್ನು ನೀಡುತ್ತದೆ. ಅಲ್ಲದೆ, ಬಾಳೆಹಣ್ಣಿನಲ್ಲಿ ಇರುವ ಕಾರ್ಬೋಹೈಡ್ರೇಟ್‌ಗಳು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ, ಇದು ದಣಿದ ಸ್ನಾಯುಗಳಿಗೆ ಪರಿಹಾರವನ್ನು ನೀಡುತ್ತದೆ.

**ಎಳ ನೀರು**

ಎಳನೀರು ಎಲೆಕ್ಟ್ರೋಲೈಟ್‌ಗಳಲ್ಲಿ ಸಮೃದ್ಧವಾಗಿದೆ, ಇದು ದೇಹದಲ್ಲಿ ಜಲಸಂಚಯನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಡಾ.ಪ್ರಿಯಾಂಕಾ ಶೆರಾವತ್ ಅವರ ಪ್ರಕಾರ ಎಳ ನೀರಿನಲ್ಲಿ ಪೊಟ್ಯಾಸಿಯಮ್, ಸೋಡಿಯಂ ಮತ್ತು ಮೆಗ್ನೀಸಿಯಮ್ ಸಮೃದ್ಧವಾಗಿದೆ, ಇದು ಸ್ನಾಯುಗಳನ್ನು ವಿಶ್ರಾಂತಿ ಮಾಡಲು ಸಹಕಾರಿಯಾಗಿದೆ. ದೈನಂದಿನ ವ್ಯಾಯಾಮದ ನಂತರ ಎಳ ನೀರನ್ನು ಸೇವಿಸಿದರೆ, ಅದು ದೇಹದಿಂದ ವಿಷವನ್ನು ಹೊರಹಾಕುತ್ತದೆ ಮತ್ತು ಆಯಾಸವನ್ನು ಕಡಿಮೆ ಮಾಡುವ ಮೂಲಕ ಸ್ನಾಯುಗಳ ಊತವನ್ನು ಕಡಿಮೆ ಮಾಡುತ್ತದೆ.

**ಸರಿಯಾದ ಆಹಾರ ಹಾಗೂ ವ್ಯಾಯಾಮ**

ಸ್ನಾಯು ಸೆಳೆತವು ನೋವಿನ ಸ್ಥಿತಿಯಾಗಿರಬಹುದು. ಆದ–'ರೆ ಕೆಲವು ನೈಸರ್ಗಿಕ ವಸ್ತುಗಳನ್ನು ಆಹಾರದ ಭಾಗವಾಗಿ ಮಾಡಿಕೊಳ್ಳುವ ಮೂಲಕ ಇದರಿಂದ ಪರಿಹಾರವನ್ನು ಪಡೆಯಬಹುದು.

ನಿಯಮಿತ ಸೇವನೆ ಮತ್ತು ಸರಿಯಾದ ಅಭ್ಯಾಸಗಳನ್ನು ಅಳವಡಿಸಿಕೊಂಡರೆ ಈ ಸಮಸ್ಯೆಯಿಂದ ಮುಕ್ತಿ ಪಡೆಯಬಹುದು ಎನ್ನುತ್ತಾರೆ ನರವಿಜ್ಞಾನಿಗಳು.





# ಈ ಸೂಚನೆಗಳು ಕಂಡುಬಂದರೆ, ನಿಮಗೆ ಕೊಲೆಸ್ಟ್ರಾಲ್ ಕಮ್ಮಿ ಇದ್ದು, ಹೃದಯ ಸೇಫ್ ಎಂದರ್ಥ!



ನಿಮ್ಮ ಹೃದಯದ ಆರೋಗ್ಯ ನಿಮ್ಮ ಕೈಯಲ್ಲಿದೆ. ಕೊಲೆಸ್ಟ್ರಾಲ್ ಹೆಚ್ಚಾದರೆ ಅದರ ಬಗ್ಗೆ ನಿರ್ಲಕ್ಷ್ಯ ಬೇಡ. ಉತ್ತಮ ಕೊಲೆಸ್ಟ್ರಾಲ್ ನಿರ್ವಹಣೆ ಬಹಳ ಅಗತ್ಯ. ನಿಮ್ಮಲ್ಲಿ ಈ ಸೂಚನೆಗಳು ಇದ್ದರೆ ಕೊಲೆಸ್ಟ್ರಾಲ್ ಕಂಟ್ರೋಲ್ ನಲ್ಲಿದೆ ಎಂದು ತಿಳಿದುಕೊಳ್ಳಿ.

ಮನುಷ್ಯನಿಗೆ ಹೃದಯ ಚೆನ್ನಾಗಿದ್ದರೆ, ಆತನ ದೈಹಿಕ ಆರೋಗ್ಯ ಕೂಡ ಉತ್ತಮವಾಗಿರುತ್ತದೆ. ಆರೋಗ್ಯಕರವಾದ ಹೃದಯ ಬಡಿತ ಕೊಲೆಸ್ಟ್ರಾಲ್ ಪ್ರಮಾಣ ಸರಿ ಇದೆ ಎಂದು ತೋರುತ್ತದೆ. ಏಕೆಂದರೆ ಕೊಲೆಸ್ಟ್ರಾಲ್ ಹೆಚ್ಚು ಕಡಿಮೆ ಆದರೆ ಅದರಿಂದ ಹೃದಯ ಬಡಿತ ಏರುಪೇರು ಆಗುತ್ತದೆ. ಜೊತೆಗೆ ಬೇರೆ ಬೇರೆ ತರಹದ ಸೂಚನೆಗಳು ಕೂಡ ಕಂಡುಬರುತ್ತವೆ. ಹೀಗಾಗಿ ಹೃದಯವನ್ನು ಆರೋಗ್ಯವಾಗಿ ಕಾಪಾಡಿಕೊಳ್ಳುವುದು ನಮ್ಮ ಕೈಯಲ್ಲಿದೆ. ಅದಕ್ಕಾಗಿ ಅವಶ್ಯಕವಾದ ಉತ್ತಮ ಅಭ್ಯಾಸಗಳನ್ನು ರೂಡಿಸಿಕೊಳ್ಳಬೇಕು. ಆಹಾರ ಪದ್ಧತಿ ಮತ್ತು ಜೀವನಶೈಲಿ ಸರಿ ಇರಬೇಕು. ಕೆಲವೊಂದು ಲಕ್ಷಣಗಳಿಂದ ನಮ್ಮ ಹೃದಯ ಆರೋಗ್ಯವಾಗಿಲ್ಲ ಎಂದು ಗೊತ್ತಾಗುತ್ತದೆ. ಅದೇ ರೀತಿ ಇನ್ನು ಕೆಲವು ಲಕ್ಷಣಗಳು ನಮಗೆ ಹೃದಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇಲ್ಲ ಎನ್ನುವುದನ್ನು ತೋರಿಸುತ್ತದೆ. ಅವುಗಳ ಬಗ್ಗೆ ಇಲ್ಲಿ ತಿಳಿದುಕೊಳ್ಳೋಣ.

**ನಾರ್ಮಲ್ ಬ್ಲಡ್ ಟೆಸ್ಟ್ ವರದಿ**

ಆಗಾಗ ಬ್ಲಡ್ ಟೆಸ್ಟ್ ಮಾಡಿಸಬೇಕು ಎಂದು ಹೇಳುತ್ತಾರೆ. ಹಾಗೆ ಮಾಡಿಸಿದ ಬ್ಲಡ್ ಟೆಸ್ಟ್ ವರದಿ ನಾರ್ಮಲ್ ಎಂದು ಬಂದರೆ ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಲಿಪಿಡ್ ಪ್ರೊಫೈಲ್ ಪರೀಕ್ಷೆಯಲ್ಲಿ ಕೆಟ್ಟ ಹಾಗೂ ಒಳ್ಳೆಯ ಕೊಲೆಸ್ಟ್ರಾಲ್ ದೇಹದಲ್ಲಿ ಯಾವ ಪ್ರಮಾಣದಲ್ಲಿದೆ ಎಂಬ ಬಗ್ಗೆ ಮಾಹಿತಿ ಸಿಗುತ್ತದೆ. ಇಲ್ಲಿ ಸಹಜ ಫಲಿತಾಂಶ ಬಂದರೆ ನಿಮ್ಮ ಕೊಲೆಸ್ಟ್ರಾಲ್ ನಾರ್ಮಲ್ ಎಂದು ಹೇಳಬಹುದು.

**ಆರೋಗ್ಯಕರವಾದ ದೈಹಿಕ ತೂಕ**

ದೈಹಿಕ ತೂಕವನ್ನು ನಿರ್ವಹಣೆ ಮಾಡಿಕೊಳ್ಳುವುದು ಕೂಡ ಕೊಲೆಸ್ಟ್ರಾಲ್ ಕಂಟ್ರೋಲ್ ಮಾಡಿಕೊಳ್ಳಲು ಸಹಜ ಮಾರ್ಗವಾಗಿದೆ. ಯಾವಾಗ ದೇಹದ ತೂಕ ಹೆಚ್ಚಾಗುತ್ತದೆ ಆ ಸಂದರ್ಭದಲ್ಲಿ ಬೇಡದ ಕೆಟ್ಟ ಕೊಲೆಸ್ಟ್ರಾಲ್ ಹೆಚ್ಚಾಗುತ್ತದೆ ಮತ್ತು ಒಳ್ಳೆಯ ಮತ್ತು ಅವಶ್ಯಕತೆ ಇರುವ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ.

**ನಿಯಮಿತ ದೈಹಿಕ ಚಟುವಟಿಕೆ**

ಕೊಲೆಸ್ಟ್ರಾಲ್ ಕಂಟ್ರೋಲ್ ಮಾಡಿಕೊಳ್ಳಲು ನಮ್ಮ ದೈಹಿಕ ಚಟುವಟಿಕೆ ಕೂಡ ಬಹಳ ಮುಖ್ಯವಾಗುತ್ತದೆ. ಬೆಳಗ್ಗೆ ಸಂಜೆ ವಾಕಿಂಗ್ ಮಾಡುವುದು, ವ್ಯಾಯಾಮ ಮಾಡುವುದು, ಯೋಗ, ಧ್ಯಾನ ಇವುಗಳಿಂದ ಕೊಲೆಸ್ಟ್ರಾಲ್ ಕಂಟ್ರೋಲ್ ಮಾಡಿಕೊಳ್ಳಬಹುದು. ಕೊಲೆಸ್ಟ್ರಾಲ್ ನಿಯಂತ್ರಣ ಮಾಡಿಕೊಳ್ಳಲು ಅನುಕೂಲಕರವಾದ ವ್ಯಾಯಾಮಗಳನ್ನು ಅಭ್ಯಾಸ ಮಾಡಿಕೊಳ್ಳಿ.



**ಉತ್ತಮ ಆಹಾರ ಪದ್ಧತಿ**

ನೀವು ತಿನ್ನುವ ಆಹಾರದಲ್ಲಿ ಹಣ್ಣು ತರಕಾರಿಗಳು ಹೆಚ್ಚಾಗಿರಲಿ. ಆರೋಗ್ಯಕರವಾದ ಕೊಬ್ಬಿನ ಅಂಶಗಳು ನಿಮ್ಮ ದೇಹಕ್ಕೆ ಸಿಗಲು ಇದು ನೆರವಾಗುತ್ತದೆ. ಪೌಷ್ಟಿಕಾಂಶ ಹೆಚ್ಚಾಗಿರುವ ಆಹಾರಗಳನ್ನು ಸೇವಿಸುವು ದರಿಂದ ದೇಹಕ್ಕೆ ಸಾಕಷ್ಟು ಅನುಕೂಲವಿದೆ. ಬೇಡದ ಕೆಟ್ಟ ಕೊಲೆಸ್ಟ್ರಾಲ್ ನಿಯಂತ್ರಣ ಮಾಡಲು ಸಂಸ್ಕರಿಸಿದ ಆಹಾರ ಪದಾರ್ಥಗಳು, ಅನಾರೋ ಗ್ಯಕರ ಜಿಡ್ಡಿನ ಅಂಶ ಇರುವ ಆಹಾರಗಳನ್ನು ಸೇವಿಸುವುದನ್ನು ಕಡಿಮೆ ಮಾಡಿ.

**ಕಡಿಮೆ ಮಾನಸಿಕ ಒತ್ತಡ**


ಮಾನಸಿಕ ಒತ್ತಡವನ್ನು ನಿರ್ವಹಣೆ ಮಾಡಿಕೊಳ್ಳುವುದು ಕೂಡ ದೇಹದಲ್ಲಿ ಬೇಡದ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಬಲ್ಲದು. ಮಾನಸಿಕ ಒತ್ತಡದ ನಿರ್ವಹಣೆಗೆ ಅನುಕೂಲಕರವಾದ ಯೋಗ, ಧ್ಯಾನ ಹಾಗೂ ಉಸಿರಾಟದ ವ್ಯಾಯಾಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಇದು ಆರೋಗ್ಯಕರ ಹೃದಯವನ್ನು ನಿರ್ವಹಣೆ ಮಾಡಲು ಸಹಾಯವಾಗುತ್ತದೆ.

**ರೋಗಲಕ್ಷಣಗಳು ಇಲ್ಲದೆ ಇರುವುದು**

ದೇಹದಲ್ಲಿ ಕೊಲೆಸ್ಟ್ರಾಲ್ ಹೆಚ್ಚಾದರೆ ಅದರಿಂದ ಕೆಲವೊಂದು ಸೂಚನೆ ಗಳು ಸಿಗುತ್ತವೆ. ಕೆಲವರಿಗೆ ಕೊಲೆಸ್ಟ್ರಾಲ್ ಹೆಚ್ಚಾದರೂ ಯಾವುದೇ ರೋಗ ಲಕ್ಷಣಗಳು ಕಾಣಿಸುವುದಿಲ್ಲ. ಹೀಗಾಗಿ ಆಗಾಗ ಪರೀಕ್ಷೆ ಮಾಡಿಸಿಕೊಳ್ಳು ವುದು ಬಹಳ ಉತ್ತಮ. ನೀವು ಸಾಧಾರಣವಾಗಿ ಆರೋಗ್ಯಕರವಾಗಿ ಮತ್ತು ಶಕ್ತಿಯುತವಾಗಿ ಇದ್ದರೆ ನಿಮಗೆ ಕೊಲೆಸ್ಟ್ರಾಲ್ ಲಕ್ಷಣಗಳು ಇರುವುದಿಲ್ಲ. ಈ ಸಂದರ್ಭದಲ್ಲಿ ನಿಮ್ಮ ಹೃದಯ ಕೂಡ ಆರೋಗ್ಯಕರ ವಾಗಿದೆ ಎಂದು ಅಂದುಕೊಳ್ಳಬಹುದು.

**ಕೊನೆ ಮಾತು**

ಚಳಿಗಾಲದ ಸಂದರ್ಭದಲ್ಲಿ ಹೃದಯದ ಆರೋಗ್ಯ ಏರುಪೇರಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ನಿಮ್ಮ ಜೀವನ ಶೈಲಿಯ ಅಭ್ಯಾಸ ಸರಿ ಇದ್ದರೆ, ಹೃದಯ ಮತ್ತು ಕೊಲೆಸ್ಟ್ರಾಲ್ ನಿರ್ವಹಣೆ ಸುಲಭವಾಗುತ್ತದೆ. ಒಂದು ವೇಳೆ ನಿಮ್ಮ ದೇಹದಲ್ಲಿ ಯಾವುದೇ ತರಹದ ರೋಗಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಳ್ಳಿ.



# ಮುಟ್ಟಿನ ದಿನಗಳಲ್ಲಿ ಯೋನಿ ಭಾಗದಲ್ಲಿ ದುರ್ಗಂಧ ಬರುತ್ತಿದೆಯೇ ? ಈ ಸಮಸ್ಯೆಯಿಂದ ಪಾರಾಗಲು ಇಲ್ಲಿದೆ ಸರಳ ಸೂತ್ರ

ಮಹಿಳೆಯರು ಪ್ರತಿ ತಿಂಗಳು ಋತುಸ್ರಾವಕ್ಕೆ ಒಳಗಾಗುವುದು ಒಂದು ನೈಸರ್ಗಿಕ ಪ್ರಕ್ರಿಯೆ ಆಗಿದೆ. ಈ ದಿನಗಳಲ್ಲಿ ಮಹಿಳೆಯರ ಆರೋಗ್ಯ ಬಹಳ ಸೂಕ್ಷ್ಮವಾಗಿರುತ್ತದೆ. ಕೆಲವ–ರಿಗೆ ಮುಟ್ಟಿನ ಸಂದರ್ಭದಲ್ಲಿ ಯೋನಿಯ ಭಾಗದಲ್ಲಿ ದುರ್ಗಂಧ ಉಂಟಾಗುತ್ತದೆ. ಏಕೆ ಹೀಗಾಗುತ್ತದೆ ? ಇದಕ್ಕಿರುವ ನೈಸರ್ಗಿಕ ಪರಿಹಾರಗಳೇನು ? ಇಲ್ಲಿದೆ ಮಾಹಿತಿ

ಋತುಸ್ರಾವದ ದಿನಗಳು ಎಂದರೆ ಮಹಿಳೆಯರಿಗೆ ಪ್ರತಿ ತಿಂಗಳು ಬರುವ ಕಷ್ಟದ ದಿನಗಳು ಎಂದು ಹೇಳಬಹುದು. ಇದು ಹೆಣ್ತನವನ್ನು ಸಂಭ್ರಮಿಸುವ ಸಮಯವಾಗಿದ್ದರೂ ಸಹ ಮುಟ್ಟಿನ ದಿನಗಳಲ್ಲಿ ಮಹಿಳೆಯರು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಕೆಲವ–ರಿಗೆ ಸೊಂಟ ನೋವು, ಇನ್ನೂ ಕೆಲವ–ರಿಗೆ ಹೊಟ್ಟೆ ನೋವು, ಬೆನ್ನು ನೋವು , ಹೀಗೆ ನಾನಾ ಸಮಸ್ಯೆಗಳು ಎದುರಾಗುತ್ತದೆ. ಇವುಗಳ ಜೊತೆಯಲ್ಲಿ ಮುಟ್ಟಿನ ಸಂದರ್ಭದಲ್ಲಿ ಯೋನಿಯಲ್ಲಿ ಕೆಟ್ಟ ವಾಸನೆ ಬರುವ ಸಮಸ್ಯೆ ಕೂಡ ಅನೇಕರಿಗೆ ಇರುತ್ತದೆ. ಹೀಗಾಗಿ ಈ ವಾಸನೆಯಿಂದ ಮಹಿಳೆಯರು ಮುಜುಗರ ಹಾಗೂ ಕಿರಿಕಿರ ಅನುಭವಿಸುತ್ತಾರೆ. ಆದ–'ರೆ ಇದಕ್ಕಾಗಿ ಚಿಂತಿಸಬೇಕಿಲ್ಲ. ನೀವು ಮುಟ್ಟಿನ ಸಮಯದಲ್ಲಿ ಎದುರಾಗುವ ಈ ರೀತಿಯ ಸಮಸ್ಯೆಗಳಿಂದ ಪಾರಾಗುವುದು ಹೇಗೆ? ಎನ್ನುವುದನ್ನು ತಿಳಿದುಕೊಳ್ಳೋಣ.

**ಮುಟ್ಟಿನ ಅವಧಿಯಲ್ಲಿ ಯೋನಿಯಲ್ಲಿ ಕಾಣಿಸುವ ವಾಸನೆ ಸಮಸ್ಯೆಗೆ ಇಲ್ಲಿದೆ ನೈಸರ್ಗಿಕ ಪರಿಹಾರ :**

ಸ್ವಚ್ಛತೆ ಕಾಪಾಡಿಕೊಳ್ಳಿ : ಯೋನಿಯಿಂದ ದುರ್ಗಂಧ ಹೊರಬರಲು ಪ್ರಮುಖ ಕಾರಣವೆಂದರೆ ಸ್ವಚ್ಛತೆಯ ಕೊರತೆ. ಹೀಗಾಗಿ ಸೌಮ್ಯವಾದ ನೈರ್ಮಲ್ಯ ಉತ್ಪನ್ನಗಳನ್ನು ಬಳಸಿಕೊಂಡು ನೀವು ನಿತ್ಯ ಯೋನಿ ಪ್ರದೇಶವನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಈ ಮೂಲಕ ಯೋನಿ ಭಾಗದಲ್ಲಿ ಬ್ಯಾಕ್ಟೀ–ರಿಯಾ ಶೇಖರಣೆಯನ್ನು ತಡೆಗಟ್ಟಲು ಸಾಧ್ಯವಿದೆ. ಇದೊಂದು ಸರಳ ಪರಿಹಾರದ ಮಾರ್ಗವಾಗಿದ್ದರೂ ಸಹ ನಿಮ್ಮ ಸಮಸ್ಯೆಗೆ ಉತ್ತಮ ಪರಿಹಾರವನ್ನು ನೀಡುತ್ತದೆ. ಹಾಗೂ ನಿಮ್ಮ ಯೋನಿಯ ಆರೋಗ್ಯವನ್ನು ಕಾಪಾಡುತ್ತದೆ.

**ನೀರು ಕುಡಿಯಿರಿ :**

ದೇಹದಲ್ಲಿ ನೀರಿನ ಅಂಶ ಕಡಿಮೆಯಾದಂತೆಲ್ಲ ಯೋನಿಯಲ್ಲಿ ವಾಸನೆ ಹೆಚ್ಚುತ್ತದೆ. ಹೀಗಾಗಿ ನಿಯಮಿತವಾಗಿ ನೀರು ಸೇವನೆ ಮಾಡುತ್ತಿರಬೇಕು. ಇದು ಯೋನಿಯಲ್ಲಿ ಬರುವ ವಾಸನೆಯನ್ನು ಕಡಿಮೆ ಮಾಡುತ್ತದೆ. ಹಾಗೂ ನಿಮ್ಮ ಒಟ್ಟಾರೆ ಆರೋಗ್ಯವನ್ನೂ ಸರಿಯಾಗಿ ಇಡುತ್ತದೆ. ಇವುಗಳು ನಿಮಗೆ ಅತ್ಯಂತ ಸರಳ ಎಂದು ಎನಿಸಿದರೂ ಸಹ ನೀವು ಅನುಭವಿಸುತ್ತಿರುವ ಸಮಸ್ಯೆಯ ಪರಿಹಾರಕ್ಕೆ ಪರಿಣಾಮಕಾರಿ ಮಾರ್ಗವಾಗಿದೆ.



**ತಾಜಾ ಹಣ್ಣು ಹಾಗೂ ತರಕಾರಿಗಳ ಸೇವನೆ**

ನಾವು ಸೇವಿಸುವ ಆಹಾರ ಕೂಡ ಯೋನಿಯಲ್ಲಿ ದುರ್ಗಂಧ ಬರಲು ಕಾರಣವಾಗಬಹುದು. ಹೀಗಾಗಿ ಆರೋಗ್ಯಕರ ಆಹಾರ ಸೇವನೆ ಕೂಡ ಪ್ರಮುಖ ಪಾತ್ರ ವಹಿಸುತ್ತದೆ. ಆದಷ್ಟು ನಿಮ್ಮ ನಿತ್ಯದ ಆಹಾರ ಕ್ರಮದಲ್ಲಿ ಹಣ್ಣು ಹಾಗೂ ತರಕಾರಿಗಳ ಸೇವನೆಗೆ ಆದ್ಯತೆಯನ್ನು ನೀಡಿ. ಇದ ರಿಂದಲೂ ನೀವು ಯೋನಿಯ ದುರ್ಗಂಧ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಬಹುದಾಗಿದೆ.

**ತೆಂಗಿನೆಣ್ಣೆ ಬಳಕೆ**

ನೈಸರ್ಗಿಕ ತೆಂಗಿನ ಎಣ್ಣೆಯಲ್ಲಿ ಆ?ಯಂಟಿಮೈಕ್ರೋಬಯಲ್ ಅಂಶ ಇರುತ್ತದೆ. ಯೋನಿಯ ಹೊರಭಾಗದಲ್ಲಿ ನಿತ್ಯ ಸ್ವಲ್ಪ ಪ್ರಮಾಣದಲ್ಲಿ ತೆಂಗಿನ ಎಣ್ಣೆಯನ್ನು ಲೇಪಿಸಿಕೊಳ್ಳುವುದರಿಂದ ನೀವು ಯೋನಿಯಲ್ಲಿ ವಾಸನೆ ಉಂಟಾಗಲು ಕಾರಣವಾಗುವಂತಹ ಬ್ಯಾಕ್ಟೀರಿಯಾಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದಾಗಿದೆ.

**ಸುಗಂಧಭರಿತ ಉತ್ಪನ್ನಗಳ ಬಳಕೆ ನಿಲ್ಲಿಸಿಬಿಡಿ**

ಯೋನಿಯಲ್ಲಿ ದುರ್ಗಂಧ ಬರುತ್ತಿದ್ದಂತೆಯೇ ಬಹುತೇಕ ಮಹಿಳೆಯರು ಆ ವಾಸನೆಯನ್ನು ತಡೆಗಟ್ಟಲು ಸುಗಂಧಭ–ರಿತ ಸೋಪು, ಸ್ಪ್ರೇ, ಲೋಷನ್?ಗಳನ್ನು ಬಳಕೆ ಮಾಡಲು ಆರಂಭಿಸುತ್ತಾರೆ. ಮಾರುಕಟ್ಟೆಗಳಲ್ಲಿಯೂ ಇದಕ್ಕೆಂದೇ ಅನೇಕ ರಾಸಾಯನಿಕಗಳು ಲಭ್ಯವಿದೆ ಕೂಡ. ಆದರೆ ಯೋನಿ ಎನ್ನುವುದು ಅತ್ಯಂತ ಸೂಕ್ಷ್ಮವಾದ ಪ್ರದೇಶವಾಗಿರುವ ಹಿನ್ನೆಲೆಯಲ್ಲಿ ಎಂದಿಗೂ ರಾಸಾಯನಿಕ ಉತ್ಪನ್ನಗಳನ್ನು ಬಳಕೆ ಮಾಡಲೇಬೇಡಿ.

**ಆ್ಯಪಲ್ ಸೀಡರ್ ವಿನೆಗರ್**

ಆ್ಯಪಲ್ ಸೀಡರ್ ವಿನೆಗರ್‌ಗಳು ನಿಮ್ಮ ದೇಹದ ಠಿಊ ಅಂಶವನ್ನು ಸಮತೋಲನಗೊಳಿಸುವ ಮೂಲಕ ದುರ್ಗಂಧ ಬಾರದಂತೆ ನೋಡಿ ಕೊಳ್ಳುತ್ತದೆ. ಆ?ಯಪಲ್ ಸೀಡರ್ ವಿನೇಗರ್ಗೆ ನೀರನ್ನು ಸೇರಿಸಿ ನಿಮ್ಮ ಯೋನಿಯನ್ನು ತೊಳೆದುಕೊಳ್ಳುವ ಮೂಲಕ ನೀವು ದುರ್ಗಂಧ ಬಾರದಂತೆ ತಡೆಯಬಹುದಾಗಿದೆ.

**ನೆನಪಿಡಿ.. ಈ ಸಮಸ್ಯೆ ಇರುವುದು ಕೇವಲ ನಿಮಗೆ ಮಾತ್ರವಲ್ಲ :**

ಅನೇಕ ಮಹಿಳೆಯರು ತಮಗೆ ಮಾತ್ರ ಈ ಸಮಸ್ಯೆಯಿದೆ ಎಂದು ಕೊಂಡು ಯಾರೊಂದಿಗಾದರೂ ಹೇಳಿಕೊಳ್ಳಲು ತೀವ್ರ ಮುಜುಗರ ಅನುಭವಿಸು ತ್ತಾರೆ. ಆದರೆ ನೀವು ಈ ರೀತಿಯ ನೈಸರ್ಗಿಕ ವಿಧಾನಗಳ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳ ಬಹುದಾಗಿದೆ.

ಒಂದು ವೇಳೆ ಪರಿಸ್ಥಿತಿ ಕೈಮೀರಿ ಹೋಗಿದ್ದರೆ ಯಾವುದೇ ಮುಜುಗರ ಪಡದೇ ಸ್ತ್ರೀ ರೋಗ ತಜ್ಞರನ್ನು ಭೇಟಿಯಾಗಿ ನಿಮ್ಮ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ. ಜಗತ್ತಿನ ಅದೆಷ್ಟೋ ಮಹಿಳೆಯರಿಗೆ ಈ ಸಮಸ್ಯೆಯಿದೆ. ಹೀಗಾಗಿ ನೀವು ಹಿಂಜ–ರಿಯುವ ಅಗತ್ಯವಿಲ್ಲ. ಮಹಿಳೆಯ ಒಟ್ಟಾರೆ ಆರೋಗ್ಯ ಕ್ಷೇಮವಾಗಿರಲು ನೈರ್ಮಲ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಹೀಗಾಗಿ ಎಂದಿಗೂ ಸ್ವಚ್ಛತೆಯನ್ನು ಕಾಯ್ದುಕೊಳ್ಳಿ. ?

# ವಿಶ್ವ ಧ್ಯಾನ ದಿನಾಚಾರಣೆ




ಗೋಕಾಕ :ತಾಲೂಕಿನ ಮಧಬಾಲ ಗ್ರಾಮದ ಸ್ವಾಮಿ ವಿವೇಕಾನಂದ ನವೋದಯ ತರಬೇತಿ ಕೇಂದ್ರದಲ್ಲಿ ಶ್ರೀ ವಿವೇಕಾನಂದ ಯೋಗ ಮತ್ತು ಸಂಸ್ಕೃತಿ ವಿಕಾಸ ಸಂಘ (ರಿ) ವತಿಯಿಂದ ವಿಶ್ವ ಧ್ಯಾನ ದಿನಾಚರಣೆಯನ್ನು ಆಚರಿಸಲಾಯಿತು

ಇಂದಿನ ವೇಗದ ಜಗತ್ತಿನಲ್ಲಿ, ಒತ್ತಡ, ಆತಂಕ ಮತ್ತು ಭಾವನಾತ್ಮಕ ಅಸಮತೋಲನ ಸಾಮಾನ್ಯವಾಗಿದೆ. ಧ್ಯಾನವು ಶಕ್ತಿಯುತವಾದ ಪ್ರತಿವಿಷವನ್ನು ನೀಡುತ್ತದೆ, ಮಾನಸಿಕ ಸ್ಪಷ್ಟತೆ, ಭಾವನಾತ್ಮಕ ಸ್ಥಿರತೆ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಸಕ್ರಿಯಗೊಳಿಸುತ್ತದೆ. ವೈಯಕ್ತಿಕ ಪ್ರಯೋಜನಗಳನ್ನು ಮೀರಿ, ಸಾಮೂಹಿಕ ಧ್ಯಾನವು ವಿಶ್ವಕ್ಕೆ ಶಾಂತಿಯ ಕಂಪನಗಳನ್ನು ಕಳುಹಿಸುತ್ತದೆ, ಹೆಚ್ಚು ಸಾಮರಸ್ಯದ ಜಾಗತಿಕ ಪ್ರಜ್ಞೆಗೆ ಕೊಡುಗೆ ನೀಡುತ್ತದೆ. ವರ್ಷದ ಸುದೀರ್ಘ ರಾತ್ರಿಯಲ್ಲಿ ಆಚರಿಸಲಾಗುವ ವಿಶ್ವ ಧ್ಯಾನ ದಿನವು ನಮ್ಮನ್ನು ಒಳಮುಖವಾಗಿ ತಿರುಗಿಸಲು, ಮೌನವನ್ನು ಸ್ವೀಕರಿಸಲು ಮತ್ತು ನಮ್ಮ ಅಂತರಂಗ ಮತ್ತು ದೈವಿಕತೆಯೊಂದಿಗಿನ ನಮ್ಮ ಸಂಪರ್ಕವನ್ನು ಪೋಷಿಸಲು ಆಹ್ವಾನಿಸುತ್ತದೆ ಎಂದು ಯೋಗ ಗುರು ಆನಂದ ಸೋರಗಾಂವಿ ಹೇಳಿದರು. ನವೋದಯ ತರಬೇತಿ ಕೇಂದ್ರದ ಮುಖ್ಯಸ್ಥೆ ಆರ್ ವಾಯ್ ಬುಸನ್ನವರ ಶಿಕ್ಷಕ ಬಿ ಎಂ ಹನ್ನಿಕೇರಿ ಗುರುನಾಥ ಮದಲಭಾವಿ ಇದ್ದರು.

# ಇಂದು ನೀಲಕಂಠೇಶ್ವರ ಸಂಸ್ಥೆಯಲ್ಲಿ ನಾದಸಿರಿ

ತೇರದಾಳ-ಇಲ್ಲಿನ ರಬಕವಿ ರಸ್ತೆಯಲ್ಲಿರುವ ಕುರುಹಿನಶೆಟ್ಟಿ ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯ 33ನೇ ವಾರ್ಷಿಕೋತ್ಸವ ನಿಮಿತ್ತ ಡಿ.24ರಂದು ನಾದಸಿರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಬಹುಮಾನ ವಿತರಣೆ ಕಾರ್ಯಕ್ರಮದ ಸಾನ್ನಿಧ್ಯವನ್ನು ಕಾಗವಾಡ ಗುರುದೇವ ಆಶ್ರಮದ ಯತೀಶ್ವರಾನಂದ ಶ್ರೀ ವಹಿಸುವರು. ಕುರುಹಿನಶೆಟ್ಟಿ ಸಂಘದ ಸ್ಥಳೀಯ ಘಟಕದ ಅಧ್ಯಕ್ಷ ಪರಪ್ಪ ಆಲಗುಂಡಿ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಬಿಇಒ ಎ.ಕೆ. ಬಸನ್ನವರ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಉಪಸ್ಥಿತರಿರುವರು. ಸಂಜೆ 6.30ಕ್ಕೆ ನಡೆಯುವ ನಾದಸಿರಿ ಕಾರ್ಯಕ್ರಮವನ್ನು ಶಾಸಕ ಸಿದ್ದು ಸವದಿ ಉದ್ಘಾಟಿಸುವರು. ಮೈಗುರು ಶಿವಾನಂದ ಮಠದ ಗುರುಪ್ರಸಾದ ಶ್ರೀ ಸಾನ್ನಿಧ್ಯ ವಹಿಸುವರು. ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀ, ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಉಪಾಧ್ಯಕ್ಷೆ ನಸ್ರೀನ್‌ಬಾನು ನಗಾರ್ಜಿ, ಬಿಜೆಪಿ ಮುಖಂಡ ಮನೋಹರ ಶಿರೋಳ, ಮಡಿವಾಳಪ್ಪ ಮುಂಡಾಸದ, ರುಸ್ತುಂ ನಿಪ್ಪಾನಿ, ಪುಷ್ಪಲತಾ ಬಂಕಾಪುರ, ಸಚಿನ ಕೊಡತೆ, ಕಾಶಿನಾಥ ರಾಠೋಡ ಗಿರೀಶ ಇರವಟ್ಟಿ ಅತಿಥಿಗಳಾಗಿ ಆಗಮಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಜಾತ್ರೋತ್ಸವ ಅಂಗವಾಗಿ ಜಿಲ್ಲಾ ಮಟ್ಟದ ಜಾನಪದ ಉತ್ಸವ : ಜೀವನವೆಂಬುದೇ ಒಂದು ಸಂಸ್ಕೃತಿ-ಭಜಂತ್ರಿ



ತಾಳಿಕೋಟೆ, ಜೀವನವೆಂಬುದು ಒಳ್ಳೆಯ ಸಂಸ್ಕೃತಿಯನ್ನು ಬಿಂಬಿಸುವಂತಹದ್ದಾಗಿದ್ದು ಇದುವೇ ಜನಪದ ಸಾಹಿತ್ಯವಾಗಿದೆ ಜನಪದದ ಜೀವನದ ಮೌಲ್ಯರೂಪಿಸಿದ್ದಲ್ಲದೇ ಸಾಹಿತ್ಯ ನಿರ್ಮಾಣಕ್ಕಾಗಿಯೇ ಮೂಲ ಬೇರಾಗಿದೆ ಎಂದು ವಿಜಯಪುರದ ಹಲಸಂಗಿ ಗೆಳೆಯರ ಪ್ರತಿಷ್ಠಾನದ ಸಂಚಾಲಕರಾದ ಪ್ರೋ.ದೊಡ್ಡಣ್ಣ ಬಜಂತ್ರಿ ಅವರು ಹೇಳಿದರು.

ರ´ ವಿ ವಾ ರ´ ರ´ ಂ ದ´ು ತಾಲೂಕಿನ ಮಿಣಜಗಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ(ದ್ಯಾಮವ್ವದೇವಿ) ಹಾಗೂ ಶ್ರೀ ಮಾಯಮ್ಮದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ಏರ್ಪಡಿಸಲಾದ ಜಿಲ್ಲಾ ಮಟ್ಟದ ಜಾನಪದ ಉತ್ಸವ ಕಾರ್ಯಕ್ರಮವನ್ನು ಡೊಳ್ಳು ಬಾರಿಸುವದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಕೃಷಿ ಕಾಯಕದಲ್ಲಿ ಬೇಸರಕೆ ಕಳೆದುಕೊಳ್ಳಲು ವಿವಿಧ ನಮುನೆಯ ಜನಪದ ಕಟ್ಟಿ ಹಾಡಿದವರು ಜನಪದದವರೇ ಆಗಿದ್ದಾರೆ ಜನಪದವೆಂಬುದು ಇದೊಂದು ಸಾಹಿತ್ಯವಾಗಿದೆ ಭೂಮಿಗೆ ತಾಯಿ ಎಂಬ ಸ್ಥಾನಮಾನ ನೀಡಲಾಗಿದ್ದು ಭೂಮಿ, ಗಿಡ, ಮರ, ಪ್ರಕೃತಿ, ಸೌಂದರ್ಯವನ್ನು ನಿರ್ಮಿಸಿದ್ದನ್ನು ಮರೆಯುವಂತಿಲ್ಲಾ ಜನಪದದ ಸಾಹಿತ್ಯದಲ್ಲಿ ಇವೆಲ್ಲವುಗಳನ್ನು ಅದ್ಭುತ್‌ವಾಗಿ ಹೊಗಳಿಕೆಯ ಮೂಲಕ ಜೀವನದ ಮೌಲ್ಯ ನೀಡಿರುವದು ಜನಪದ ಸಾಹಿತ್ಯವಾಗಿದೆ ಎಂದರು. ಇಂತಹ ಸಾಹಿತ್ಯ ಹಲಸಂಗಿ ಗೆಳೆಯರು ಜಾನಪದ ಸಾಹಿತ್ಯಕ್ಕೆ ಮೆರಗು ತರುವಂತಹ ಕಾರ್ಯ ಮಾಡಿದ್ದಾರೆ ನಾವುಕೂಡಾ ಈ ಕ್ಷೇತ್ರದಲ್ಲಿ ಮುಂದುವರೆಯಲು ಕಾರಣವಾಗಿದೆ ಎಂದು ಹೇಳಿದ ಪ್ರೋ.ದೊಡ್ಡಣ್ಣನವರು ಕನ್ನಡ ಜನಪದ ಪರಿಷತ್ ಅಧ್ಯಕ್ಷರಾದ ಬಾಳನಗೌಡ ಪಾಟೀಲ ಅವರ ಸೇವಾ ಕಾರ್ಯ ಕುರಿತು ಗುಣಗಾನ ಮಾಡಿದರು.

ಇನ್ನೋರ್ವ ವಿಜಯಪುರ ಸಂಸ್ಕೃತಿಕ ಚಿಂತಕರಾದ ಮೋಹನ್ ಕಟ್ಟಿಮನಿ ಅವರು "ಹಬ್ಬಗಳಲ್ಲಿ ಜಾನಪದ ಸಂಸ್ಕೃತಿ" ಅನಾವರಣ ಎಂಬ ವಿಷಯ ಕುರಿತು ಮಾತನಾಡಿ ಹಬ್ಬಗಳಲ್ಲಿ ಜಾನಪದ ಸಾಹಿತ್ಯ ಮೇರಗು ತರುವಲ್ಲಿ ಗ್ರಾಮಾಂತರ ಮಟ್ಟದಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿದೆ ಕನ್ನಡ ಜಾನಪದವನ್ನು ಶ್ರೀಮಂತಗೊಳಿಸುವ ಕಾರ್ಯ ಮಾಡಿದರೆ ಶರಣರ ಪರಿಚಯವಾಗಲಿದೆ ಎಂದರು. ಜನಪದವೆಂಬುದು ಇಂದಿನ ದಿನಮಾನದಲ್ಲಿ ಕುಂಠಿತಗೊಳ್ಳುತ್ತಾ ಸಾಗಿದೆ ಅದನ್ನು ಮೇಲೆತ್ತುವ ಕಾರ್ಯ ಕನ್ನಡ ಜಾನಪದ ಪರಿಷತ್ ಬೆಂಗಳೂರ ಹಾಗೂ ಜಿಲ್ಲಾ ಘಟಕಗಳು ಮಾಡುತ್ತಾ ಸಾಗಿವೆ ಎಂದರು. ಮಕ್ಕಳು ಅಳುವಾಗ ಹಾಡಿನ ಮೂಲಕ ಈ ಹಿಂದೆ ರಂಬಿಸುವ ಕಾರ್ಯ ನಡೆಯುತ್ತಿತ್ತು ಹಬ್ಬ ಹರಿದಿನಗಳಲ್ಲಿ ಜನಪದ ಕಡೆಗೆ ಎಲ್ಲರೂ ಮುಂದಾಗಿ ಉಡುಗೆ ತೊಡುಗೆಗಳನ್ನು ಅಂದು ಜನರು ಬಿಂಬಿಸುತ್ತಾ ಸಾಗಿದ್ದರು. ಜಾತ್ರೋತ್ಸವಗಳಲ್ಲಿ ಮೇರಗನ್ನು ನೀಡಲು ಇಂದು ಹಮ್ಮಿಕೊಂಡಂತಹ ಜಿಲ್ಲಾ ಮಟ್ಟದ ಜಾನಪದ ಉತ್ಸವದ ಕಾರ್ಯ ಮಹತ್ವದ್ದಾಗಿದೆ ಎಂದರು. ಪ್ರಥಮವಾಗಿ ಮಣ್ಣನ್ನು ಪೂಜಿಸುವ ಮೂಲಕ ಮಣ್ಣೆತ್ತಿನ ಅಮವಾಸ್ಯೆ, ಹಾಗೆ ಮುಂದೆ ಗುಳ್ಳವ್ವನ ಆಚ-ರಣೆ ಎಂಬವುಗಳು ಅಲ್ಲದೇ ಗಂಡ ಹೆಂಡಿರ ಜಗಳವನ್ನು ಜಾನಪದದಲ್ಲಿ ಸೂಕ್ಷ್ಮವಾಗಿ ಹೇಳುವಂತವುಗಳಾಗಿವೆ ಎಂದು ಹಾಡಿ ತೋರಿಸಿದ ಕಟ್ಟಿಮನಿ ಅವರು ಹಾಡುಗಳ ಮೂಲಕ ಶರಣರ ಪರಿಚಯವನ್ನು ಜನಪದದಲ್ಲಿ ಮಾಡಲಾಗುತ್ತಿದೆ ಎಂದರು. ಸಂಸ್ಕಾರ ಮತ್ತು ತಿದ್ದಿ ಬುದ್ದಿ ಹೇಳುವಂತಹ ನಾಗಪ್ಪನ ಹಾಲೇರೆಯೋಣ ನಾಗಪ್ಪನ ಹಾಗೆ ಹೆಡೆ ಎತ್ತಿ ಆಡೋಣವೆಂಬ ಜಾನಪದ ಸಾಹಿತ್ಯ ಕುರಿತು ಅರ್ಥೈಸಿದರಲ್ಲದೇ ಜಾನಪದವೆಂಬುದನ್ನು ಮರೆತರೆ ಮುಂದೆ ಕಷ್ಟ ಪಟ್ಟರೀ ಎಂದು ಎಚ್ಚರಿಸಿದರು.

ಇನ್ನೋರ್ವ ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷರಾದ ಬಾಳನಗೌಡ ಪಾಟೀಲ ಅವರು ಮಾತನಾಡಿ ಸಂಸ್ಕೃತಿಕ ಲೋಕವನ್ನು ಪ್ರತಿಬಿಂಬಿಸುವಂತಹ ಕಾರ್ಯ ಮಿಣಜಗಿ ಗ್ರಾಮದ ಜಾತ್ರೋತ್ಸವದಲ್ಲಿ ಮಾಡಿ ತೋರಿಸುವಂಹ ಕಾರ್ಯ ನಡೆಯುತ್ತಿದೆ ಇಲ್ಲಿಯ ಆದರ್ಶಮಯ ಜನತೆ ಜಾನಪದ ಸಂಸ್ಕೃತಿ ಕುರಿತು ಕಲಾ ತಂಡದವರಿಂದ ಹತ್ತಿರ ಹತ್ತಿರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯ ನಮ್ಮೆಲ್ಲರದ್ದಾಗಿದೆ ಜನಪದವೆಂಬುದು ಒಂದು ಒಳ್ಳೆಯ ಸಂಸ್ಕೃತಿಯನ್ನು ಇಂದಿನ ಕಾಲದಲ್ಲಿ ನೆನಪಿಸುವಂತಹ ಕೆಲಸ ಮಾಡುತ್ತಿದೆ ಇದನ್ನು ಉಳಿಸಿ ಬೆಳೆಸುವಂತಹ ಕಾರ್ಯದಲ್ಲಿ ಎಲ್ಲರು ತೊಡಗಿಕೊಳ್ಳಬೇಕೆಂದರು.

ಕಾರ್ಯಕ್ರಮದ ಮೊದಲಿಗೆ ವಿಕಾಸ ಪಬ್ಲಿಕ್ ಸ್ಕೂಲ್ ಮಕ್ಕಳಿಂದ ರೈತ ಗೀತೆ ಹಾಡಲಾಯಿತಲ್ಲದೇ ಹಿರೂರ ಭೋಗೇಶ್ವರ ಭಜನಾ ಮಂಡಳಿಯವರ ವತಿಯಿಂದ ಭಜನಾ ಪದ, ಕುಂಟೋಜಿ ಬಸವೇಶ್ವರ ಹಂತಿ ಮೇಳದಿಂದ ಹಂತಿಪದ, ಕುಂಟೋಜಿ ಚೌಡಕಿ ಮೇಳದಿಂದ ರೇಣುಕಾ ಎಲ್ಲಮ್ಮ ಚೌಡಕಿ ಪದ, ಸಿಂಧಗಿ ಲಕ್ಷ್ಮೀದೇವಿ ವಾಲಗ ಸಂಘದವರಿಂದ ಡೊಳ್ಳಿನ ವಾಲಗ, ತಡಲಗಿ ರಾಮಧೂತ ಹೆಜ್ಜೆ ಮೇಳದವರಿಂದ ಹೆಜ್ಜೆ ಕುಣಿತ, ರೇಣುಕಾದೇವಿ ತೊಗತಿ ಮಸೂತಿಯವ-ರಿಂದ ಜೋಗತಿ ಕುಣಿತ, ಕರಿಮಲ್ಲೇಶ್ವರ ಗೊರವರ ಕುಣಿತ, ಒಳಗೊಂಡು ಮೊದಲಾದ ತಂಡದವರು ವೇದಿಕೆಯ ಮೇಲೆ ತಮ್ಮ ಕಲೆಯನ್ನು ಪ್ರದರ್ಶಿಸಿದರು. ಇದೇ ಸಮಯದಲ್ಲಿ ಕಜಾಪ ನಿಡಗುಂದಿ ತಾಲೂಕಾ ಅಧ್ಯಕ್ಷ ವಾಯ್.ಎಸ್.ಗಂಗಶೆಟ್ಟಿ ಅವರು ಪ್ರಾಸ್ತಾವಿಕ ಮಾತನಾಡಿದರು.

ವೇದಿಕೆಯ ಮೇಲೆ ಕಜಾಪದ ಶಿವಾನಂದ ಮಳ್ಳಿ, ಬಸವರಾಜ ಹಾರಿವಾಳ, ಸಿದ್ದರಾಮ ಬಿರಾದಾರ, ಎ.ಆರ್.ಮುಲ್ಲಾ, ಗಂಗಾಧರ ಬಡಿಗೇರ, ಪ್ರೋ.ಜಿ.ಎಂ.ಹಳ್ಳೂರ, ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ, ದೇವೆಂದ್ರ ಕೊಪ್ಪದ, ಈರಸಂಗಪ್ಪಗೌಡ ಪಾಟೀಲ, ಬಾಪುಗೌಡ ಬಿರಾದಾರ, ಎಸ್. ಆಯ್.ಬಿರಾದಾರ, ಮೊದಲಾದ ಸಾದಕ-ರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಕಜಾಪ ತಾಳಿಕೋಟೆ ಅಧ್ಯಕ್ಷ ಸಿದ್ದನಗೌಡ ಕಾಶಿನಕುಂಟಿ ಸ್ವಾಗತಿಸಿದರು. ಶಿಕ್ಷಕ ಆರ್. ಎಸ್.ವಾಲಿಕಾರ ನಿರೂಪಿಸಿದರು. ಸಿದ್ದು ಕರಡಿ ವಂದಿಸಿದರು.

## ನಾಳೆ ಗಂಗಾವತರಣ ನಾಟಕ ಪ್ರದರ್ಶನ

# ಬೇಂದ್ರೆಯವರ ಭಾವಗೀತೆಗಳಿಗೆ ಸಂಗೀತ- ನೃತ್ಯ ಕೂಡಿದ ಅಪರೂಪದ ನಾಟಕ





ಬೆಳಗಾವಿ 13 – ನಗರದ ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ ಇಂದು ದಿ. 23 ಸೋಮವಾರದಂದು ಮುಂ. 11 ಗಂಟೆಗೆ ರಂಗಸಂಪದ ನಾಟಕ ತಂಡದವರು 'ಗಂಗಾವತರಣ' ನಾಟಕ ಕುರಿತಂತೆ ಮಾಧ್ಯಮಗೋಷ್ಠಿಯನ್ನು ಕರೆದಿದ್ದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಡಾ. ಅರವಿಂದ ಕುಲಕರ್ಣಿಯವರು ಮಾತನಾಡುತ್ತ ಹಲವಾರು ವಿಷಯಗಳನ್ನು ಪತ್ರಿಕಾ ಮಿತ್ರರಾದ ತಮ್ಮೊಂದಿಗೆ ಹಂಚಿಕೊಂಡಿದ್ದೇನೆ ಆದರೆ ಇಂದಿನ ಈ ಪತ್ರಿಕಾ ಗೋಷ್ಠಿ ನನಗೆ ಅತ್ಯಂತ ವಿಶೇಷ ಪತ್ರಿಕಾಗೋಷ್ಠಿಯೆಂದು ನನಗನ್ನಿಸುತ್ತಿದೆ ಏಕೆಂದರೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ದ. ರಾ. ಬೇಂದ್ರೆಯವರ ಕುರಿತಾದ 'ಗಂಗಾವತರಣ' ನಾಟಕ ಪ್ರದರ್ಶನ ನೀಡುತ್ತಿರುವುದೇ ಇದಕ್ಕೆ ಕಾರಣ ಎಂದು ಹೇಳಿದರು.

. ಮುಂದೆ ಮಾತನಾಡುತ್ತ ಡಾ. ಕುಲಕರ್ಣಿ, ಸುಮಾರು ಏಳೆಂಟು ವರ್ಷಗಳ ಹಿಂದೆಯೇ 'ಗಂಗಾವತರಣ' ನಾಟಕ ಕುರಿತು ನಾನು ಕೇಳಿದ್ದೆ. ಅದನ್ನು ಬೆಳಗಾವಿ ಜನತೆಗೆ ತೋರಿಸಲೇಬೇಕೆಂಬ ಹಠಕ್ಕೆ ಬಿದ್ದಿದ್ದೆ. ಈ ನಾಟಕವನ್ನು ಪ್ರಸಿದ್ಧ ನಾಟಕಕಾರ ರಾಜೇಂದ್ರ ಕಾರಂತ ಅವರು ರಂಗರೂಪಕ್ಕೆ ತಂದಿದ್ದು ಅವರದೇ ನಿರ್ದೇಶನವಿದೆ. ಸುಮಾರು ಹದಿನೈದು ವರ್ಷಗಳ ಹಿಂದೆ 65 ಕಲಾವಿದರನ್ನು ಸೇರಿಸಿಕೊಂಡು ಈ ನಾಟಕದ ನೂರಾರು ಪ್ರದರ್ಶನವನ್ನು ನೀಡಿದ್ದಾರೆ. ಆದರೆ ಈ ನಾಟಕದಲ್ಲಿದ್ದ ಬಹಳಷ್ಟು ಕಲಾವಿದರು. ದೂರದರ್ಶನ ಮತ್ತು ಚಲನಚಿತ್ರವನ್ನು ಸೇರಿಕೊಂಡಿದ್ದರಿಂದ 2–3 ವರ್ಷಗಳ ಕಾಲ ಈ ನಾಟಕ ನಿಂತಿತ್ತು. ಈಗ ಮತ್ತೆ ಹೊಸ ಕಲಾವಿದರನ್ನು ಸೇರಿಸಿಕೊಳ್ಳುವುದರ ಮೂಲಕ ಆ ನಾಟಕಕ್ಕೆ ಕಾರಂತರು ಮರುಜೀವ ಕೊಟ್ಟಿದ್ದಾರೆ.

45 ಕಲಾವಿದರನ್ನು ಕೂಡಿಕೊಂಡು ಬೇರೆ ಊರುಗಳಲ್ಲಿ ಈ ನಾಟಕ ಪ್ರದರ್ಶನ ಮಾಡುವುದು ಹಣಕಾಸು ಹಾಗೂ ಬೇರೆ ಬೇರೆ ಕಾರಣದಿಂದ ಕಷ್ಟಕರವಾಗಿತ್ತು. ಬೆಂಗಳೂರು ಮತ್ತು ಮೈಸೂರು ಬಿಟ್ಟು ಬೇರೆ ಊರಗಳಲ್ಲಿ ಈ ನಾಟಕ ಪ್ರದರ್ಶನಗೊಂಡಿರಲಿಲ್ಲ. ರಂಗಸಂಪದದ ಆಪೇಕ್ಷೆ ಮೇರೆಗೆ ಅಲ್ಲದೇ ಅವರ ಒತ್ತಡಕ್ಕೆ ಒಪ್ಪಿಕೊಂಡು ಬೆಳಗಾವಿ ಬರಲು ಒಪ್ಪಿಕೊಂಡಿದ್ದಾರೆ. ಸುಮಾರು ನಾಲ್ವತ್ತು ವರ್ಷಗಳ ಹಿಂದೆ

ಖ್ಯಾತ ನಿರ್ದೇಶಕ, ಸಾಹಿತಿ ಡಾ. ಗಿರೀಶ ಕಾರ್ನಾಡ ಅವರು ಬೇಂದ್ರೆಯವರ ಕು-ರಿತಾದ ಒಂದು ಸಾಕ್ಷಿಚಿತ್ರವನ್ನು ಬಿಟ್ಟರೆ ಬೇರಾವ ನಾಟಕವಾಗಲಿ, ಚಲನಚಿತ್ರವಾಗಲಿ ಬಂದಿರಲಿಲ್ಲ. ಈಗ ರಂಗಸಂಪದ ನಾಟಕ ಮೂಲಕ ಬೇಂದ್ರೆಯವರನ್ನು ಪ್ರೇಕ್ಷಕರ ಕಣ್ಮುಂದೆ ತಂದು ನಿಲ್ಲಿಸುತ್ತಿದೆ ಎಂದು ಹೇಳಿದರು.

ವರಕವಿ ಬೇಂದ್ರೆಯವರ ಕವನ ಮತ್ತು ಜೀವನ ಘಟನೆಗಳನ್ನಾಧಿರಿಸಿದ 'ಗಂಗಾವತರಣ' ನಾಟಕದ ಮುಖ್ಯ ಅಂಶವೆಂದರೆ ಬೇಂದ್ರೆಯವರ ಪದ್ಯಗಳಿಗೆ ಸಂಗೀತ ಅಳವಡಿಸಿ ಅದಕ್ಕೆ ತಕ್ಕಂತೆ ನೃತ್ಯ ಸಂಯೋಜನೆ ಮಾಡಿರುವುದು. ಇದ-ರಿಂದ ಈ ನಾಟಕವನ್ನು ಸಂಗೀತ ನೃತ್ಯ ನಾಟಕವೆಂದೂ ಕರೆಯಬಹುದು.

ನಮ್ಮ ಕವಿವರ್ಯರನ್ನು ಇತಿಹಾಸ ಮರೆಯುತ್ತಿದೆ. ಹಿರಿಯ ಸಾಹಿತಿಗಳು, ಕವಿ, ಕಲಾವಿದರನ್ನು ನಾಟಕದ ಮೂಲಕವಾದರೂ ಇಂದಿನ ಯುವಬಳಗಕ್ಕೆ ಪರಿಚಯಿಸುವ ಕೆಲಸವಾಗಬೇಕಾಗಿದ್ದು ಅದು ರಂಗಭೂಮಿಯಿಂದ ಮಾತ್ರ ಸಾಧ್ಯವೆಂಬುದಕ್ಕೆ 'ಗಂಗಾವತರಣ' ಸಾಕ್ಷಿಯಾಗಿದೆ. ಈ ನಾಟಕದಲ್ಲಿ ಬರುವ ಪಾತ್ರಧಾರಿಗಳಲ್ಲಿ ಕೇವಲ ಮೂರನಾಲ್ಕು ಜನರನ್ನು ಬಿಟ್ಟರೆ ಉಳಿದೆಲ್ಲ ಕಲಾವಿದರು ಕಾಲೇಜ ವಿದ್ಯಾರ್ಥಿಗಳೆಂಬುದು ವಿಶೇಷ ಅಂದರೆ ಯುವಕರನ್ನು ಮತ್ತೆ ರಂಗಭೂಮಿ ಸೆಳೆಯುತ್ತಿದೆಯನ್ನುವುದು ಸಂತೋಷ ಸಂಗತಿ ಎಂದು ಹೇಳಿದರು.

ಅಭಿಷೇಕ ಅಲಾಯ್ಸ ಸಹಯೋಗ ದೊಂದಿಗೆ ಬೆಳಗಾವಿಯ ರಂಗಸಂಪದ ನಾಟಕ 'ಗಂಗಾವತರಣ' ನಾಟಕವನ್ನು ಇದೇ ದಿ. 25 ಬುಧವಾರದಂದು ಸಾಯಂಕಾಲ 6 ಗಂಟೆಗೆ ಕೋನವಾಳ ಬೀದಿಯಲ್ಲಿರುವ ಲೋಕಮಾನ್ಯ ರಂಗಮಂದಿರದಲ್ಲಿ ನೀಡಲಿದೆ. ಬೆಂಗಳೂರಿನ ರಂಗಸೌರಭ ನಾಟಕ ತಂಡ ರಂಗಪ್ರದರ್ಶನ ನೀಡುತ್ತಿದೆ. ರಾಜೇಂದ್ರ ಕಾರಂತರ ರಂಗರೂಪ, ವಿನ್ಯಾಸ ಮತ್ತು ನಿರ್ದೇಶನದಲ್ಲಿರುವ ಅಪರೂಪದ ನಾಟಕವಿದಾಗಿದೆ. ರಂಗಾಸಕ್ತರು ಇದರ ಸದುಪಯೋಗ ಪಡೆಯುವಂತೆ ಡಾ. ಅರವಿಂದ ಕುಲಕರ್ಣಿಯವರು ವಿನಂತಿಸಿಕೊಂಡರು.

ಪತ್ರಿಕಾಗೋಷ್ಠಿಯಲ್ಲಿ ಚಿದಾನಂದ ವಾಳಕೆ , ರಾಮಚಂದ್ರ ಕಟ್ಟಿ, ಗುರುರಾಜ ಕುಲಕರ್ಣಿ, ಎ.ಎಂ. ಕುಲಕರ್ಣಿ ಉಪಸ್ಥಿತ-ರಿದ್ದರು.

# ಸಂಭ್ರಮದ ಅಯ್ಯಪ್ಪಸ್ವಾಮಿ ಮಹಾಪೂಜೆ



ತೇರದಾಳ-ಪಟ್ಟಣದ ಸಿದ್ಧೇಶ್ವರ ದೇವಸ್ಥಾನದಲ್ಲಿ ಮಕರಜ್ಯೋತಿ ಅಯ್ಯಪ್ಪಸ್ವಾಮಿ ಸೇವಾ ಸಂಘದ ಆಶ್ರಯದಲ್ಲಿ ಭಾನುವಾರ ಸಂಜೆ ಅಗ್ನಿಪೂಜೆ ಹಾಗೂ ಮಹಾಪೂಜೆ ಕಾರ್ಯಕ್ರಮ ಸಂಭ್ರಮ ಸಡಗರದಿಂದ ನೆರವೇರಿತು.

ಕಾರ್ಯಕ್ರಮ ನಿಮಿತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅಯ್ಯಪ್ಪ ಸ್ವಾಮಿ ಭಾವಚಿತ್ರ ಹಾಗೂ ಪಲ್ಲಕ್ಕಿ ಉತ್ಸವ ವಾದ್ಯಮೇಳಗಳೊಂದಿಗೆ ಜರುಗಿತು. ಸ್ವಾಮಿ ಮಾಲಾಧಾ-ರಿಗಳು ದಾರಿಯುದ್ಧಕ್ಕೂ ಭಕ್ತಿಯ ಹಾಡುಗಳಿಗೆ ಹೆಜ್ಜೆ ಹಾಕಿದರ. ಬಳಿಕ ನಡೆದ ಅಗ್ನಿಪೂಜೆಯಲ್ಲಿ ಹಲವು ಮಾಲಾಧಾರಿಗಳು ಭಕ್ತರು ಅಗ್ನಿ ಪ್ರವೇಶ ಮಾಡಿ ಭಕ್ತಿಯ ಪರಾಕಷ್ಠೆಗೆ ಸಾಕ್ಷಿಯಾದರು. ಮುಗಳಖೋಡದ ಸದಾಶಿವ ರಗಟಿ ಗುರುಸ್ವಾಮಿ ನೇತೃತ್ವದಲ್ಲಿ ಮಹಾಪೂಜೆ ನಡೆಯಿತು. ಭಕ್ತಾಧಿಗಳಿಗೆ ಅನ್ನಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಮುಗಳಖೋಡ, ಹಂದಿಗುಂದ, ಸುಲ್ತಾನಪುರ, ಇಟ್ನಾಳ, ಸಸಾಲಟ್ಟಿ, ಚಿಮ್ಮಡ, ರಬಕವಿ, ಬನಹಟ್ಟಿ, ಜಗದಾಳ, ಹಿಡಕಲ್, ಹಳ್ಳೂರ, ಪಾಲಭಾವಿ ಸೇರಿದಂತೆ ಬೇರೆ ಬೇರೆ ಊರುಗಳಿಂದ ಅಯ್ಯಪ್ಪಸ್ವಾಮಿ ಭಕ್ತಾಧಿಗಳು ಹಾಗೂ ಮಾಲಾಧಾರಿಗಳು ಆಗಮಿಸಿದ್ದರು.

# ಹುಲ್ಲೋಳಿ : ಅಧ್ಯಕ್ಷ ರಾಗಿ ರವೀಂದ್ರ ರಾಜಾಪುರೆ- ಉಪಾಧ್ಯಕ್ಷರಾಗಿ ಸತ್ಯಪ್ಪ ಬೆಡಕಿಹಾಳ



ಹುಕ್ಕೇರಿ :ತಾಲೂಕಿನ ಹುಲ್ಲೋಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಅಧ್ಯಕ್ಷ ಉಪಾಧ್ಯಕ್ಷರ ಅವಿರೋಧ ಆಯ್ಕೆ ನಡೆಯಿತು.

ಸಂಘದ ಸಭಾಭವನದಲ್ಲಿ ಜರುಗಿದ ಬಿಡಿಸಿಸಿ ಬ್ಯಾಂಕ ಅಧ್ಯಕ್ಷ ರಮೇಶ ಕತ್ತಿ ಹಾಗೂ ಶಾಸಕ ನಿಖಿಲ್ ಕತ್ತಿ ಮಾರ್ಗದರ್ಶನಲ್ಲಿ ಅಧ್ಯಕ್ಷರಾಗಿ ರವೀಂದ್ರ ಹಾಲಪ್ಪಾ ರಾಜಾಪೂರೆ ಹಾಗೂ ಉಪಾಧ್ಯಕ್ಷರಾಗಿ ಸತ್ಯಪ್ಪಾ ಕಲ್ಲಪ್ಪಾ ಬೆಡಕಿಹಾಳ ಅವಿರೋಧವಾಗಿ ಆಯ್ಕೆಯಾದರು.

ಆಡಳಿತ ಮಂಡಳಿಯ ನಿರ್ದೇಶಕರಾಗಿ ರವೀಂದ್ರ ಕಾಡಪ್ಪಾ ಹಂಚಿನಾಳ, ಹಾಲಗೌಡ ಪಾಟೀಲ,ಅಶೋಕ ಚೌಗಲಾ ,ಹಾಲಪ್ಪಾ ಖಾಸಾಗೋಳ.,ಗಜಾನನ , ರಾ.ಚೌಗಲಾ,ಶೋಭಾ ಧನಪಾಲ ಚೌಗಲಾ.ಗಂಗಪ್ಪಾ ಸಿದ್ದಪ್ಪಾ ಎಗನ್ನವರ. ಲಕ್ಷ್ಮೀ ಮಾರುತಿ ಪೂಜೇರಿ ಸುನೀಲ ವಡ್ಡರ ಆಯ್ಕೆಯಾದರು. ತಾಲೂಕಾ ಸಹಕಾರ ಅಭಿವೃದ್ಧಿ ಅಧಿಕಾರಿ, ಎಸ್.ಎ.ಪಾಟೀಲ ಚುನಾವಣಾ ಅಧಿಕಾರಿ ಕಾರ್ಯನಿರ್ವಹಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿರೂಪಾಕ್ಷಿ .ಆಯ. ಅಲಗೂರಿ ಸಹಾಯಕ ರಾಗಿ ನಿರ್ವಹಿಸಿದರು .ಬ್ಯಾಂಕ ನಿರೀಕ್ಷಕ ಕೆ.ಎಸ್ ಗವಿಮಠ , ವಂದಿಸಿದರು.

ಹಿರಿಯರಾದ ಪಿ.ಡಿ ಚೌಗಲಾ, ಕೆ.ಬಿ ಪಾಟೀಲ ಮಾಯಪ್ಪ , ಹೊಳೆಪ್ಪಗೋಳ,ಬಿ.ಆರ.ಪಾಟೀಲ,ಜೆ.ಎಸ್. ಚೌಗಲಾ,ಹಾಲಪ್ಪ,ಪೂಜೇರಿ,ಎಸ.ಬಿ ಸಪ್ತಸಾಗರ,,ರಾಮಪ್ಪ ಮಾಯಪ್ಪಗೋಳ,ಆರ.ಎಚ್ ಪಾಟೀಲ,. ಡಿ.ಆರ್ ಚೌಗಲಾ, ಬಸಗೌಡ ಹೊಳೆಪ್ಪಗೋಳ, ಬಿ.ಎ.ದೇಸಾಯಿ, ಭೀಮಪ್ಪ ನರಸಪ್ಪಗೋಳ,.ಎಸ್.ಬಿ ಹಂಚಿನಾಳ,ಜೆ.ಪಿ ಚೌಗಲಾ, ಸಿದ್ದಪ್ಪ ಖಾಸಾಗೋಳ,ಭರಮಪ್ಪ ಹಂಚಿನಾಳ,ಎಸ್. ಎಸ್.ಪಾಟೀಲ,ಆರ್.ಪಿ ಚೌಗಲಾ,ಜೆ.ಜೆ,ಚೌಗಲಾ,ಎಸ್.ಪಿ ಪಾಟೀಲ, ಎಸ್ ಎಸ ಚೌಗಲಾ ಮತ್ತಿತರರು.

# ಕೂಸಿನ ಮನೆ ಆರೈಕೆದಾರರಿಗೆ 7 ದಿನಗಳ ತರಬೇತಿ ಕಾರ್ಯಾಗಾರದ ಉದ್ಘಾಟಣೆ : ಇಓ ಆನಂದ ಬಡಕುಂದ್ರಿ




ಸವದತ್ತಿ : ಸ್ಥಳೀಯ ತಾಲೂಕ ಪಂಚಾಯತ ಸಭಾ ಭವನದಲ್ಲಿ ಸೋಮವಾರ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು, ಜಿಲ್ಲಾ ಪಂಚಾಯತ್ ಬೆಳಗಾವಿ ಹಾಗೂ ತಾಲೂಕ ಪಂಚಾಯತ ಸವದತ್ತಿ ಇವರ ಸಹಯೋಗದಲ್ಲಿ ಕೂಸಿನ ಮನೆ ಆರೈಕೆದಾರರಿಗೆ 7 ದಿನಗಳ ತರಬೇತಿ ಕಾರ್ಯಾಗಾರ ವನ್ನು ಮಾನ್ಯ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ಆನಂದ ಬಡಕುಂದ್ರಿ ರವರು ಸಸಿಗೆ ನೀರು ಹಣಿಸುವುದರ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾನ್ಯ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ಆನಂದ ಬಡಕುಂದ್ರಿ ರವರು ಮಾತನಾಡಿ ಉದ್ಯೋಗ ಖಾತರಿ ಕೆಲಸಕ್ಕೆ ಬರುವ ಕೂಲಿಕಾರರ ಮಕ್ಕಳನ್ನು ನೋಡಿಕೊಳ್ಳಲು ಹಾಗೂ ಮಕ್ಕಳ ಅಪೌಷ್ಠಿಕತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೂಸಿನ ಮನೆ ಆರೈಕೆ ಕೇಂದ್ರಗಳನ್ನು ಸರ್ಕಾರ ಪ್ರಾರಂಬಿಸಿದ್ದು ಈ ಯೋಜನೆಯನ್ನು ಯಶಸ್ವಿಗೊಳಿಸಲು ಶ್ರಮಿಸಬೇಕು. ಕೂಸಿನ ಮನೆಯಲ್ಲಿನ ಮಕ್ಕಳನ್ನುವಿಶೇಷ ಕಾಳಜಿ ವಹಿಸಿಕೊಂಡು ಪಾಲನೆ ಮತ್ತು ಪೋಷಣೆ ಮಾಡಬೇಕು. 6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳನ್ನು ಈ ಕೇಂದ್ರದಲ್ಲಿ ಪಾಲನೆ –ಪೋಷಣೆ ಮಾಡಬೇಕಿದೆ. ಹಾಗಾಗಿ ಎಲ್ಲರೂ ಉತ್ತಮ ರೀತಿಯಲ್ಲಿ ತರಬೇತಿ ಪಡೆದುಕೊಂಡು ಕೂಸಿನ ಮನೆಗೆ ಬರುವ ಮಕ್ಕಳನ್ನು ತಮ್ಮ ಮಕ್ಕಳಂತೆ ಪಾಲನೆ ಮತ್ತು ಪೋ?ಣೆಯನ್ನು ಮಾಡುವುದರ ಜೊತೆಗೆ ವ್ಯವಸ್ಥಿತವಾಗಿ ಕೂಸಿನ ಮನೆ ನಡೆಸುವ ನಿಟ್ಟಿನಲ್ಲಿ ಎಲ್ಲ ಆರೈಕೆದಾರರು ಕೆಲಸ ಮಾಡಬೇಕು ಎಂದು ತಿಳಿಸಿದರು.

ಬಳಿಕ ಮಾನ್ಯ ತಾಪಂ ಸಹಾಯಕ ನಿರ್ದೇಶಕರು (ಗ್ರಾ.ಉ) ಶ್ರೀ ಆರ್ ಬಿ ರಕ್ಕಸಗಿ ರವರು ಮಾತನಾಡಿ ಮನರೇಗಾ ಯೋಜನೆಯಡಿ ಕೂಲಿ ಕೆಲಸಕ್ಕೆ ಬರುವ ಕೂಲಿಕಾರರ 6 ತಿಂಗಳಿನಿಂದ 3 ವರ್ಷದೊಳಗಿನ ಮಕ್ಕಳನ್ನು ಸೇ-ರಿಸಿಕೊಳ್ಳಲಾಗುತ್ತಿದೆ. ಹಾಗಾಗಿ ಪ್ರತಿಯೊಂದು ಮಕ್ಕಳನ್ನು ತಮ್ಮ ಮಕ್ಕಳಂತೆ ಪಾಲನೆ–ಪೋಷಣೆ ಮಾಡಬೇಕು ಎಂದು ತಿಳಿಸಿದರು..

ಈ ಸಂದರ್ಭದಲ್ಲಿ ಮಾನ್ಯ ತಾಪಂ ಸಹಾಯಕ ನಿರ್ದೇಶಕರು (ಪಂ.ರಾ) ಶ್ರೀ ಆರ್ ಎ ಪಾಟೀಲ, ತಾಪಂ ವ್ಯವಸ್ಥಾಪಕರು ಮಲ್ಲಿಕಾರ್ಜುನ ಕಂಬಿ, ತಾಪಂ ಐಇಸಿ ಸಂಯೋಜಕ ಮಲೀಕಜಾನ ಮೋಮಿನ, ತಾಪಂ ಎಂಐಎಸ್ ಸಂಯೋಜಕ ನಾಹರಾಜ ಬೆಹರೆ, ಆಡಳಿತ ಸಹಾಯಕಿ ಸಂಜನಾ, ತರಬೇತುದಾರರಾದ ಲಕ್ಷ್ಮೀಬಾಯಿ ಪಾಟೀಲ, ಜ್ಯೋತಿ ಕೊಪ್ಪಳ, ಡಿಟಿಸಿ ಮಲ್ಲಿಕಾರ್ಜುನ ಚಚಡಿ & ಗ್ರಾಮ ಕಾಯಕ ಮಿತ್ರರು, ತಾಪಂ ಸಿಬ್ಬಂದಿಗಳು, ಕೂಸಿನ ಮನೆ ಆರೈಕೆದಾರರು, ಇನ್ನಿತರರು ಉಪಸ್ಥಿತರಿದ್ದರು.

## ಡಿ.27 ರಂದು ಲೋಕಾಯುಕ್ತ ಜನ ಸಂಪರ್ಕ ಸಭೆ

ಬೆಳಗಾವಿ : ಬೆಳಗಾವಿ ಲೋಕಾಯುಕ್ತ ಅಧಿಕಾರಿಗಳು ಸವದತ್ತಿ ತಾಲೂಕಿನ ಎಲ್ಲ ತಾಲೂಕಾ ಮಟ್ಟದ ಅಧಿಕಾರಿಗಳ ಸಮಕ್ಷಮದಲ್ಲಿ ಡಿ.27 ರಂದು ಬೆಳಿಗ್ಗೆ 11 ಗಂಟೆಯಿಂದ 2 ಗಂಟೆಯವರೆಗೆ ಸವದತ್ತಿ ತಾಲ್ಲೂಕು ಪಂಚಾಯತ ಸಭಾ ಭವನದಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಸರ್ಕಾರಿ ಕಛೇರಿಯಲ್ಲಿಯ ಅಧಿಕಾರಿಗಳು ಸಾರ್ವಜನಿಕರ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿಳಂಬ ನೀತಿ ಅನುಸ-ರಿಸುತ್ತಿದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿ, ಸ್ಥಳದಲ್ಲಿಯೇ ಅಧಿಕಾ-ರಿಗಳಿಂದ ಪರಿಹರಿಸಿಕೊಳ್ಳಬಹುದು. ಸಭೆಯಲ್ಲಿ ಬಾಗವಹಿಸಲು ಇಚ್ಛಿಸುವವರು ನಿಗದಿತ ನಮೂನೆಯ ಅರ್ಜಿಯೊಂದಿಗೆ ಹಾಜರಿರಲು ತಿಳಿಸಲಾಗಿದೆ.

ಸರ್ಕಾರಿ ಅಧಿಕಾರಿಗಳು ಕೆಲಸ ಮಾಡಿಕೊಡುವಲ್ಲಿ ಹಣಕ್ಕೆ ಬೇಡಿಕೆ ಇಟ್ಟಲ್ಲಿ/ಒತ್ತಾಯಿಸಿದಲ್ಲಿ ಅಥವಾ ಸರ್ಕಾರಿ ಅಧಿಕಾರಿಯ ಅಕ್ರಮ ಆಸ್ತಿ ಸಂಪಾದನೆ ಬಗ್ಗೆ ಮಾಹಿತಿ ಇದ್ದಲ್ಲಿ, ಲೋಕಾಯುಕ್ತ ಅಧಿಕಾರಿಗಳೊಂದಿಗೆ ನೇರವಾಗಿ ಅಥ-ವಾ ಗುಪ್ತವಾಗಿ ಮಾಹಿತಿ ನೀಡಿ ಸಭೆಯ ಸದುಪಯೋಗ ಪಡಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ:0831–2950756, 0831–2421922 ಸಂಖ್ಯೆಗೆ ಸಂಪರ್ಕಿಸಬಹು ದಾಗಿದೆ ಎಂದು ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆಎಲ್‌ಇ ಸಂಸ್ಥೆಯ ಶ್ರೀ ಮಹಾದೇವಪ್ಪಣ್ಣ ಮುನವಳ್ಳಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ




ಗೋಕಾಕ: ಸಪ್ತಋಷಿಗಳಿಂದ ಸ್ಥಾಪನೆಗೊಂಡ ಕೆ-ಎಲ್‌ಇ ಸಂಸ್ಥೆಯು ಗುಣ ಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೇವೆಯಿಂದ ಹೆಮ್ಮರವಾಗಿ ಬೆಳೆದು ದೇಶ ವಿದೇಶಗಳಲ್ಲಿ ಪ್ರಖ್ಯಾತಗೊಂಡಿದೆ ಎಂದು ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿ ಹೇಳಿದರು.

ಅವರು, ಶನಿವಾರದಂದು ನಗರದ ಕೆಎಲ್‌ಇ ಸಂಸ್ಥೆಯ ಶ್ರೀ ಮಹಾದೇವಪ್ಪಣ್ಣ ಮುನವಳ್ಳಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ಪರ್ವವನ್ನು ಉದ್ಘಾಟಿಸಿ ಮಾತನಾಡಿ, ನಗರದಲ್ಲಿ ಕೆಎಲ್‌ಇ ಸಂಸ್ಥೆ ಹಲವು ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿದ್ದು 5ಸಾವಿರ ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದಾರೆ. 100ಹಾಸಿಗೆಗಳ ಆಸ್ಪತ್ರೆಯು ಆರೋಗ್ಯ ಸೇವೆಯನ್ನು ನೀಡುತ್ತಿದೆ. ಮುಂದಿನ ದಿನಗಳಲ್ಲಿ ಸುಸಜ್ಜಿತ ಆಯುರ್ವೇದ ಆಸ್ಪತ್ರೆಯನ್ನು ಪ್ರಾರಂಭಿಸಲಾಗುವದೆಂದು ತಿಳಿಸಿದರು.

ಮುಖ್ಯಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಅಧೀಕ್ಷಕ ಅಭಿಯಂತ ಬಿ ಡಿ ನಸಲಾಪೂರೆ ಮಾತನಾಡಿ, ವಿದ್ಯಾರ್ಥಿಗಳು ಜಾತಿ, ಮತ ಪಂಥ ಮನೋಭಾವ ಬೆಳೆಸಿಕೊಳ್ಳದೆ ನಾವೆಲ್ಲ ಭಾರತೀಯರೆಂಬ ಮನೋಭಾವದಿಂದ ವ್ಯಾಸಾಂಗ ಮಾಡಿ ಪ್ರತಿಭಾನ್ವಿತರಾಗಿರೆಂದು ಹಾರೈಸಿದರು.

ವೇದಿಕೆಯ ಮೇಲೆ ಕೆಎಲ್‌ಇ ಸಂಸ್ಥೆಯ ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಎಮ್ ಡಿ ಚುನಮರಿ, ಸದಸ್ಯ ಓಂಪ್ರಕಾಶ ಅಂಗಡಿ, ರಾಣಿ ಚೆನ್ನಮ್ಮ ಸಹಕಾರಿ ಬ್ಯಾಂಕ ಉಪಾಧ್ಯಕ್ಷೆ ರೂಪಾ ಮುನವಳ್ಳಿ, ಪ್ರಾಚಾರ್ಯೆ ನಂದಾ ಚುನಮರಿ, ಸಂಸ್ಥಾಪಕ ಪ್ರಾಚಾರ್ಯೆ ಅನುಪಾ ಕೌಶಿಕ ಇದ್ದರು.

# ಪ್ರತಿಯೊಬ್ಬ ವ್ಯಕ್ತಿ ಕಾನೂನುಗಳ ಬಗ್ಗೆ ಅರಿತು ಕೊಳ್ಳಬೇಕು -ನ್ಯಾಯಾಧೀಶ ಜಗದೀಶ ಬಿಸೇರೊಟ್ಟಿ




ರಾಯಬಾಗ: ಮಗು ತಾಯಿಯ ಗರ್ಭಾವಸ್ಥೆಯಿಂದ ಹಿಡಿದು ವ್ಯಕ್ತಿ ಸಾವಿನವರೆಗೂ ಕಾನೂನು ಅನ್ವಯವಾಗುತ್ತದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೇರೊಟ್ಟಿ ಹೇಳಿದರು.

ಶನಿವಾರ ರಾತ್ರಿ ರಾಯಬಾಗ ಗ್ರಾಮೀಣದ ಖೈರಕೊಡಿ (ಬಸವೇಶ್ವರನಗರ) ಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ರಾಯಬಾಗ, ವಕೀಲರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವ್ಯಕ್ತಿ ಕಾನೂನುಗಳ ಬಗ್ಗೆ ಅರಿತುಕೊಳ್ಳಬೇಕೆಂದರು.

ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರಿಯಾ ಭಟ್ಟಡ, ತಹಶೀಲ್ದಾರ ಸುರೇಶ ಮುಂಚೆ, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ಜಿಲ್ಲಾ ಕಾರ್ಯಾಧ್ಯಕ್ಷ ಸುಭಾಷ ನಾಯಿಕ, ತಾಲೂಕು ಅಧ್ಯಕ್ಷ ಬಾಹಾಸಾಹೇಬ ಖವಟಕೊಪ್ಪ, ಉಪಾಧ್ಯಕ್ಷ ಬಸವರಾಜ ಮಡಿವಾಳ, ವಕೀಲರ ಸಂಘದ ಅಧ್ಯಕ್ಷ ಪಿ.ಎಮ್.ದರೂರ, ಸಿಡಿಪಿಓ ಭಾರತಿ ಕಾಂಬಳೆ, ಎಪಿಪಿ ಹನುಮಂತ ಅಚಮಟ್ಟಿ, ಡಿ.ಎಚ್.ಯಲ್ಲಟ್ಟಿ, ಪಿ.ಎಸ್.ಕುರಬೆಟ್ಟ, ಅಜಿತ ಕುಡಚೆ, ಮಲ್ಲಿಕಾರ್ಜುನ ಜೇಡರ, ರಾಜು ಮಡಿವಾಳ, ಪ್ರಕಾಶ ಮಾಳಿ, ಹನುಮಂತ ಭಜಂತ್ರಿ, ಕೃಷ್ಣಾ ಪುಜಾರಿ, ಮಂಜುನಾಥ ವೇರಣೇಕರ, ದತ್ತಾ ಭಜಂತ್ರಿ, ರಾಜು ಕಾಂಬಳೆ, ಲಕ್ಷ್ಮಣ್ ಕೊರೆ, ಭೀಮಣ್ಣ ಜಾಗನೂರೆ, ಗೈಬಿಸಾಬ ನದಾಫ, ಅಬ್ದುಲ ಡಾಂಗೆ, ರಮೇಶ ಕುಂಬಾರ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ಸದಸ್ಯರು, ರಾಯಬಾಗ ಗ್ರಾಮೀಣ ಗ್ರಾಮೀಣ.ಪಂ. ಅಧ್ಯಕ್ಷರು, ಸದಸ್ಯರು ಇದ್ದರು.

## ಸಂಗೊಳ್ಳಿಯಲ್ಲಿ ನಡೆದ ಶ್ರೀ ಹಿರೇಮಠದ ಜಾತ್ರಾ ಮಹೋತ್ಸವದಲ್ಲಿ ಹೇಳಿಕೆ

# ಸಾಧಕರ ಜೀವನ ಕ್ರಮ ಅನುಸರಿಸಿ ಬಾಳಿರಿ : ಉಮೇಶ್ವರ ಸ್ವಾಮೀಜಿ




ಬೈಲಹೊಂಗಲ– ಮಾನವನ ಜೀವನ ಸಾರ್ಥಕಗೊಳ್ಳಬೇಕಾದರೆ ಬದುಕಿನಲ್ಲಿ ಸಾಧಕರ ಜೀವನ ಕ್ರಮ ಅನುಸರಿಸಿ ಸಾಧನೆ ಮಾಡಬೇಕೆಂದು ಹೂಲಿಯ ಸಾಂಬಯ್ಯನವರ ಮಠದ ಪೂಜ್ಯ ಉಮೇಶ್ವರ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ಅವರು ತಾಲೂಕಿನ ಸುಕ್ಷೇತ್ರ ಕ್ರಾಂತಿವೀರ ರಾಯಣ್ಣನ ಸಂಗೊಳ್ಳಿಯ ಹಿರೇಮಠದ ಶ್ರೀ ಗುರು ಸಿದ್ದಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ಲಿಂ.ಸಿದ್ದಲಿಂಗ ಶಿವಾಚಾರ್ಯರ 20 ನೇ ಪುಣ್ಯ ಸ್ಮರಣೋತ್ಸವ ಮತ್ತು ಜನಜಾಗೃತಿ ಧರ್ಮಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಅನೇಕರು ತಮ್ಮ ತಪ್ಪಸ್ಸಿನ ಫಲದಿಂದ ಜನ ಜಾಗೃತಿಯೊಂದಿಗೆ ಧರ್ಮದ ತಿರುಳನ್ನು ಅರುಹಿ ಹೋಗಿದ್ದು ಅಂಥವರ ಸ್ಮರಣೆ ನಿರಂತರವಾಗಿರಬೇಕು. ಜ್ಞಾನ, ಸಂಸ್ಕಾರಗಳನ್ನು ಪಡೆದು ಜೀವನ ಪಾವನವಾಗಿಸಿಕೊಳ್ಳಿರಿ ಎಂದರು.

ಮುತ್ನಾಳದ ಹಿರೇಮಠದ ಪೂಜ್ಯ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಇಲ್ಲಿನ ಶ್ರೀಮಠವು ಈ ಭಾಗದಲ್ಲಿ ಜಾತ್ರೆ, ಉತ್ಸವಗಳ ಮೂಲಕ ಸದಾಕಾಲ ಧರ್ಮ ಜಾಗೃತಿ, ಜನ ಜಾಗೃತಿಗೊಳಿಸಿ ಹಿರಿಯ ಮಠಗಳಿಗೆ ಮಾದರಿಯಾಗಿದೆ. ಐತಿಹಾಸಿಕ ಕಂಪಿನ ಸಂಗೊಳ್ಳಿ ಗ್ರಾಮವು ಎಲ್ಲ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರಲಿ ಎಂದು ಹಾರೈಸಿದರು. ಶ್ರೀ ಹಿರೇಮಠದ ಪೂಜ್ಯ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನಿಚ್ಚಣಕಿಯ ಶ್ರೀ ಮಡಿವಾಳೇಶ್ವರ ಮಠದ ಪೂಜ್ಯ ಪಂಚಾಕ್ಷರ ಸ್ವಾಮೀಜಿ, ಹೊಸೂರು ಮಡಿವಾಳೇಶ್ವರ ಮಠದ ಗಂಗಾಧರ ಸ್ವಾಮೀಜಿ, ಏಣಗಿಯ ಬಂಗಾರಜ್ಜನ ಮಠದ ವೀರುಪಾಕ್ಷಯ್ಯ ಸ್ವಾಮೀಜಿ, ಸಂಗೊಳ್ಳಿಯ ವೈದ್ಯ ಡಾ.ಬಸವರಾಜ ಹಿರೇಮಠ, ಗ್ರಾಮದೇವಿ ಕಮಿಟಿಯ ಅಧ್ಯಕ್ಷ ಬಸವರಾಜ ಕೊಡ್ಲಿ, ಇಂಜನೀಯರ ವೀರೇಶ ಹೊಳೆಪ್ಪನವರ, ನಿವೃತ ಶಿಕ್ಷಕ ಸಿ.ಆಯ್. ಹೊಸಮನಿ, ಪಿ.ವಾಯ್.ಕುಂದೇಕರ, ಕೆ.ರವೀಂದ್ರ ಕೂಂಕೂರ, ಚಂದ್ರಶೇಖರ ಹಿರೇಮಠ ವೇದಿಕೆ ಮೇಲಿದ್ದರು.

ಇದಕ್ಕೂ ಮುನ್ನ ಮುಂಜಾನೆ ಸುತಗಟ್ಟಿಯ ಹಿರೇಮಠದ ಸಿದ್ದಲಿಂಗ ದೇವರು, ಶರಣಮಟ್ಟಿಯ ಶಿವಶಕ್ತಿ ಮಠದ ರುದ್ರಯ್ಯ ದೇವರು, ಅವರಾದಿಯ ವೇ. ಮೂ.ಉಳವಯ್ಯ ಹಿರೇಮಠ, ಧರ್ಮದರ್ಶೀ ಮಂಜಯ್ಯ ಹಿರೇಮಠ ಹಾಗೂ ಶ್ರೀ ಗುರು ಸಿದ್ದಲಿಂಗೇಶ್ವರ ಹಿರೇಮಠದ ವೈದಿಕ–ರಿಂದ ಹೋಮ, ಹವನ, ವಿಶೇಷ ಪೂಜೆ, ಪ್ರಾರ್ಥನೆ, ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚಣೆಗಳು ಜರುಗಿದವು. ಅನ್ನ ಪ್ರಸಾದ ಏರ್ಪಡಿಸಲಾಗಿತ್ತು. ಗ್ರಾಮದ ವಿವಿಧ ಬೀದಿಗಳಲ್ಲಿ ಮುತ್ತೈದೆಯ–ರಿಂದ ಕುಂಭಮೇಳ, ಶ್ರೀಗಳ ಭಾವಚಿತ್ರದ ಮೆರವಣಿಗೆ, ಪಾಲಕಿ ಉತ್ಸವ ನಡೆಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಉಪನ್ಯಾಸಕ ಚನ್ನಪ್ಪ ಹಕ್ಕಿ ಸ್ವಾಗತಿಸಿದರು. ಉದಯ ಹಿರೇಮಠ ನಿರೂಪಿಸಿದರು. ಪತ್ರಕರ್ತ ಮಹಾಂತೇಶ ರಾಜಗೋಳಿ ವಂದಿಸಿದರು.

## ಇಂದು ಮಾಧವಾನಂದ ಪ್ರಭುಜಿ ಅವರ ಆಧ್ಯಾತ್ಮಿಕ ಸಪ್ತಾಹ

ಹಳ್ಳೂರ 23. ಸಮರ್ಥ ಸದ್ಗುರು ಗಿರಿಮಲ್ಲೇಶ್ವರ ಮಹಾರಾಜರ ಮತ್ತು ಶ್ರೀ ಮಾಧವಾನಂದ ಪ್ರಭೂಜಿಯವರ ಸ್ಮರಣಾರ್ಥ ಆದ್ಯಾತ್ಮ ಸಪ್ತಾಹ ಕಾರ್ಯಕ್ರಮವು ಮಂಗಳವಾರದಂದು ಗ್ರಾಮದ ಶ್ರೀ ಮಾಧವಾನಂದ ಆಶ್ರಮದಲ್ಲಿ ಮುಂಜಾನೆ ದಾಸ ಬೋಧ ಹಾಗೂ ವೀಣಾ ಪೂಜೆಯೊಂದಿಗೆ ಪ್ರಾರಂಭವಾಗಿ ವಿಮಲಬ್ರಹ್ಮ ನಿರೂಪಣೆ ಹಾಗೂ ಪುಸ್ಪವೃಷ್ಟಯೊಂದಿಗೆ ಆಧ್ಯಾತ್ಮಿಕ ಸಪ್ತಾಹ ಕಾರ್ಯಕ್ರಮವು ಮಂಗಲಗೊಳ್ಳುವದು. ಸರ್ವರಿಗೂ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ.

ಬೆನ್ನಾಳೆ ಪ್ರಭೂಜಿ ಮಹಾರಾಜರ ಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗುವುದು. ಆರಬಾಂವಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಭಾಲಚಂದ್ರ ಜಾರಕಿಹೋಳಿ ಅವರು ಅಧ್ಯಕ್ಷತೆ ವಹಿಸುವುರು. ಮಹಾದೇವ ಮಹಾರಾಜರು. ವಿಜಯ ಮಹಾರಾಜರು. ಅಭಿನವ ಮಂಜುನಾಥ್ ಗುರೂಜಿ. ಶ್ರೀಮಂತ ಮಹಾರಾಜರು. ಬಾಳಯ್ಯ ಸ್ವಾಮೀಜಿ. ಭರತೇಶ ಉಪಾಧ್ಯೆ ಮುಖ್ಯ ಅಥಿ–ತಿಗಳಾಗಿ ಭಾಗವಹಿಸುವರು ಆದ್ಯಾತ್ಮ ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಶ್ರೀ ಮಾಧವಾನಂದ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಅಮಿತ್ ಷಾ ಹೇಳಿಕೆ ಖಂಡಿಸಿ

## ಡಾ. ಬಾಬಾಸಾಹೇಬ ಅಂಬೇಡ್ಕರ ಅಭಿಮಾನಿ ಬಳಗದಿಂದ ಪ್ರತಿಭಟನೆ




ಬೆಳಗಾವಿ– ಕೇಂದ್ರ ಗೃಹ ಸಚಿವ ಅಮಿತ್ ಶಾರವರು ದೆಹಲಿ ಸಂಸತ್ತ ಭವನದಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರಿಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಬಾಬಾ ಸಾಹೇಬರಿಗೆ ಅಗೌರವ ತೋ–ರಿದ್ದನ್ನು ಖಂಡಿಸಿ ಯುವ ಮುಖಂಡ ಮಹೇಶ್ ಎಸ್ ಶಿಗಿಹಳ್ಳಿ ಅವರ ನೇತೃತ್ವದಲ್ಲಿ ಸೋಮವಾರ ಬೆಳಗಾವಿ ಚನ್ನಮ್ಮ ವೃತ್ತದಲ್ಲಿ ಇತಿಚೆಗೆ ಪ್ರತಿಭಟನೆ ಮಾಡಲಾಯಿತು.

ಕೇಂದ್ರ ಸರ್ಕಾರ ಅಮಿತ ಶಾ ರವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಸಂಘಟಣೆ ವತಿಯಿಂದ ಆಗ್ರಹಿಸಿಲಾಯಿತು.

ಈ ಸಂದರ್ಭದಲ್ಲಿ ಮಹೇಶ ಎಸ್ ಶಿಗಿಹಳ್ಳಿ, ಅಕ್ಷಯ ಕೊಲ್ಕಾರ್, ಮಲ್ಲೇಶ್ ಮೂಳಗಷಿ, ಪ್ರಮೋದ ಮೇತ್ರಿ, ಬಾಬು ಮೇತ್ರಿ, ಪಕ್ಕೀರ ಜಕಾತಿ, ದುರ್ಗಪ್ಪ ಟೋಪಿ, ಶೋಭೋಧ್ ಜಕಾತಿ, ಚೆನ್ನಬಸಪ್ಪ ಟೋಪಿ, ಮಲ್ಲಿಕಾರ್ಜುನ್ ತಳವಾರ, ಯೋಗೇಶ್ ಜಕಾತಿ, ಮಹೇಶ್ ಮೇತ್ರಿ, ಸಿದ್ರಾಯಿ ಶಿಗಿಹಳ್ಳಿ, ಲಕ್ಷ್ಮಣ್ ಮೇತ್ರಿ, ಯಲ್ಲಪ್ಪ ಜಕಾತಿ, ಸಚಿನ್ ಕೋಲ್ಕರ್, ವಿಜಯ ಪರಸನ್ನವರ್, ಶೇಖರ್ ಮಂಡೊಳ್ಳಿ ಹಾಗೂ ಡಾ. ಬಾಬಾ ಸಾಹೇಬ ಅಂಬೇಡ್ಕರವರ ಅಭಿಮಾನಿಗಳ ಬಳಗ ಉಪಸ್ಥಿತ–ರಿದ್ದರು.

## ಚುನಾವಣೆಯಲ್ಲಿ ವಿಜೇತರಾದ ಶ್ರೀಶೈಲ ಯಡಳ್ಳಿ - ಸದಸ್ಯರನ್ನು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಸನ್ಮಾನ

ಬೈಲಹೊಂಗಲ ತಾಲೂಕಾ ಪ್ರಾಥ–ಮಿಕ ಸಹಕಾರಿ ಕೃಷಿ ಮತ್ತು ಗ್ರಾಮಿಣ ಅಭಿವೃದ್ದಿ ಬ್ಯಾಂಕ್ ನಿಯಮಿತ ಬಿನ್ ಸಾಲಗಾರ ಕ್ಷೇತ್ರದ ಚುನಾವಣೆಯಲ್ಲಿ ವಿಜೇತರಾದ ಶ್ರೀಶೈಲ ಯಡಳ್ಳಿ ಹಾಗೂ ಇನ್ನುಳಿದ ಸದಸ್ಯರನ್ನು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಸನ್ಮಾನಿಸಿದರು. ಬೈಲಹೊಂಗಲ–ಬೈಲಹೊಂಗಲ ತಾಲೂಕಾ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮಿಣ ಅಭಿವೃದ್ದಿ ಬ್ಯಾಂಕ್ ನಿ, ಇದರ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಒಟ್ಟು 15 ಸ್ಥಾನಗಳಲ್ಲಿ 14 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಗೊಂಡು ಬಿನ್ ಸಾಲಗಾರ ಕ್ಷೇತ್ರಕ್ಕೆ ಮಾತ್ರ ಭಾನುವಾರ ಚುನಾವಣೆ ಜರುಗಿತು.



ಸಾಲಗಾರ ಸಾಮಾನ್ಯ ಕ್ಷೇತ್ರದಿಂದ ಬುಡರಕಟ್ಟಿ ವಿಭಾಗದ ಅಕ್ಷರ ಆನಿಕಿವಿ, ನಾಗನೂರ ವಿಭಾಗದ ಉಮೇಶ ಪಾಟೀಲ, ವಕ್ಕುಂದ ವಿಭಾಗದ ಪರ್ವತಗೌಡ ಪಾಟೀಲ, ಸಂಗೊಳ್ಳಿ ವಿಭಾಗದ ಯಲ್ಲಪ್ಪ ಕೌಜಲಗಿ, ಅರವಳ್ಳಿ ವಿಭಾಗದ ರುದ್ರಗೌಡ ಪಾಟೀಲ, ಬೈಲಹೊಂಗಲ ವಿಭಾಗದ ಶಿವಬಸಪ್ಪ ಕುಡಸೋಮಣ್ಣವರ, ಸಂಪಗಾವಿ ವಿಭಾಗದ ಶಂಕರಕುಮಾರ ಚಿಟ್ಟಿ, ದೇಶನೂರ ವಿಭಾಗದ ಶಂಕರಗೌಡ ಪಾಟೀಲ, ಸಾಲಗಾರ ಹಿಂದುಳಿದ ಅ ವರ್ಗದ ಮಿಸಲು ಕ್ಷೇತ್ರದ ನೇಗಿನಹಾಳ ವಿಭಾಗದ ಜಗಧೀಶ ಬಜೇರಿ, ಸಾಲಗಾರ ಹಿಂದುಳಿದ ಬ ವರ್ಗದ ಕ್ಷೇತ್ರದ ಮ–ರಿಕಟ್ಟಿ ವಿಭಾಗದ ಶಿವಾನಂದ ಕಲ್ಲೂರ, ಸಾಲಗಾರ ಮಹಿಳಾ ಮಿಸಲು ಕ್ಷೇತ್ರದ ನೇಸರಗಿ, ದೊಡವಾಡ ವಿಭಾಗದ ಮಾಲತಿ ಪಾಟೀಲ, ರತ್ನವ್ವ ಧಾರವಾಡ, ಸಾಲಗಾರ ಪರೀಶಿಷ್ಟ ಜಾತಿಯ ಮಿಸಲು ಕ್ಷೇತ್ರದ ಬೆಳವಡಿ ವಿಭಾಗದ ವಿರೇಶ ಎಕ್ಕೇರಿ, ಸಾಲಗಾರ ಪರಿಶೀಷ್ಟ ಪಂಗಡ ಮಿಸಲು ಕ್ಷೇತ್ರ ವಣ್ಣೂರ ವಿಭಾಗದ ಲಕ್ಕಪ್ಪ ಮಾಸ್ತಮರಡಿ ಇವರುಗಳು ಅವಿರೋಧವಾಗಿ ಆಯ್ಕೆಗೊಂಡಿದ್ದರು.

ರವಿವಾರ ನಡೆದ ಸಾಲಗಾರರಲ್ಲದ ಬಿನ್ ಸಾಲಗಾರ ವಿಭಾಗದ ಒಟ್ಟು 536 ಅರ್ಹ ಮತದಾರರನ್ನು ಹೊಂದಿದ್ದು ಚುನಾವಣೆಯಲ್ಲಿ ಪ್ರತಿಶತ ಶೇ. 92 ಮತದಾನ ಜರುಗಿ ಶ್ರೀಶೈಲ ಯಡಳ್ಳಿ ಇವರಿಗೆ 282 ಮತ ಪಡೆದರೆ ಇವರ ಪ್ರತಿಸ್ಪರ್ಧಿ ಗಂಗಾಧರ ಹೊಂಡದ ಇವರು 205 ಮತ ಪಡೆದು ಶ್ರೀಶೈಲ ಶಂಕರೆಪ್ಪ ಯಡಳ್ಳಿ ಅವರು 77 ಮತಗಳಿಂದ ವಿಜಯಶಾಲಿಯಾದರು. ಚುನಾವಣಾ ಅಧಿಕಾರಿಯಾಗಿ ಬೈಲಹೊಂಗಲ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಭಂಧಕ ಶಾಹಿನ್ ಅಖ್ತರ ಕಾರ್ಯನಿರ್ವಹಿಸಿದರು. ಅಭ್ಯರ್ಥಿಯ ಗೆಲುವಿನ ನಗೆ ಬಿರುತ್ತಿದ್ದಂತೆ ತಮ್ಮ ಬೆಂಬಲಿಗರು ಗುಲಾಲ ಎರಚಿ, ಸಿಹಿ ಹಂಚಿ ಸಂಭ್ರಮಿಸಿದರು.



ಬೆಳಗಾವಿಯ ಸಿ.ಪಿ.ಎಡ್ ಮೈದಾನದಲ್ಲಿ ಡಿಸೆಂಬರ್ 26, 27ರಂದು ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಉಸ್ತುವಾರಿಗಳಾದ ರಣದೀಪ್ ಸಿಂಗ್ ಸುರ್ಜೆವಾಲಾ ಹಾಗೂ ಉಪ ಮುಖ್ಯಮಂತ್ರಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಮತ್ತಿತರರ ಜೊತೆ ಸೇರಿ ಮೈದಾನಲ್ಲಿನ ಪೂರ್ವಸಿದ್ಧತೆಗಳ ಪರಿಶೀಲನೆ ನಡೆಸಿದರು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕ ಗಣೇಶ ಹುಕ್ಕೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಪಿಕೆಪಿಎಸ್ ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ



ಹಳ್ಳೂರ 23. ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ 7 ಅಭ್ಯರ್ಥಿಗಳಾದ ಯಾದಪ್ಪ ನಿಡೋಣಿ. ಮಹಾವೀರ ಛಬ್ಬಿ.ಗುರುನಾಥ ಬೋಳನ್ನವರ.ಬಾಳೆಶ ನೆಸುರ. ತುಕಾರಾಮ ಸನದಿ.ರಾಜು ತಳವಾರ.ರೇವಪ್ಪ ಸಿಂಪಿಗೇರ ಅಭ್ಯರ್ಥಿಗಳಿಗೆ, ಹಾಗೂ ಗ್ರಾಮದ ಪ್ರಮುಖರಿಗೆ ಬಾಳೆಶ ನೇಸುರ ಅವರ ತೋಟದಲ್ಲಿ ಸನ್ಮಾನ ಕಾರ್ಯಕ್ರಮ ಜರಗಿತು.

ಶ್ರೀಶೈಲ ಬಾಗೋಡಿ ಮಾತನಾಡಿ ನಮ್ಮ ಪೆನಲದಲ್ಲಿ 7 ಜನ ಗೆಲ್ಲಲು ಜನರ ಸಹಕಾರದಿಂದ ಗೆಲುವು ಸಾಧಿಸಿದ್ದೇವೆ ಒಗ್ಗಟ್ಟಿನಿಂದ ಕೆಲಸ ಕಾರ್ಯ ಮಾಡಿ ಗ್ರಾಮದ ಸುಧಾರಣೆಗೆ ಕೈ ಜೋಡಿಸೋನಾ ಎಂದು ಹೇಳಿದರು. ಮಾಜಿ ಸೈನಿಕ ಬಾಳಪ್ಪ ಶಿವಾಪುರ ಮಾತನಾಡಿ ವಿವಿಧೋದ್ದೇಶ ಸಹಕಾರ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಅಧಿಕಾರ ಆಸೆ ಬಿಟ್ಟು ಪ್ರಾಮಾಣಿಕ ಕೆಲಸ ಮಾಡಿ ರೈತರ ಹಿತ ಕಾಪಾಡಲು ಪ್ರಯತ್ನ ಪಡಬೇಕು ಎಂದು ಹೇಳಿದರು. ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಈ ಸಮಯದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಭೀಮಶಿ ಮಗದುಮ. ಮುಖಂಡರಾದ ಅಡಿವೆಪ್ಪ ಪಾಲಬಾಂವಿ. ಮುಪ್ಪಯ್ಯ ಹಿಪ್ಪರಗಿ. ಮಲ್ಲಪ್ಪ ಛಬ್ಬಿ.ಯಮನಪ್ಪ ನಿಡೋಣಿ. ರಮೇಶ ಲೋಕನ್ನವರ. ಭಿಮಪ್ಪ ಹೊಸಟ್ಟಿ. ಬಸಪ್ಪಾ ಹಡಪದ ಅಯ್ಯಪ್ಪ ಹೀರೆಮಠ.ಗೋಪಾಲ ಅಟ್ಟಮಟ್ಟಿ . ಹನಮಂತ ಹಳ್ಳೂರ.ಶ್ರೀಕಾಂತ್ ಕೌಜಲಗಿ.ಭೀಮ ಶೇಪ್ಪ ತೇರದಾಳ.ಈಶ್ವರ ಪಾಲಬಾಂವಿ. ಸಿದ್ಧಪ್ಪ ಕೂಲಿಗೋಡ. ಲಕ್ಷ್ಮಣ ಕೌಜಲಗಿ. ಪುಂಡಲೀಕ ಸಿದ್ದಾಪೂರ. ಅಲ್ಲು ಗೌರವ್ವಗೊಳ. ವಿಠ್ಠಲ ತೋಟಗಿ. ಮಂಜು ಗುಡದನ್ನವರ. ಸಿದ್ದು ಬಡಿಗೇರ. ಪ್ರಕಾಶ ನುಚ್ಚುಂಡಿ. ಶಂಕರ ಬೋಳನ್ನವರ. ಪ್ರಕಾಶ್ ರಾಮದುರ್ಗ ಸೇರಿದಂತೆ ಅನೇಕರಿದ್ದರು.

# ವೃಕ್ಷಥಾನ್ ಪಾರಂಪರಿಕ ಓಟ ಚಾಲನೆ

ವಿಜಯಪುರ, : ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಅರಣ್ಯ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ವೃಕ್ಷ ಅಭಿಯಾನ ಪ್ರತಿಷ್ಠಾನ ವಿಜಯಪುರ ಇವರ ಸಂಯುಕ್ತಾಶ್ರಯದಲ್ಲಿ ಪರಿಸರ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗೆ ಆಯೋಜಿಸಿದ ವೃಕ್ಷಥಾನ್ ಪಾರಂಪರಿಕ ಓಟ–2024 ಭಾನುವಾರ ಯಶಸ್ವಿಯಾಗಿ ಜರುಗಿದ್ದು, 21 ಕಿ.ಮೀ, 10 ಕಿ.ಮೀ ಹಾಗೂ 5 ಕಿ.ಮೀ ವಿಭಾಗಗಳಲ್ಲಿ ನಡೆದ ವೃಕ್ಷಥ–ಾನ್ ಪಾರಂಪರಿಕ ಓಟ ಕಾರ್ಯಕ್ರಮದಲ್ಲಿ ಹಲವು ಖ್ಯಾತನಾಮರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಮ್ಯಾರಥಾನ್‌ಗೆ ಚಾಲನೆ ನೀಡಿದ ವಿಧಾನ ಸಭಾಧ್ಯಕ್ಷರಾದ ಯು ಟಿ ಖಾದರ್ ಫರೀದ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಅವರು 5 ಕಿ.ಮೀ. ಓಡಿ ಯುವಕರನ್ನು ಹುರಿದುಂಬಿಸಿದರು.

ವಿಧಾನಸಭಾಧ್ಯಕ್ಷರಾದ ಯು.ಟಿ ಖಾದರ್ ಅವರು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಅವುಗಳ ಮಹತ್ವ ಸಾರುವ ನಿಟ್ಟಿನಲ್ಲಿ ಕೋಟಿ ವೃಕ್ಷ ಅಭಿಯಾನದ ಅಂಗವಾಗಿ ರವಿವಾರ ಹಮ್ಮಿಕೊಂಡ ವೃಕ್ಷಥಾನ ಪಾರಂಪರಿಕ ಓಟದ ಬಹುಮಾನ ವಿತರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಸಂತೋಷ ತಂದಿದೆ.ಭವಿಷ್ಯದಲ್ಲಿ ಪರಿಸರ ಹಾಗೂ ಭವ್ಯ ಸ್ಮಾರಕಗಳ ಸಂರಕ್ಷಣೆಯ ಆಶಯಗಳನ್ನೊಳಗೊಂಡ ಈ ಕಾರ್ಯಕ್ರಮದ ಉದ್ದೇಶ ಸಾಪಲ್ಯತೆ ಕಾಣಲಿ. ನಮ್ಮ ಮುಂದಿನ ಪೀಳಿಗೆಗೆ ಸ್ವಚ್ಛ ಸುಂದರ ಪರಿಸರ ನಿರ್ಮಾಣ ಮಾಡುವ ಹೊಣೆ ನಮ್ಮದಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ಪರಿಸರ ಹಾಗೂ ಪಾರಂಪರಿಕ ಸ್ಮಾರಕಗಳ ರಕ್ಷಣೆಯ ಜಾಗೃತಿ ಮೂಡಿಸುವುದು ಅತ್ಯವಶ್ಯಕವಾಗಿದೆ. ಪರಿಸರದ ಮಹತ್ವ ತಿಳಿಸಿಕೊಡುವುದು ಇಂದಿನ ಕಾಲಘಟ್ಟದ ಅಗತ್ಯವೂ ಆಗಿದೆ ಎಂದು ಹೇಳಿದರು.

ಪರಿಸರ ಮಾಲಿನ್ಯ ಹವಾಮಾನ ಬದಲಾವಣೆ ಆರೋಗ್ಯಕ್ಕೆ ಸಂಬಂಧಿಸಿದ ಏರು–ಪೇರುಗಳಿಗೆ ಮುಖ್ಯ ಕಾರಣ. ಈ ನಿಟ್ಟಿನಲ್ಲಿ ಪರಿಸರ ರಕ್ಷಣೆಗೆ ಮುಂದಾಗಬೇಕು. ನಮ್ಮ ಪೂರ್ವಜರು




ಪರಿಸರ ಕಾಳಜಿಯಿಂದಾಗಿ ಇಂದು ನಾವು ಪ್ರಕೃತಿಯ ಸಂಪನ್ಮೂಲವನ್ನು ಪಡೆದಿದ್ದೇವೆ. ಪರಿಸರ ರಕ್ಷಣೆ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಪರಿಸರ, ಸಮೃದ್ಧ ಆರೋಗ್ಯ ಒದಗಿಸುವ ಜವಾಬ್ದಾರಿ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಪರಿಸರ ಕಾಳಜಿ ಹೊಂದಬೇಕು. ವೃಕ್ಷೋತ್ಥಾನ ಅಭಿಯಾನದ ಸಂದೇಶ ಕೇವಲ ಜಿಲ್ಲೆಗೆ ಮಾತ್ರವಲ್ಲದೇ ದೇಶಕ್ಕೆ ದೊಡ್ಡ ಸಂದೇಶ ನೀಡುವುದಾಗಿದೆ ಎಂದು ಹೇಳಿದರು.

ಮನುಷ್ಯ ಪರಿಸರದಿಂದ ವಿಮುಖನಾಗದೇ ಪ್ರಕೃತಿಯೊಂದಿಗೆ ಇದ್ದಾಗ ಎಲ್ಲ ಸಮಸ್ಯೆಗಳ ಪರಿಹಾರ ಕಾಣಬಹುದಾಗಿದೆ. ಅರಣ್ಯೀಕರಣದ ಮಹತ್ವದ ಬಗ್ಗೆ ಜಾಗೃತಿ ಅಗತ್ಯವಾಗಿದೆ. ಪರಿಸರ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪರಿಸರ ಉಳಿಸಿ ಬೆಳೆಸಬೇಕು. ವೃಕ್ಷಥಾನ ಆಯೋಜನೆಯ ಸಂದೇಶ ಸಾಕಾರಗೊಳ್ಳಲಿ, ಓಟದಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯವಾಗಿದೆ ಎಂದು ಅವರು ಹೇಳಿದರು.

ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಖಾತೆ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರು ಮಾತನಾಡಿ, ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಗಿಡ–ಮರಗಳನ್ನು ಬೆಳೆಸಿ ಸ್ವಚ್ಛ ಸುಂದರ ಪರಿಸರ ನಿರ್ಮಾಣ ಮಾಡುವ ಮೂಲಕ ವಿಜಯಪುರದ ಐತಿಹಾಸಿಕ ಗತವೈಭವನ್ನು ಮರಳಿ ಪಡೆಯಲು ಪ್ರತಿಯೊಬ್ಬರು ಕೈ ಜೋಡಿಸುವಂತೆ ಅವರು ಕರೆ ನೀಡಿದರು.

ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಸ್ಮಾರಕಗಳಿವೆ. ವಿಶ್ವ ಪ್ರಸಿದ್ಧ ಗೋಲಗುಂಬಜ್, ಇಬ್ರಾಹಿಂರೋಜಾ,ಅಸರ ಮಹಲ್, ಕುಮಟಗಿ ಬೇಸಿಗೆ ಅರಮನೆ, ಉಪ್ಪಲಿ ಬುರಜ್ ಸೇ–ರಿದಂತೆ ಹಲವು ಸ್ಮಾರಕಗಳನ್ನು ಜಿಲ್ಲೆ ಹೊಂದಿದೆ. ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಣೆ ಮಾಡಿ, ಅಭಿವೃದ್ಧಿಪಡಿಸಿ ಸ್ಮಾರಕಗಳ ಬಗ್ಗೆ ವ್ಯಾಪಕ ತಿಳುವಳಿಕೆ ಮೂಡಿಸಬೇಕು. ಪ್ರವಾಸಿಗರನ್ನು ಆಕರ್ಷಿಸಲು ಪ್ರವಾಸೋದ್ಯಮ ಕ್ಷೇತ್ರ ಬೆಳವಣಿಗೆ, ವ್ಯಾಪಾರ ಹಾಗೂ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸಲು ಸಾಧ್ಯವಾಗಲಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಐತಿಹಾಸಿಕ ಸ್ಮಾರಕಗಳ ರಕ್ಷಣೆಯೊಂದಿಗೆ ಪರಿಸರ ಜಾಗೃತಿ ಮೂಡಿಸುವ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪರಿಸರ ರಕ್ಷಣೆ, ಪರಿಸರ ಪ್ರೇಮಿ ಹಾಗೂ ಪರಿಸರ ಕುರಿತು ಅಪಾರ ಕಾಳಜಿ ಹೊಂದಿದ್ದ ಜ್ಞಾನಯೋಗಾಶ್ರಮದ ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಶ್ರೀಗಳಿಗೆ ಈ ಅಭಿಯಾನ ಅರ್ಪಣೆ ಮಾಡಲಾಗಿದೆ ಎಂದು ಹೇಳಿದರು. ವಿಶಾಲವಾದ ಭೂಪ್ರದೇಶ, ಹಸಿರು ಹಾಸಿಗೆ, ತಿಳಿನೀರಿನ ಹೊಳೆಯ ದಂಡೆ, ಸುರಿಯುವ ಮಳೆ, ಪರಿಶುದ್ಧ ಗಾಳಿ, ಅನಂತ ಆಗಸ ಇದೆಲ್ಲ ನಿಸರ್ಗ ನಿಧಿ! ನಿಜ ಸಂಪದ!! ಎಂಬ ಸಿದ್ದೇಶ್ವರ ಸ್ವಾಮಿಜಿಗಳ ನುಡಿಯಂತೆ ನಡೆಯೋಣ ಎಂದು ಹೇಳಿದರು.

ಜಲಸಂಪನ್ಮೂಲ ಸಚಿವನಾಗಿದ್ದ ಸಂದರ್ಭದಲ್ಲಿ ವೃಕ್ಷ ಅಭಿಯಾನ ಆರಂಭಿಸುವ ಮೂಲಕ ಜಿಲ್ಲೆಯ ಅರಣ್ಯೀಕರಣವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಈಗಾಗಲೇ 1.5 ಕೋಟಿ ಗಿಡಗಳನ್ನು ನೆಟ್ಟು ಪೋಷಿಸಲಾಗಿದೆ. ಜಿಲ್ಲೆಯ ಅರಣ್ಯ ಪ್ರದೇಶ ವಿಸ್ತೀರ್ಣ ಶೇ.0.17 ರಿಂದ ಶೇ.2.5ಕ್ಕೆ ತಲುಪಲು ಸಾಧ್ಯವಾಗಿದೆ. ಜಿಲ್ಲೆಯ ಹಸರೀಕರಣ ಹಾಗೂ ಐತಿಹಾಸಿಕ ಸ್ಮಾರಕಗಳ ಮಹತ್ವ ವಿಶ್ವದಾದ್ಯಂತ ಸಾರುವ ಈ ವಿಶೇಷವಾದ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅರಣ್ಯ ಇಲಾಖೆ, ವೃಕ್ಷ ಅಭಿಯಾನ ಪ್ರತಿಷ್ಠಾನ ಸೇರಿದಂತೆ ಸಾರ್ವಜನಿಕರು ಸಂಘ–ಸಂಸ್ಥೆಗಳು ಕೈ ಜೋಡಿಸಿರುವುದರಿಂದ ಈ ಅಭೂತಪೂರ್ವ ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಹಾಗೂ ಮ್ಯಾರಾಥಾನ್‌ನಲ್ಲಿ ಭಾಗವಹಿಸಿದ ಪ್ರತಿಯೊಬ್ಬ–ರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು. ಜಿಲ್ಲೆಯ ನೀರಾವರಿ ಯೋಜನೆಗಳಿಂದಾಗಿ ಅಂತರ್ಜಲಮಟ್ಟ ಹೆಚ್ಚಾಗಿದ್ದು ಇದರಿಂದ ರೈತರಿಗೆ ಅನುಕೂಲ ಒದಗಿಸಿದೆ.ಎಲ್ಲರ ಸಹಭಾಗಿತ್ವದಲ್ಲಿ ಸುಂದರ ಪರಿಸರವನ್ನು ಕಾಪಾಡಿಕೊಂಡು ನಮ್ಮ ಮುಂದಿನ ಪೀಳಿಗೆಗೆ ನೀಡುವ ಬಹು ದೊಡ್ಡ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ತುಂಬಗಿ–ತಿಡಗುಂದಿ ಗ್ರಾಮದ ಶ್ರೀಮತಿ ಶಾಂತಮ್ಮ ಹರನಾಳ, ಸಂಚಾರಿ ಪೊಲೀಸ್ ಠಾಣೆಯ ಎ.ಎಸ್.ಐ ಶಿವಾನಂದ ಕಟ್ಟಿಮನಿ, ಮ್ಯಾರಥಾನ ಓಟಗಾರ ನರೇನ್ ನಾಗಶೆಟ್ಟಿ ಹಾಗೂ ಪ್ರಾಚೀನ ಪರಂಪರೆಯ ಸಂರಕ್ಷಣೆರಾದ ಅಮೀನ ಹುಲ್ಲೂರ ಅವರನ್ನು ಸನ್ಮಾನಿಸಲಾಯಿತು. ವಿವಿಧ ವಿಭಾಗದ ಓಟಗಳಲ್ಲಿ ಭಾಗವಹಿಸಿದ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪರಿಷತ್ತಿನ ಶಾಸಕರಾದ ಸುನೀಲಗೌಡ ಪಾಟೀಲ, ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಕೆಎಸ್‌ಡಿಎಲ್ ಎಂ.ಡಿ. ಪ್ರಶಾಂತ, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಸೌಮ್ಯ ಬಾಪಟ್, ಸೈನಿಕ ಶಾಲೆಯ ಪ್ರಾಂಶುಪಾಲರಾದ ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಠ, ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಶರಣಯ್ಯ ಕೆ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಭಜಂತ್ರಿ, ವೃಕ್ಷ ಅಭಿಯಾನ ಪ್ರತಿಷ್ಠಾನದ ಮಹಾಂತೇಶ ಬಿರಾದಾರ, ಸಂಚಾಲಕರಾದ ಮುರುಗೇಶ ಪಟ್ಟಣಶೆಟ್ಟಿ ಇತರರು ಉಪಸ್ಥಿತರಿದ್ದರು.

ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾದ ವೃಕ್ಷಥಾನ್ : ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಸಂರಕ್ಷಣೆ ಹಾಗೂ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಜಯಪುರ ನಗರದಲ್ಲಿ ಹಮ್ಮಿಕೊಂಡ ವೃಕ್ಷಥ್ಥಾನ್ ಹೆರಿಟೇಜ್ ರನ್ ಕಾರ್ಯಕ್ರಮ ಅಭೂತಪೂರ್ವ ಯಶಸ್ವಿಯಾಗಿ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು. ಈ ಓಟದಲ್ಲಿ ವಿಧಾನಸಭಾಧ್ಯಕ್ಷರಾದ ಯು.ಟಿ ಖಾದರ್, ಸಚಿವರಾದ ಡಾ.ಎಂ.ಬಿ.ಪಾಟೀಲ, ಪರಿಷತ್ತಿನ ಶಾಸಕರಾದ ಸುನೀಲಗೌಡ ಪಾಟೀಲ್, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಎಸ್.ಪಿ ಲಕ್ಷ್ಮಣ ನಿಂಬರಗಿ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಅತಿ ಉತ್ಸಾಹದಿಂದ ಓಟದಲ್ಲಿ ಪಾಲ್ಗೊಂಡು ಓಟಗಾರರಿಗೆ ಪ್ರೇರಣೆ ನೀಡಿ ಪ್ರೋತ್ಸಾಹಿಸಿದರು. ವಿವಿಧ ವಿಭಾಗದ ಓಟಗಳಿಗೆ ಚಾಲನೆ: ವಿಧಾನಸಭಾಧ್ಯಕ್ಷರಾದ ಯು.ಟಿ ಖಾದರ್, ಬೃಹತ್ ಹಾಗೂ ಮಧ್ಯಮ ಕೈಗಾ–ರಿಕೆ ಹಾಗೂ ಮೂಲಸೌಲಭ್ಯ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ, ಶಾಸಕರಾದ ಸುನೀಲಗೌಡ ಪಾಟೀಲ್, ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ, ಮೇಯರ್ ಮಹೇಜಬಿನ್ ಹೊರ್ತಿ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಎಸ್.ಪಿ ಲಕ್ಷ್ಮಣ ನಿಂಬರಗಿ ಅವರು ವಿವಿಧ ವಿಭಾಗದ ಓಟಗಳಿಗೆ ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.


**ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**
**(ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು)**
**ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ,**
**ಕಾಡಾ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು,**
**ವಿಭಾಗ ಸಂ.3 ಚಿಕ್ಕೋಡಿ. ಜಿ॥ ಬೆಳಗಾವಿ.**
email : eediv3cada@gmail.com

ಸಂ:ಕಾಇಂ/ಕಾಡಾ/ಮಘಯೋ/ವಿ3/ಟೆ.ಪ್ರ/ಯೋಶಾ–1/2024–25/166 ದಿನಾಂಕ:23–12–2024

**ಅಲ್ಪಾವಧಿ ಟೆಂಡರ್ ಪ್ರಕಟಣೆ (3 ನೇ ಕರೆ)**
**(ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)**

ಮಾನ್ಯ ರಾಜ್ಯಪಾಲರು ಕರ್ನಾಟಕ ಸರ್ಕಾರ ಇವರ ಪರವಾಗಿ 2024–25 ನೇ ಸಾಲಿಗೆ ಕಾಡಾ ಇಲಾಖೆಯ 4705 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.33.84 ಲಕ್ಷದ ಮೊತ್ತದ 1 ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೇಂಟ ಪೋರ್ಟಾಲ್‌ನಲ್ಲಿ (https://kppp.karnataka.gov.in) ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಟೆಂಡರ್ ವಿವರಗಳು:Indent Nos. in e-portal:Indent No: 56, Est. Amount put to tender in Rs. Lakhs:33.84, Last Date for receipt of tenders:30-12-2024 Up to 17.30 hrs., Date of Opening of Tenders : 01-01-2025 at 10.30 hrs.

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರಿನ ನಿಯಮ/ಟೆಂಡರ ಪ್ರೋಸೆಸಿಂಗ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in.ಮೂಲಕ ಮಾಹಿತಿ ಪಡೆಯಬಹುದು ಅಥವಾ 9663118112 ಮೊಬೈಲ ಸಂಖ್ಯೆಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕಾಡಾ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು,
ವಿಭಾಗ–3, ಚಿಕ್ಕೋಡಿ.

DIPR/BGM/RO-NO-1351/KSMCA/2024-25


BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 269, Postal Reg No. PMG/KA/NK/BM/135/22-24 / POST AT Vantamury Colony Post Office